ಶುಕ್ರವಾರ, ಡಿಸೆಂಬರ್ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 346 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ವಕೀಲರ ರಕ್ಷಣಾ ಕಾಯ್ದೆಗೆ ಅಗ್ರಹ ಸರಿಯೆಷ್ಟು, ತಪ್ಪೆಷ್ಟು?
ಜ.24ರಿಂದ ಜೆಇಇ-ಮೇನ್ 7
ಕಾಶ್ಮೀರ ಪ್ರಸ್ತಾಪ: ಪಾಕ್‌ಗೆ ಭಾರತ ತಿರುಗೇಟು 4
ಇಂದು ಸಿನಿಮಾ ಪುರವಣಿ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,799	18,415	₹55,750 (ಬೆಂಗಳೂರು)	₹69,200 (ಬೆಂಗಳೂರು)	82.76


ಚಿನ್ನದ ದರ ₹450 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹ 420ರಷ್ಟು ಇಳಿಕೆ ಕಂಡು ₹54,554ರಂತೆ ಮಾರಾಟ ವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹869ರಷ್ಟು ಇಳಿಕೆಯಾಗಿ ಕೆ.ಜಿಗೆ ₹68,254ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರಿಂದ ದೇಶದ ಚಿನಿವಾರ ಪೇಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಬಿಸಿ ಮೀಸಲಾತಿ: ಮಾರ್ಚ್ 31ರವರೆಗೆ ಕಾಲಾವಕಾಶ

ಸ್ಥಳೀಯ ಚುನಾವಣೆ ಮತ್ತಷ್ಟು ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ರಾಜಕೀಯ ಪ್ರಾತಿನಿಧ್ಯವನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕರ್ನಾಟಕ ಸರ್ಕಾರಕ್ಕೆ ಮಾರ್ಚ್ 31ರವರೆಗೆ ಸುಪ್ರೀಂ ಕೋರ್ಟ್ ಕಾಲಾವಕಾಶ ನೀಡಿದೆ.

ಈ ಬೆಳವಣಿಗೆಯಿಂದಾಗಿ ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇದೆ.

ಬಿಬಿಎಂಪಿ ವಾರ್ಡ್‌ಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 33 ರಷ್ಟು ಸೀಟುಗಳನ್ನು ಮೀಸಲಿಡುವ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ಇತರ ಪ್ರತಿವಾದಿಗಳಿಗೆ ಸುಪ್ರೀಂ ಕೋರ್ಟ್ ಕಳೆದ ಶುಕ್ರವಾರ ನೋಟಿಸ್ ಜಾರಿ ಮಾಡಿತ್ತು. ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠವು ಗುರುವಾರ ಪ್ರಕರಣದ ವಿಚಾರಣೆ ನಡೆಸಿತು. ಈ ವೇಳೆ, ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಮೀಸಲಾತಿ ನಿಗದಿಪಡಿಸಲು ಪ್ರಾಯೋಗಿಕ ದತ್ತಾಂಶ ಸಂಗ್ರಹ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ನಡೆಸಲು ಆಯೋಗ ನೇಮಿಸಲಾಗಿದೆ' ಎಂದರು.



> ಒಬಿಸಿಗಳಿಗೆ ಪ್ರಾತಿನಿಧ್ಯ ನೀಡಲು ಇದೊಂದು ಅವಕಾಶ. ಅವರಿಗೆ ಪ್ರಾತಿನಿಧ್ಯ ಸಿಗಲಿ. ಸ್ವಲ್ಪ ಕಾಲಾವಕಾಶ ಕೊಡಿ. ಒಂದು ವೇಳೆ ಈಗಲೇ ಚುನಾವಣೆ ನಡೆದರೆ ಒಬಿಸಿಗಳಿಗೆ ಪ್ರಾತಿನಿಧ್ಯ ಸಿಗುವುದಿಲ್ಲ
> **ಸುಪ್ರೀಂ ಕೋರ್ಟ್**

ಇದರಿಂದಾಗಿ ಚುನಾವಣಾ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ವಕೀಲರು ಗಮನ ಸೆಳೆದರು.

ವಿಳಂಬದ ಬಗ್ಗೆ ಚುನಾವಣಾ ಆಯೋಗ ಚಿಂತಿಸಬಾರದು ಎಂದು ಮೆಹ್ತಾ ಹೇಳಿದರು. ಕರ್ನಾಟಕ ಹೈಕೋರ್ಟ್‌ನ ಆದೇಶದ ನಂತರ, ಒಬಿಸಿಗಳಿಗೆ ಮೀಸಲಾತಿ ನೀಡಲು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಟ್ರಿಪಲ್ ಟೆಸ್ಟ್ (ಮೂರು ಹಂತದ ಪರಿಶೀಲನೆ) ಮಾನದಂಡ ಅನುಸರಿಸಲು ಹೊಸ ಕಸರತ್ತು ನಡೆಸಲಾಗುತ್ತಿದೆ ಎಂದೂ ಹೇಳಿದರು.

ಬಿಬಿಎಂಪಿಯ 243 ವಾರ್ಡ್‌ಗಳಲ್ಲಿ ಶೇ 33ರಷ್ಟು ಒಬಿಸಿ ಕೋಟಾ ನಿಗದಿಪಡಿಸಲು ರಾಜ್ಯ ಸರ್ಕಾರ ಆಗಸ್ಟ್ 16ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಕರ್ನಾಟಕ ಹೈಕೋರ್ಟ್ ಅಕ್ಟೋಬರ್‌ನಲ್ಲಿ ರದ್ದುಗೊಳಿಸಿತ್ತು. ಈ ಮೀಸಲು ನಿಗದಿ ನಿರ್ಧಾರವನ್ನು ಕೇವಲ ಕಾಲ್ಪನಿಕ ದತ್ತಾಂಶಗಳನ್ನು ಆಧರಿಸಿ ತೆಗೆದುಕೊಳ್ಳಲಾಗಿದೆ. ಯಾವುದೇ ವೈಜ್ಞಾನಿಕ ಪ್ರಕ್ರಿಯೆಗಳನ್ನು ನಡೆಸಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.

ಮುಖ್ಯಾಂಶಗಳು

- ಹೈಕೋರ್ಟ್ ಆದೇಶದ ಸಿಂಧುತ್ವ ಪ್ರಶ್ನಿಸಿ ಮೇಲ್ಮನವಿ
- ವಿಳಂಬದ ಬಗ್ಗೆ ಚುನಾವಣಾ ಆಯೋಗಕ್ಕೆ ಚಿಂತೆ ಬೇಡ: ತುಷಾರ್ ಮೆಹ್ತಾ

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಕೆ.ಭಕ್ತವತ್ಸಲ ನೇತೃತ್ವದ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಆದರೆ, ಇದು ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮೂರು ಹಂತದ ಪರಿಶೀಲನೆಗೆ ವಿರುದ್ಧವಾಗಿದೆ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅವಧಿ 2020ರ ಸೆಪ್ಟೆಂಬರ್ 10ರಂದು ಕೊನೆಗೊಂಡಿದೆ.

ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ, 2020ರ ಡಿಸೆಂಬರ್ 4ರಂದು ರಾಜ್ಯ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ–2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಸಂಬಂಧ, ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲೆಂದೇ ನೂತನ ಕಾನೂನನ್ನು ಅಂಗೀಕರಿಸಲಾಗಿದೆ ಎಂದು ಮೇಲ್ಮನವಿಯಲ್ಲಿ ಹೇಳಿತ್ತು.

ಈ ವರ್ಷದ ಮೇ ತಿಂಗಳಲ್ಲಿ ಆದೇಶ ಹೊರಡಿಸಿದ್ದ ಸುಪ್ರೀಂ ಕೋರ್ಟ್, ಒಬಿಸಿಗಳಿಗೆ ಮೀಸಲಾತಿ ಒದಗಿಸುವಾಗ ಮೂರು ಹಂತದ ಪರಿಶೀಲನೆ (ಟ್ರಿಪಲ್ ಟೆಸ್ಟ್) ಮಾಡಬೇಕು ಎಂದು ಸೂಚಿಸಿತ್ತು.

'ಬಿಬಿಎಂಪಿಯ 243 ವಾರ್ಡ್‌ಗಳಿಗೆ ನವೆಂಬರ್ 30ರೊಳಗೆ ಮೀಸಲಾತಿ ನಿಗದಿಪಡಿಸಬೇಕು ಹಾಗೂ ಡಿಸೆಂಬರ್ 31ರೊಳಗೆ ಚುನಾವಣೆ ನಡೆಸಬೇಕು' ಎಂದು 2022ರ ಸೆಪ್ಟೆಂಬರ್ 30ರಂದು ಹೈಕೋರ್ಟ್ ಆದೇಶಿಸಿತ್ತು. ಆದರೆ, ಈ ಆದೇಶ ಪಾಲನೆಗೆ ಮೂರು ತಿಂಗಳ ಕಾಲ ಅವಧಿ ವಿಸ್ತರಿಸಬೇಕು ಎಂದು ಕೋರಿ ನಗರಾಭಿವೃದ್ಧಿ ಇಲಾಖೆ ಇತ್ತೀಚೆಗೆ ಮನವಿ ಮಾಡಿದೆ.

'ಸಾಂದರ್ಭಿಕ ಸಾಕ್ಷ್ಯದ ಆಧಾರ: ಸರ್ಕಾರಿ ಅಧಿಕಾರಿಗೆ ಶಿಕ್ಷೆ ಸಾಧ್ಯ'

ನವದೆಹಲಿ (ಪಿಟಿಐ): 'ಅಕ್ರಮ ಗಳಿಕೆ ಅಥವಾ ಲಂಚದ ಆರೋಪ ಎದುರಿಸುತ್ತಿರುವ ಸರ್ಕಾರಿ ನೌಕರ ಇಲ್ಲವೇ ಅಧಿಕಾರಿ ವಿರುದ್ಧ ಮೌಖಿಕ ಸಾಕ್ಷ್ಯ ಅಥವಾ ಸೂಕ್ತ ದಾಖಲೆಗಳು ಲಭ್ಯವಿಲ್ಲದಿದ್ದಾಗ ಸಾಂದರ್ಭಿಕ ಪುರಾವೆಗಳ ಆಧಾರದಲ್ಲೇ ಅವರನ್ನು ಶಿಕ್ಷೆಗೆ ಗುರಿಪಡಿಸಬಹುದು' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ನ್ಯಾಯಪೀಠವು ಗುರುವಾರ ಈ ಕುರಿತ ವಿಚಾರಣೆ ನಡೆಸಿತು.

'ಅರ್ಜಿದಾರರು ಹಾಗೂ ಪ್ರಾಸಿಕ್ಯೂಷನ್ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಹಾಗಾದಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬಹುದು. ಆ ಮೂಲಕ ಆಡಳಿತ ಹಾಗೂ ಪ್ರಭುತ್ವವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಬಹುದು' ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಎ.ಎಸ್. ಬೋಪಣ್ಣ, ವಿ.ರಾಮಸುಬ್ರಮಣಿಯನ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ತಿಳಿಸಿತು.

'ನಿಧನ ಅಥವಾ ಇನ್ನಿತರ ಕಾರಣಗಳಿಂದಾಗಿ ದೂರುದಾರ ನೇರವಾಗಿ ಸಾಕ್ಷ್ಯ ಹೇಳಲು ಲಭ್ಯವಿಲ್ಲದಿದ್ದರೂ ಕೂಡ ಭ್ರಷ್ಟ ಅಧಿಕಾರಿಗಳನ್ನು ಸಂಬಂಧಪಟ್ಟ ನಿಬಂಧನೆಗಳ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸಬಹುದು' ಎಂದು ನ್ಯಾಯಪೀಠ ಹೇಳಿದೆ.

'ವಿವಿಧ ಕಾರಣಗಳಿಂದಾಗಿ ವಿಚಾರಣೆ ವೇಳೆ ದೂರುದಾರನು ತನ್ನ ಬಳಿ ಇರುವ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ಒದಗಿಸಲು ಸಾಧ್ಯವಾಗದೆ ಹೋದರೆ, ಇತರೆ ಯಾವುದೇ ಸಾಕ್ಷಿ ಒದಗಿಸುವ ಮೌಖಿಕ ಅಥವಾ ದಾಖಲೆ ರೂಪದ ಪುರಾವೆಗಳನ್ನು ಪರಿಗಣಿಸಬಹುದು. ಇಲ್ಲವೇ ಸಾಂದರ್ಭಿಕ ಸಾಕ್ಷ್ಯದ ಆಧಾರದಲ್ಲಿ ಅಧಿಕಾರಿ ಅಥವಾ ನೌಕರನ ಮೇಲಿನ ಆರೋಪವನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಬಹುದು' ಎಂದಿದೆ.

ರಸ್ತೆ ಗುಂಡಿ: ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ಗುಂಡಿಗಳ ಕಾರಣಕ್ಕೆ ಸಂಭವಿಸುವ ಅಪಘಾತಗಳಲ್ಲಿ ಸಾವು-ನೋವು ಉಂಟಾದ ಬಗ್ಗೆ ಸಾರ್ವಜನಿಕರು ದೂರು ಸಲ್ಲಿಸಲು ಮುಂದಾದರೆ ಯಾವುದೇ ಕಾರಣ ನೀಡದೆ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಬೇಕು' ಎಂದು ಹೈಕೋರ್ಟ್ ಪೊಲೀಸರಿಗೆ ನಿರ್ದೇಶಿಸಿದೆ.

ಈ ಸಂಬಂಧ 2015ರಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ರಾಜ್ಯ ಗೃಹ ಇಲಾಖೆಯನ್ನೂ ಪ್ರತಿವಾದಿಯಾಗಿ ಸೇರ್ಪಡೆ ಮಾಡುವಂತೆ ಅರ್ಜಿದಾರರಿಗೆ ಸೂಚಿಸಿತು.

'ಗುಂಡಿ ಇರುವ ರಸ್ತೆಗಳು ಮತ್ತು ರಸ್ತೆಗಳ ಕಳಪೆ ನಿರ್ವಹಣೆಯಿಂದ ಸಾರ್ವಜನಿಕರಿಗೆ ಗಂಭೀರ ಗಾಯ ಅಥವಾ ಸಾವು ಸಂಭವಿಸಿದ ಕುರಿತು ಸಾರ್ವಜನಿಕರು ದೂರು ನೀಡಲು ಮುಂದಾದರೂ ಬಹುತೇಕ ಸಂದರ್ಭಗಳಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಲು ಹಿಂಜರಿಯುತ್ತಿದ್ದಾರೆ. ದೂರು ಸಲ್ಲಿಸಲು ಬರುವವರನ್ನು ಪೊಲೀಸ್ ಅಧಿಕಾರಿಗಳು ವಾಪಸು ಕಳುಹಿಸಬಾರದು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

‘ಅದ್ವಿತೀಯ’ ಮೂರನೇ ಆವೃತ್ತಿ ಇಂದಿನಿಂದ

ಬೆಂಗಳೂರು: ವಿಶ್ವವಿದ್ಯಾಲಯದ ಕಾನೂನು ಕಾಲೇಜಿನ ‘ಮಾದರಿ ವಿಶ್ವಸಂಸ್ಥೆ- ಅದ್ವಿತೀಯ’ ಮೂರನೇ ಆವೃತ್ತಿಯ ಕಾರ್ಯಕ್ರಮ ಡಿ.16ರಿಂದ 18ರವರೆಗೆ ನಡೆಯಲಿದೆ.

ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ಕಾನೂನು ಕಾಲೇಜಿನ 'ಡಿಬೆಟಿಂಗ್ ಸೊಸೈಟಿ' ಈ ಕಾರ್ಯಕ್ರಮವನ್ನು ಆಯೋಜಿಸಿವೆ.

ಡಿ.16ರಂದು ಬೆಳಿಗ್ಗೆ 10ಕ್ಕೆ ಜ್ಞಾನಭಾರತಿ ಆವರಣದ ಎಚ್.ಎನ್. ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. ವಿಶ್ವವಿದ್ಯಾಲಯದ ಕಾನೂನು ಕಾಲೇಜಿನ ಡೀನ್ ಪ್ರೊ. ಡಾ. ಸುರೇಶ್ ನಾಡಗೌಡರ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ.ಎಸ್. ಎಂ. ಜಯಕರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎನ್‌ಎಲ್‌ಎಸ್‌ಐಯು ಕುಲಪತಿ ಪ್ರೊ. ಡಾ. ಸುಧೀರ್ ಕೃಷ್ಣಸ್ವಾಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

19.5 ಟನ್ ಪ್ಲಾಸ್ಟಿಕ್ ವಶ, ₹70 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಪದ್ಮನಾಭ ನಗರದಲ್ಲಿ ಒಂದು ಲಾರಿ ಹಾಗೂ ಚಿಕ್ಕಪೇಟೆ ವ್ಯಾಪ್ತಿಯಲ್ಲಿ ಎರಡು ಲಾರಿಗಳಲ್ಲಿದ್ದ ಸುಮಾರು 19.5 ಟನ್ ಏಕಬಳಕೆ ಪ್ಲಾಸ್ಟಿಕ್ ಕವರ್‌ಗಳನ್ನು ಜಪ್ತಿ ಮಾಡಿ, ₹70 ಸಾವಿರ ದಂಡ ವಿಧಿಸಲಾಗಿದೆ.

ಪದ್ಮನಾಭನಗರ ವ್ಯಾಪ್ತಿಯಲ್ಲಿ ಗುರುವಾರ ಮುಂಜಾನೆ ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದ ಲಾರಿಯನ್ನು ವಶಪಡಿಸಿಕೊಂಡು ಪರಿಶೀಲಿಸಲಾಯಿತು. ಗುಜಾರಾತಿನಿಂದ ಎಂ.ಎಸ್.ಲಾಜಿಸ್ಟಿಕ್‌ನಿಂದ ಬೆಂಗಳೂರಿಗೆ ಬಂದಿದ್ದ ಲಾರಿಯಲ್ಲಿ 12 ಟನ್‌ಗಳಷ್ಟು ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಕವರ್ ಇತ್ತು. ದಕ್ಷಿಣ ವಲಯದ ಘನತ್ಯಾಜ್ಯ ನಿರ್ವಹಣೆಯ ಅಧೀಕ್ಷಕ ಎಂಜಿನಿಯರ್ ವಿಶ್ವನಾಥ್ ನೇತೃತ್ವದಲ್ಲಿ ಇದನ್ನು ವಶಪಡಿಸಿಕೊಳ್ಳಲಾಗಿದೆ.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ದಕ್ಷಿಣ ವಲಯದ ಮಾರ್ಷಲ್‌ಗಳ ಸಹಾಯದಿಂದ 7.5 ಟನ್ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ಸಾಗಿಸುತ್ತಿದ್ದ ಎಂ.ಎಸ್ ಲಾಜಿಸ್ಟಿಕ್ಸ್‌ನ ಎರಡು ಲಾರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ದಕ್ಷಿಣ ವಲಯದ ಎಇಇ ರಂಗಸ್ವಾಮಿ, ಮಾರ್ಷಲ್‌ಗಳು ₹70 ಸಾವಿರ ದಂಡ ವಿಧಿಸಿದ್ದಾರೆ.

ಶಾಲಾ ಹಂತದಲ್ಲೇ ಕಲಿಕಾ ಸಾಮರ್ಥ್ಯವರ್ಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸುವ ವಾರ್ಷಿಕ ಪರೀಕ್ಷೆಯಲ್ಲಿ ಶೇಕಡ 35ಕ್ಕಿಂತ ಕಡಿಮೆ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಶಾಲಾ ಹಂತದಲ್ಲೇ ಪರಿಹಾರ ಬೋಧನೆ ಮೂಲಕ ಕಲಿಕಾ ಸಾಮರ್ಥ್ಯ ಉತ್ತಮಪಡಿಸಲಾಗುವುದು ಎಂದು ಪ್ರಾಥಮಿಕ ಶಿಕ್ಷಣ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ಷಿಕ ಪರೀಕ್ಷೆ ಕುರಿತು ಸೋಮವಾರ ಹೊರಡಿಸಿದ್ದ ಪ್ರಕಟಣೆಯಲ್ಲಿ, 'ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಪರಿಹಾರ ಬೋಧನೆ ಮೂಲಕ ಕಲಿಕಾ ಸಾಮರ್ಥ್ಯ ಉತ್ತಮಪಡಿಸಿ ಎರಡು ಪೂರಕ ಪರೀಕ್ಷೆಗಳನ್ನು ನಡೆಸಲಾಗುವುದು' ಎಂದು ತಿಳಿಸಲಾಗಿತ್ತು. ಈ ಕುರಿತು ಸ್ಪಷ್ಟನೆ ನೀಡಿರುವ ಆಯುಕ್ತರು, ಪರಿಹಾರ ಬೋಧನೆ ಮಾತ್ರ ನಡೆಯಲಿದೆ ಎಂದು ತಿಳಿಸಿದ್ದಾರೆ.

5 ಮತ್ತು 8ನೇ ತರಗತಿಗಳ ಪರೀಕ್ಷೆಗಳಿಗೆ ಮೌಲ್ಯಮಾಪನ ಕೇಂದ್ರಗಳ ಸ್ಥಾಪನೆಯನ್ನು 2023ರ ಫೆಬ್ರುವರಿ 30ರಂದು ನಡೆಸಬೇಕು ಎಂದು ಹಿಂದಿನ ಪ್ರಕಟಣೆಯಲ್ಲಿ ತಪ್ಪಾಗಿ ತಿಳಿಸಲಾಗಿತ್ತು. ಈ ಪ್ರಕ್ರಿಯೆ ಫೆಬ್ರುವರಿ 20ರಂದು ನಡೆಯಲಿದೆ ಎಂದು ಈ ವೇಳೆ ಮಾಹಿತಿ ನೀಡಿದರು.

'ನಿರ್ಮಾಣ ವೆಚ್ಚ ಶೇ 8ರಷ್ಟು ಕಡಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಂತರ ಶೇ 28ರಷ್ಟು ಹೆಚ್ಚಾಗಿದ್ದ ನಿರ್ಮಾಣ ವೆಚ್ಚ, ಮಾರ್ಚ್‌ನಿಂದ ಶೇ 8ರಷ್ಟು ಕಡಿಮೆಯಾಗಿದ್ದು, ಸ್ಥಿರವಾಗಿದೆ ಎಂದು ಕೊಲ್ಯೆಯರ್ಸ್‌ನ ಏಷ್ಯಾದ ಮಾರುಕಟ್ಟೆ ಅಭಿವೃದ್ಧಿಯ ಭಾರತದ ಸಿಇಒ ರಮೇಶ್ ನಾಯರ್ ಹೇಳಿದ್ದಾರೆ.

2021ರ ನವೆಂಬರ್‌ಗೆ ಹೋಲಿಸಿದರೆ 2022ರ ನವೆಂಬರ್‌ನಲ್ಲಿ ನಿರ್ಮಾಣ ವೆಚ್ಚ ಶೇ 28ರಷ್ಟು ಹೆಚ್ಚಾಗಿತ್ತು. ನಿರ್ಮಾಣದ ಪ್ರಮುಖ ಸಾಮಗ್ರಿಗಳ ವೆಚ್ಚ ಮೂರು ವರ್ಷ ಅವಧಿಯಲ್ಲಿ ಶೇ 32ರಷ್ಟು ಹೆಚ್ಚಾಗಿತ್ತು. ರಫ್ತು ಕಡಿತ ಹಾಗೂ ಆಮದು ತೆರಿಗೆಯನ್ನು ಸರ್ಕಾರ ಕಡಿತಗೊಳಿಸಿರುವುದರಿಂದ ಕಚ್ಚಾ ಸಾಮಗ್ರಿಗಳ ವೆಚ್ಚ ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ.

ಸಿಮೆಂಟ್, ಕಬ್ಬಿಣ, ಅಲ್ಯೂಮಿನಿಯಂ, ತಾಮ್ರ ಸೇರಿದಂತೆ ಪ್ರಮುಖ ಸಾಮಗ್ರಿಗಳ ವೆಚ್ಚ ಗಣನೀಯವಾಗಿ ಹೆಚ್ಚಾಗಿ ಡೆವಲಪರ್‌ಗಳು ಸವಾಲು ಎದುರಿಸಿದ್ದರು ಎಂದು ಹೇಳಿದ್ದಾರೆ.

'ಡೆವಲಪರ್‌ಗಳು ಯೋಜನೆಯಂತೆ ತಮ್ಮ ಕಟ್ಟಡಗಳನ್ನು ಮುನ್ನ ಅಥವಾ ಬೇಡಿಕೆಗನುಗುಣವಾಗಿ ಪೂರ್ಣಗೊಳಿಸಲು ಯೋಜಿಸಿದ್ದಾರೆ. ಸಾಮಗ್ರಿಗಳನ್ನು ಅವರು ಹೆಚ್ಚು ದಾಸ್ತಾನು ಮಾಡಿಕೊಂಡಿದ್ದಾರೆ' ಎಂದು ಕೊಲ್ಯೆಯರ್ಸ್‌ನ ಮುಖ್ಯ ತಾಂತ್ರಿಕ ಅಧಿಕಾರಿ ಜತಿನ್ ಶಾ ತಿಳಿಸಿದ್ದಾರೆ.

ವಸತಿ ಯೋಜನೆಗಳವೆಚ್ಚ 2020ರ 3ನೇ ತ್ರೈ ಮಾಸಿಕದಲ್ಲಿ ಶೆ 6ರಷ್ಟು ಹೆಚ್ಚಾಗಿದೆ. ಇಂದಿನ ಮಾರುಕಟ್ಟೆಯ ಸ್ಥಿತಿ ನೋಡಿದರೆ ಮುಂದಿನ ಕೆಲವು ತ್ರೈಮಾಸಿಕದಲ್ಲಿ ವೆಚ್ಚ ಸ್ಥಿರವಾಗಿರುತ್ತದೆ' ಎಂದು ಕೊಲ್ಯೆಯರ್ಸ್‌ನ ಹಿರಿಯ ನಿರ್ದೇಶಕ ವಿಮಲ್ ನದಾರ್ ಹೇಳಿದ್ದಾರೆ.

ಶಿಕ್ಷಣದ ಭಾಗವಾಗಿ ಹಣಕಾಸು ನಿರ್ವಹಣೆ: ತೇಜಸ್ವಿ ಸೂರ್ಯ

ನವದೆಹಲಿ: ಶಾಲೆ ಮತ್ತು ಕಾಲೇಜುಗಳಲ್ಲಿ ಹಣಕಾಸು ನಿರ್ವಹಣೆ, ಆರ್ಥಿಕ ಸಾಕ್ಷರತೆ ವಿಷಯಗಳಿಗೆ ಒತ್ತು ನೀಡುವಂತೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದರು.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಈ ವಿಷಯದ ಕುರಿತು ಗಮನ ಸೆಳೆದಿರುವ ಅವರು, 'ಭಾರತದ ಯುವಜನತೆ ಹೆಚ್ಚಿನ ಪ್ರಮಾಣದಲ್ಲಿ ಔದ್ಯೋಗಿಕ ರಂಗದಲ್ಲಿ ಗಣನೀಯ ಪ್ರಮಾಣದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆರ್ಥಿಕ ಸಾಕ್ಷರತೆಯು ಅವರಲ್ಲಿ ಭವಿಷ್ಯದ ಹಣಕಾಸು ನಿರ್ವಹಣೆಗೆ ಅನುಕೂಲ ಕಲ್ಪಿಸುವುದರ ಜೊತೆಗೆ, ಸಾಲದ ಸುಳಿ, ನಕಲಿ, ಹಣಕಾಸು ವಂಚನೆಗೆ ಒಳಗಾಗುವುದನ್ನು ತಪ್ಪಿಸಲು ಸಹಕಾರಿಯಾಗಲಿದೆ' ಎಂದರು.

17ರಿಂದ ಅಂತರರಾಷ್ಟ್ರೀಯ ಪನೋರಮ ಚಲನಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಿಲ್ಮಿಹಾಲಿಕ್ ಫೌಂಡೇಷನ್ ವತಿಯಿಂದ 'ಅಂತರರಾಷ್ಟ್ರೀಯ ಪನೋರಮ ಚಲನಚಿತ್ರೋತ್ಸವ'ವನ್ನು ಡಿ. 17, 18ರಂದು ಅರಮನೆ ರಸ್ತೆಯ ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

'ಮಕ್ಕಳು ಮತ್ತು ಪ್ರಾದೇಶಿಕತೆಗೆ ಸಂಬಂಧಿಸಿದ ಕನ್ನಡ, ಬಾಂಗ್ಲಾ, ಕೊಡವ, ಜಪಾನಿ ಸೇರಿ ಹಲವು ಭಾಷೆಗಳ 100ಕ್ಕೂ ಅಧಿಕ ಚಲನಚಿತ್ರಗಳು ಆಯ್ಕೆಗೆ ಲಭ್ಯವಿದ್ದು, ಅದರಲ್ಲಿ ಎಂಟು ಅತ್ಯುತ್ತಮ ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು' ಎಂದು ಸಂಸ್ಥೆಯ ಸಂಸ್ಥಾಪಕ ಆದಿತ್ಯ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಈ ಚಲನಚಿತ್ರೋತ್ಸವದಲ್ಲಿ ಎಲ್ಲರಿಗೂ ಉಚಿತ ಪ್ರವೇಶವಿದ್ದು, ಆಸಕ್ತರು ಡಿ. 16ರೊಳಗೆ 9986384254 ವ್ಯಾಟ್ಸ್‌ಆ್ಯಪ್ ಸಂಖ್ಯೆ ಸಂಪರ್ಕಿಸಿ ನೋಂದಾಯಿಸಿಕೊಳ್ಳಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡುವ ವೇಳೆ ಮಾಹಿತಿ ನೀಡಿದ್ದಾರೆ.

ಟ್ರ್ಯಾಕ್ಟರ್ ಏರಿ ಆಟ: ಟ್ರೇಲರ್ ತಗುಲಿ ಬಾಲಕ ಸಾವು

ಬೆಂಗಳೂರು: ನಿಂತಿದ್ದ ಟ್ರ್ಯಾಕ್ಟರ್ ಏರಿ ಆಟವಾಡಲು ಹೋಗಿದ್ದ ಬಾಲಕ ತಮೋಜ್ಞ ಎಂಬಾತ ಟ್ರೇಲರ್ ತಗುಲಿ ಮೃತಪಟ್ಟಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಐದೂವರೆ ವರ್ಷದ ಬಾಲಕ ತಮೋಜ್ಞ, ಚಿಕ್ಕ ಬೆಳ್ಳಂದೂರು ಬಳಿಯ ಕಾನ್ವೆಂಟ್‌ನಲ್ಲಿ ಯು.ಕೆ.ಜಿ ಓದುತ್ತಿದ್ದ. ಕಾನ್ವೆಂಟ್ ಸಮೀಪದ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ದುರಸ್ತಿ ಕಾಮಗಾರಿ ನಡೆಸಲಾಗುತ್ತಿದ್ದು, ಟ್ರ್ಯಾಕ್ಟರ್ ಬಳಸಲಾಗುತ್ತಿತ್ತು. ಮಳೆ ಸುರಿದಿದ್ದರಿಂದ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಲಾಗಿತ್ತು. ಚಾಲಕ ಟ್ರ್ಯಾಕ್ಟರ್ ರಸ್ತೆಯಲ್ಲಿ ನಿಲ್ಲಿಸಿ ಕೀಯನ್ನು ಮರೆತು ಟ್ರ್ಯಾಕ್ಟರ್‌ನಲ್ಲೇ ಬಿಟ್ಟು ಮನೆಗೆ ಹೋಗಿದ್ದ. ಟ್ರ್ಯಾಕ್ಟರ್ ಸಹ ಒಂದನೇ ಗೇರ್‌ನಲ್ಲಿತ್ತು’ ಎಂದು ಸಂಚಾರ ಪೊಲೀಸರು ಹೇಳಿದರು.

‘ಡಿ. 13ರಂದು ಕಾನ್ವೆಂಟ್ ರಸ್ತೆಯಲ್ಲಿ ನಿಂತಿದ್ದ ಟ್ರ್ಯಾಕ್ಟರ್ ಏರಿದ್ದ ಬಾಲಕ, ಅದರಲ್ಲಿದ್ದ ಕೀ ಆನ್ ಮಾಡಿದ್ದ. ಮುಂದಿನ ಚಕ್ರ ಗುಂಡಿಯೊಳಗೆ ಇಳಿದು ಟ್ರ್ಯಾಕ್ಟರ್ ಭಾಗಶಃ ಬಾಗಿತ್ತು. ಇದೇ ವೇಳೆ ಬಾಲಕ ತಮೋಜ್ಞ, ಹಿಮ್ಮುಖವಾಗಿ ಬಿದ್ದಿದ್ದ. ಆತನ ತಲೆಗೆ ಟ್ರೇಲರ್ ತಗುಲಿ ತೀವ್ರ ಪೆಟ್ಟಾಗಿತ್ತು. ಸ್ಥಳೀಯರು, ಬಾಲಕನನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆ ಫಲಿಸದೇ ಬಾಲಕ ಅಸುನೀಗಿದ್ದಾನೆ’ ಎನ್ನಲಾಗಿದೆ.

ಚಾಲಕನ ವಿರುದ್ಧ ಪ್ರಕರಣ: ‘ಟ್ರ್ಯಾಕ್ಟರ್ ಒಂದನೇ ಗೇರ್‌ನಲ್ಲಿಟ್ಟು, ಕೀ ಸಹ ಅದರಲ್ಲೇ ಬಿಟ್ಟು ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಬಸ್ ಪ್ರಯಾಣಿಕರ ಆಭರಣ, ನಗದು ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರಿಬ್ಬರ ಚಿನ್ನಾಭರಣ ಮತ್ತು ನಗದು ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಹಾಗೂ ಹಲಸೂರು ಗೇಟ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

‘ತಮಿಳುನಾಡು ಸೇಲಂನ ಸೆಂಥಿಲ್ ಕುಮಾರ್ ಹಾಗೂ ನಾಗಸಂದ್ರದ ವಕೀಲರೊಬ್ಬರು ಪ್ರತ್ಯೇಕ ದೂರು ನೀಡಿದ್ದಾರೆ. ನಾಲ್ವರು ಮಹಿಳೆಯರು ಸೇರಿ ಐವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ರಾಜಹಂಸ ಬಸ್‌ನಲ್ಲಿ ಕಳ್ಳತನ: ‘ಸೆಂಥಿಲ್‌ಕುಮಾರ್ ಹಾಗೂ ಅವರ ಪತ್ನಿ ಇತ್ತೀಚೆಗೆ ನಗರಕ್ಕೆ ಬಂದಿದ್ದರು. ವಾಪಸ್ ಸೇಲಂಗೆ ಹೋಗಲು ಎಲೆಕ್ಟ್ರಾನಿಕ್ ಸಿಟಿ 2ನೇ ಹಂತ ಬಳಿಯ ಟೋಲ್‌ಗೇಟ್‌ನಲ್ಲಿ ನ. 5ರಂದು ಕೆಎಸ್‌ಆರ್‌ಟಿಸಿ ರಾಜಹಂಸ ಬಸ್ ಹತ್ತಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ನಾಲ್ವರು ಮಹಿಳೆಯರು ಸಹ ಅದೇ ಬಸ್ ಹತ್ತಿದ್ದರು. ಸೆಂಥಿಲ್‌ಕುಮಾರ್ ದಂಪತಿ ಕುಳಿತಿದ್ದ ಸೀಟಿನ ಪಕ್ಕದಲ್ಲೇ ಮಹಿಳೆಯರು ಕುಳಿತಿದ್ದರು. ಸೀಟಿನ ಕೆಳಗೆ ₹ 1 ನಾಣ್ಯ ಎಸೆದಿದ್ದ ಆರೋಪಿತ ಮಹಿಳೆಯರು, ಅದನ್ನು ತೆಗೆದುಕೊಂಡುವಂತೆ ಸೆಂಥಿಲ್‌ಕುಮಾರ್ ಪತ್ನಿಗೆ ಹೇಳಿದ್ದರು. ನಾಣ್ಯ ತೆಗೆದುಕೊಳ್ಳುವ ವೇಳೆಯಲ್ಲೇ ಆರೋಪಿಗಳು ಅವರ ಬ್ಯಾಗ್ ಕದ್ದಿದ್ದರು. ಅದಾದ ನಂತರ, ಮುಂದಿನ ನಿಲ್ದಾಣದಲ್ಲಿ ಆರೋಪಿಗಳು ಬಸ್‌ನಿಂದ ಇಳಿದುಹೋಗಿದ್ದಾರೆ’ ಎಂದು ಹೇಳಿವೆ.

ಜೇಬಿನಲ್ಲಿದ್ದ ₹ 50 ಸಾವಿರ ಕಳ್ಳತನ: ‘64 ವರ್ಷದ ವಕೀಲ, ಕಾವೇರಿ ಭವನದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಡಿ. 8ರಂದು ₹1.20 ಲಕ್ಷ ಡ್ರಾ ಮಾಡಿಕೊಂಡಿದ್ದರು. ಪ್ಯಾಂಟಿನ ಒಂದು ಜೇಬಿನಲ್ಲಿ ₹ 50 ಸಾವಿರ ಹಾಗೂ ಮತ್ತೊಂದು ಜೇಬಿನಲ್ಲಿ ₹ 70 ಸಾವಿರ ಇಟ್ಟುಕೊಂಡು ಕೆ.ಜಿ. ರಸ್ತೆಗೆ ಹೋಗಿದ್ದರು. 8ನೇ ಮೈಲಿಗೆ ಹೋಗಲು ಬಿಎಂಟಿಸಿ ಬಸ್ ಹತ್ತಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಸ್ಸಿನಲ್ಲಿ ಹೆಚ್ಚು ಪ್ರಯಾಣಿಕರಿದ್ದರು. ಅದರಲ್ಲೇ ತಳ್ಳಾಡಿಕೊಂಡು ವಕೀಲರು ಬಸ್‌ನೊಳಗೆ ಹತ್ತಿದ್ದರು. ಸ್ವಲ್ಪ ದೂರ ಹೋಗುತ್ತಿದ್ದಂತೆ ದಟ್ಟಣೆಯಲ್ಲಿ ಬಸ್ ನಿಂತುಕೊಂಡಿತ್ತು. ಇದೇ ವೇಳೆ ಒಂದು ಜೇಬಿನಲ್ಲಿ ನೋಡಿದಾಗ ₹ 50 ಸಾವಿರ ಹಣವಿರಲಿಲ್ಲ. ಬಸ್ಸಿನೊಳಗೆ ಹತ್ತುವಾಗಲೇ ಯಾರೂ ಹಣ ಕದ್ದಿದ್ದಾರೆಂದು ವಕೀಲ ದೂರಿನಲ್ಲಿ ತಿಳಿದ್ದಾರೆ’ ಎಂದು ಮೂಲಗಳು ಹೇಳಿವೆ.

ಕಾರು ಪಂಕ್ಚರ್ ಮಾಡಿ ₹ 3 ಲಕ್ಷ ಕದ್ದೊಯ್ದರು

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ಮಹಿಳಾ ಉದ್ಯಮಿಯೊಬ್ಬರ ಕಾರು ಪಂಕ್ಚರ್ ಮಾಡಿ ಗಮನ ಬೇರೆಡೆ ಸೆಳೆದು ₹ 3 ಲಕ್ಷ ಕಳ್ಳತನ ಮಾಡಲಾಗಿದೆ.

‘ಲಗ್ಗೆರೆ ನಿವಾಸಿಯಾಗಿರುವ 48 ವರ್ಷದ ಮಹಿಳಾ ಉದ್ಯಮಿ ಕಳ್ಳತನ ಬಗ್ಗೆ ದೂರು ನೀಡಿದ್ದಾರೆ. ಇಬ್ಬರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳಾ ಉದ್ಯಮಿ ಹಾಗೂ ಅವರ ಪತಿ, ರಾಜಾಜಿನಗರ ನವರಂಗ ವೃತ್ತ ಬಳಿಯ ಯೂನಿಯನ್ ಬ್ಯಾಂಕ್ ಶಾಖೆಗೆ ಕಾರಿನಲ್ಲಿ ಹೋಗಿದ್ದರು. ಚಾಲಕನನ್ನು ಕಾರಿನಲ್ಲಿ ಕೂರಿಸಿ ದಂಪತಿ ಮಾತ್ರ ಬ್ಯಾಂಕ್‌ನೊಳಗೆ ತೆರಳಿದ್ದರು. ಇವರಿಬ್ಬರನ್ನೂ ಹಿಂಬಾಲಿಸಿಕೊಂಡು ಆರೋಪಿಯೊಬ್ಬ ಬ್ಯಾಂಕ್‌ನೊಳಗೆ ಹೋಗಿದ್ದ. ಅದನ್ನು ನೋಡಿದ್ದ ಮಹಿಳಾ ಉದ್ಯಮಿಗೆ ಅನುಮಾನ ಬಂದಿತ್ತು. ಆದರೆ, ಹೆಚ್ಚು ತಲೆ ಕೆಡೆಸಿಕೊಂಡಿರಲಿಲ್ಲ.’

‘₹ 3 ಲಕ್ಷ ಹಣ ಡ್ರಾ ಮಾಡಿಕೊಂಡಿದ್ದ ಮಹಿಳಾ ಉದ್ಯಮಿ ಹಾಗೂ ಪತಿ, ಬ್ಯಾಂಕ್‌ನಿಂದ ಹೊರಬಂದು ಕಾರಿನಲ್ಲಿ ಕುಳಿತು ಮನೆಯತ್ತ ಹೊರಟಿದ್ದರು. ಆರೋಪಿಯೊಬ್ಬ ಬೈಕ್‌ನಲ್ಲಿ ಅವರ ಕಾರು ಹಿಂಬಾಲಿಸುತ್ತಿದ್ದ. ಶಂಕರಮಠ ಜಂಕ್ಷನ್ ಬಳಿ ಕಾರು ನಿಲ್ಲಿಸಿದ್ದ ಆರೋಪಿ, ‘ನಿಮ್ಮ ಕಾರಿನ ಚಕ್ರ ಪಂಕ್ಚರ್ ಆಗಿದೆ’ ಎಂದಿದ್ದ. ಕೆಳಗೆ ಇಳಿದು ಚಾಲಕ ಪರಿಶೀಲಿಸಿದಾಗ, ಪಂಕ್ಚರ್ ಗಮನಕ್ಕೆ ಬಂದಿತ್ತು. ನಂತರ, ಸಮೀಪದಲ್ಲೇ ಇದ್ದ ಪಂಕ್ಚರ್ ಅಂಗಡಿಯತ್ತ ಚಾಲಕ ಕಾರು ಚಲಾಯಿಸಿಕೊಂಡು ಹೋಗಿದ್ದ. ಆರೋಪಿಯು ಕಾರಿನ ಬಳಿಯೇ ಸುತ್ತಾಡುತ್ತಿದ್ದ.’

‘ಮಹಿಳಾ ಉದ್ಯಮಿ, ಅವರ ಪತಿ ಹಾಗೂ ಚಾಲಕ ಕಾರಿನಿಂದ ಇಳಿದಿದ್ದರು. ಇದೇ ಸಂದರ್ಭದಲ್ಲೇ ಮತ್ತೊಬ್ಬನನ್ನು ಸ್ಥಳಕ್ಕೆ ಕರೆಸಿದ್ದ ಆರೋಪಿ, ಕಾರಿನಲ್ಲಿದ್ದ ಹಣದ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಕ್ಯೂಆರ್ ಕೋಡ್ ವ್ಯವಸ್ಥೆ: ಅಭಿಪ್ರಾಯ ದಾಖಲಿಸಿದ 1,200 ಮಂದಿ

ಬೆಂಗಳೂರು: ಪೊಲೀಸರ ಕಾರ್ಯವೈಖರಿ ಬಗ್ಗೆ ಜನರ ಅಭಿಪ್ರಾಯ ಸಂಗ್ರಹಿಸಲು ಆಗ್ನೇಯ ವಿಭಾಗದ ಪೊಲೀಸರು ಕ್ಯೂಆರ್ ಕೋಡ್ ವ್ಯವಸ್ಥೆ ಜಾರಿಗೆ ತಂದಿದ್ದು, ಇದಕ್ಕೆ ಉತ್ತಮ ಸ್ಪಂದನ ವ್ಯಕ್ತವಾಗುತ್ತಿದೆ.

ವ್ಯವಸ್ಥೆ ಜಾರಿಗೆ ಬಂದ ಎರಡು ದಿನಗಳಲ್ಲಿ 14 ಪೊಲೀಸ್ ಠಾಣೆಗಳಿಗೆ ಸಂಬಂಧಪಟ್ಟಂತೆ 1,200 ಮಂದಿ ಅಭಿಪ್ರಾಯ ದಾಖಲಿಸಿದ್ದಾರೆ.

‘ಜನರ ಅಭಿಪ್ರಾಯಗಳನ್ನು ದಾಖಲಿಸಿಕೊಂಡು ಪರಿಶೀಲಿಸಲು ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದುವರೆಗೂ 1,200 ಮಂದಿ ಅಭಿಪ್ರಾಯ ತಿಳಿಸಿದ್ದಾರೆ. ಈ ಪೈಕಿ 800 ಮಂದಿ, ಪೊಲೀಸರ ಕೆಲಸವನ್ನು ಶ್ಲಾಘಿಸಿದ್ದಾರೆ. 401 ಮಂದಿ ಪೊಲೀಸರ ಕೆಲಸ ಹಾಗೂ ನಡವಳಿಕೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪೊಲೀಸರು ದೂರು ಸ್ವೀಕರಿಸುವುದಿಲ್ಲ. ಸುಖಾಸುಮ್ಮನೇ ಸಮಯ ವ್ಯರ್ಥ ಮಾಡುತ್ತಾರೆ. ಠಾಣೆಗೆ ಅಲೆದಾಡಿಸುತ್ತಾರೆ. ಹಲವರು, ಏಕವಚನದಲ್ಲಿ ಮಾತನಾಡುತ್ತಾರೆ. ಕೆಲವರಂತೂ ಖಾಕಿಯನ್ನು ಹಣ ವಸೂಲಿಗೆ ಬಳಸಿಕೊಳ್ಳುತ್ತಿದ್ದಾರೆ. ದೂರು ದಾಖಲಿಸಿದ ನಂತರ ತನಿಖೆ ಪ್ರಗತಿ ವಿಚಾರಿಸಿದರೆ, ಮಾಹಿತಿ ನೀಡುವುದಿಲ್ಲ’ ಎಂಬುದಾಗಿ ಹಲವರು ದೂರಿದ್ದಾರೆ’ ಎಂದು ಅಧಿಕಾರಿ ತಿಳಿಸಿದರು.

‘ಉತ್ತಮ ಅಭಿಪ್ರಾಯ ಬಾರದ ಠಾಣೆಗಳ ಸಿಬ್ಬಂದಿ ಮೇಲೆ ನಿಗಾ ವಹಿಸಲು ವಿಶೇಷ ತಂಡಕ್ಕೆ ತಿಳಿಸಲಾಗಿದೆ. ಅವರ ನಡವಳಿಕೆ ಯಥಾಪ್ರಕಾರ ಮುಂದುವರೆದರೆ ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

ನಮ್ಮ ಮೆಟ್ರೊ ಕಾಮಗಾರಿ: ಸಂಚಾರ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದ ಕಾಳೇನ ಅಗ್ರಹಾರ ನಿಲ್ದಾಣ ಕಾಮಗಾರಿ ನಡೆಯುತ್ತಿರುವುದರಿಂದ ಬನ್ನೇರುಘಟ್ಟ ಮುಖ್ಯರಸ್ತೆ ಸಂಪರ್ಕ ಕಲ್ಪಿಸುವ ಕೊತ್ತನೂರು ಅಡ್ಡರಸ್ತೆಯಲ್ಲಿ ವಾಹನ ಸಂಚಾರವನ್ನು ಡಿ.19ರಿಂದ ನಿಷೇಧಿಸಲಾಗಿದೆ.

ಕಾಮಗಾರಿ ನಡೆಯುತ್ತಿರುವುದರಿಂದ ಸುಗಮ ಸಂಚಾರಕ್ಕೆ ಅನುವಾಗಲು ಲೊಯೊಲಾ ಕಾಲೇಜು ಜಂಕ್ಷನ್‌ನಲ್ಲಿರುವ ಕೊತ್ತನೂರು ಅಡ್ಡರಸ್ತೆ ಸಂಚಾರ ನಿಷೇಧಿಸಲಾಗಿದೆ. ಪರ್ಯಾಯ ಮಾರ್ಗವನ್ನು ಸಂಚಾರ ಪೊಲೀಸರು ನಿಗದಿ ಮಾಡಿದ್ದಾರೆ ಎಂದು ‘ನಮ್ಮ ಮೆಟ್ರೊ’ದ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಸ್. ಯಶವಂತ್ ಚವ್ಹಾಣ್ ತಿಳಿಸಿದರು.

ಬನ್ನೇರುಘಟ್ಟದಿಂದ ಕೊತ್ತನೂರು ಕಡೆಗೆ ಸಂಚರಿಸುವವರು ಗೊಟ್ಟಿಗೆರೆಯಲ್ಲಿ ತಿರುವು ಪಡೆದು, ಜಂಬೂಸವಾರಿ ದಿನ್ನೆ ಮೂಲಕ ಬಿ.ಕೆ. ಸರ್ಕಲ್ ತಲುಪಬಹುದು. ಜಯದೇವ ಜಂಕ್ಷನ್‌ನಿಂದ ಕೊತ್ತನೂರು ಕಡೆಗೆ ಸಂಚರಿಸುವವರು ಅರೆಕೆರೆ ಜಂಕ್ಷನ್‌ನಲ್ಲಿ ತಿರುವು ಪಡೆದು ಬ್ರಿಗೇಡ್ ಮಿಲೇನಿಯಂ ರಸ್ತೆ, ಆರ್‌ಬಿಐ ಲೇಔಟ್ ಮೂಲಕ ಬಿ.ಕೆ. ಸರ್ಕಲ್ ತಲುಪಬಹುದು. ಬನ್ನೇರುಘಟ್ಟ ಮುಖ್ಯರಸ್ತೆಯ ವಾಹನ ಸಂಚಾರದಲ್ಲಿ ಬದಲಾವಣೆ ಇರುವುದಿಲ್ಲ ಎಂದು ಅವರು ಹೇಳಿದರು.

ನಕಲಿ ವೈದ್ಯ, ಫಾರ್ಮಾಸಿಸ್ಟ್ ಬಂಧನ

ಬೆಂಗಳೂರು: ಮಹಿಳೆಯೊಬ್ಬರಿಗೆ ಒಂದೇ ಬಾರಿ ಎರಡು ಚುಚ್ಚುಮದ್ದು ನೀಡಿ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡಿದ್ದ ಆರೋಪದಡಿ ನಕಲಿ ವೈದ್ಯ ಹಾಗೂ ಫಾರ್ಮಾಸಿಸ್ಟ್‌ನನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಮಾದೇಶ್ವರನಗರದ ನಾಗರಾಜ ಸವಣೂರ (55) ಹಾಗೂ ಕುಮಾರಸ್ವಾಮಿ (35) ಬಂಧಿತರು. ವೈದ್ಯಕೀಯ ವಿದ್ಯಾರ್ಹತೆ ಇಲ್ಲದಿದ್ದರೂ ಆರೋಪಿ ನಾಗರಾಜ್, ಸಹನಾ ಪಾಲಿ ಕ್ಲಿನಿಕ್ ತೆರೆದಿದ್ದ. ಕುಮಾರಸ್ವಾಮಿ, ಔಷಧಿ ಅಂಗಡಿ ನಡೆಸುತ್ತಿದ್ದ. ಆರೋಗ್ಯ ಸಮಸ್ಯೆ ಎಂದು ಹೇಳಿಕೊಂಡು ಬರುತ್ತಿದ್ದ ಜನರಿಗೆ ಸಂಬಂಧವೇ ಇಲ್ಲದೇ ಚುಚ್ಚುಮದ್ದು ಹಾಗೂ ಔಷಧ ನೀಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಗಾರ್ಮೆಂಟ್ಸ್ ಕಾರ್ಖಾನೆಯ ಉದ್ಯೋಗಿ ಜ್ಯೋತಿ ಎಂಬುವವರು ಸೆಪ್ಟೆಂಬರ್‌ನಲ್ಲಿ ಜ್ವರದಿಂದ ಬಳಲುತ್ತಿದ್ದರು. ಚಿಕಿತ್ಸೆ ಪಡೆಯಲೆಂದು ಆರೋಪಿಯ ಕ್ಲಿನಿಕ್‌ಗೆ ಹೋಗಿದ್ದರು. ತಪಾಸಣೆ ನಡೆಸಿದ್ದ ಆರೋಪಿ ನಾಗರಾಜ್, ಮಹಿಳೆಯ ಸೊಂಟದ ಭಾಗಕ್ಕೆ ಒಂದೇ ಬಾರಿ ಎರಡು ಚುಚ್ಚುಮದ್ದು ನೀಡಿ ಕಳುಹಿಸಿದ್ದ.’

‘ಚುಚ್ಚುಮದ್ದು ನೀಡಿದ್ದ ಸೊಂಟದ ಭಾಗದಲ್ಲಿ ಎರಡು ದಿನ ಬಿಟ್ಟು ರಕ್ತ ಹೆಪ್ಪುಗಟ್ಟಿ ನೋವು ಕಾಣಿಸಿಕೊಂಡಿತ್ತು. ಹೆದರಿದ್ದ ಮಹಿಳೆ ಪುನಃ ಆರೋಪಿಯ ಕ್ಲಿನಿಕ್‌ಗೆ ಹೋಗಿದ್ದರು. ತಪಾಸಣೆ ನಡೆಸಿದ್ದ ಆರೋಪಿ, ಯಾವುದೋ ಔಷಧ ಹಚ್ಚಿ ವಾಪಸು ಕಳುಹಿಸಿದ್ದ. ಅಷ್ಟಾದರೂ ನೋವು ಕಡಿಮೆಯಾಗಿರಲಿಲ್ಲ. ಕೆಲ ದಿನ ಬಿಟ್ಟು ಅದೇ ಜಾಗದಲ್ಲಿ ರಕ್ತಸ್ರಾವವಾಗಿತ್ತು. ಪುನಃ ಕ್ಲಿನಿಕ್‌ಗೆ ಹೋದಾಗ, ಬೇರೆ ಕಡೆ ತೋರಿಸುವಂತೆ ಆರೋಪಿ ಹೇಳಿದ್ದ’ ಎಂದು ಪೊಲೀಸರು ತಿಳಿಸಿದರು.

‘ಮಹಿಳೆ ಬೇರೆ ವೈದ್ಯರ ಬಳಿ ತೋರಿಸಿದಾಗ, ಶಸ್ತ್ರಚಿಕಿತ್ಸೆ ಮಾಡಬೇಕೆಂದು ಹೇಳಿದ್ದರು. ಬಳಿಕ, ಶಸ್ತ್ರಚಿಕಿತ್ಸೆ ಮಾಡಿಸಿದ್ದರು. ನಂತರವೇ ಠಾಣೆಗೆ ಬಂದು ನಕಲಿ ವೈದ್ಯ ಹಾಗೂ ಫಾರ್ಮಾಸಿಸ್ಟ್ ವಿರುದ್ಧ ದೂರು ನೀಡಿದ್ದರು. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಆಯುರ್ವೇದ್ ಕೋರ್ಸ್ ಮುಗಿಸಿರುವುದಾಗಿ ಹೇಳಿದರು. ಆದರೆ, ಯಾವುದೇ ದಾಖಲೆ ನೀಡಿರಲಿಲ್ಲ. ಜೊತೆಗೆ ಕ್ಲಿನಿಕ್ ನಡೆಸಲು ಅನುಮತಿ ಸಹ ಪಡೆದಿರಲಿಲ್ಲ. ಹೀಗಾಗಿ, ಇಬ್ಬರನ್ನು ಬಂಧಿಸಲಾಗಿದೆ. ಸದ್ಯ ನ್ಯಾಯಾಂಗ ಬಂಧನಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

ಅಡಿಗಾಸ್ ಯಾತ್ರಾ ಕೈಪಿಡಿ ಬಿಡುಗಡೆ



ಬೆಂಗಳೂರು: ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ‘ಅನುಭವಿ ಸೇವಾ ಪೂರೈಕೆದಾರ’ ಎನ್ನುವ ಮಾನ್ಯತೆ ಪಡೆದ ಅಡಿಗಾಸ್ ಯಾತ್ರಾ ಸಂಸ್ಥೆಯು ತನ್ನ 29ನೇ ವರ್ಷದ ಪ್ರವಾಸಿ ಕೈಪಿಡಿ ಬಿಡುಗಡೆ ಮಾಡಿದೆ.

ಕೈಪಿಡಿಯನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಇತ್ತೀಚಿಗೆ ಬಿಡುಗಡೆಗೊಳಿಸಿ ಮಾತನಾಡಿ ‘ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಡಿಗಾಸ್ ಯಾತ್ರಾ ಸಂಸ್ಥೆಯ ಇನ್ನೂ ಹೆಚ್ಚಿನ ಯಶಸ್ಸುಗಳಿಸಲಿ’ ಎಂದು ಶುಭ ಹಾರೈಸಿದರು.

ಈ ಪ್ರವಾಸಿ ಕೈಪಿಡಿಯಲ್ಲಿ 2023ನೇ ಸಾಲಿನಲ್ಲಿ ಯುರೋಪ್, ಯು.ಕೆ, ಸಿಂಗಪುರ, ಮಲೇಷ್ಯಾ, ಥಾಯ್ಲೆಂಡ್, ಶ್ರೀಲಂಕಾ, ಜಪಾನ್, ದುಬೈ, ವಿಯೆಟ್ನಾಂ, ಕಾಂಬೋಡಿಯಾ ಹಾಗೂ ಭಾರತದಾದ್ಯಂತ ಗ್ರೂಪ್ ಟೂರ್‌ನ ದಿನಾಂಕಗಳನ್ನು ಪ್ರಕಟಿಸಲಾಗಿದೆ ಎಂದು ಸಂಸ್ಥಾಪಕ ಕೆ. ನಾಗರಾಜ್ ಅಡಿಗ ಮಾಹಿತಿ ನೀಡಿದರು. ಪ್ರವಾಸದ ಕುರಿತ ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ಕಚೇರಿಯಲ್ಲಿ ಪಡೆಯಬಹುದು ಅಥವಾ 080-26616678, 9449478944, 7022259003 ಸಂಪರ್ಕಿಸಬಹುದು ಎಂದು ನಿರ್ದೇಶಕಿ ಆಶಾ ಅಡಿಗ ತಿಳಿಸಿದ್ದಾರೆ.



ಲೋಕೋಪಯೋಗಿ ದಾಖಲೆ, ಕಂಪ್ಯೂಟರ್ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಸಮೀಪದ ವಿಶ್ವೇಶ್ವರಯ್ಯ ಗೋಪುರದಲ್ಲಿರುವ (ವಿ.ವಿ.ಟವರ್) ಲೋಕೋಪಯೋಗಿ ಇಲಾಖೆಯ ಕಚೇರಿಯಲ್ಲಿ ಕಳ್ಳತನವಾಗಿದ್ದು, ಕೆಲ ದಾಖಲೆ ಹಾಗೂ ಕಂಪ್ಯೂಟರ್‌ಗಳನ್ನು ಕಳ್ಳರು ಕದ್ದೊಯ್ದಿದ್ದಾರೆ.

‘ಲೋಕೋಪಯೋಗಿ ಇಲಾಖೆ ಕಟ್ಟಡಗಳ ಉಪವಿಭಾಗದ ನಂ. 1ರ ಕಚೇರಿಯಲ್ಲಿ ಕಳ್ಳತನ ನಡೆದಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಿ. ಅನಂತ್ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ವಿಧಾನಸೌಧ ಪೊಲೀಸ್ ಮೂಲಗಳು ಹೇಳಿವೆ.

‘ಡಿ. 10ರಂದು ಎರಡನೇ ಶನಿವಾರ ಹಾಗೂ ಡಿ. 11ರಂದು ಭಾನುವಾರ ರಜೆ ಇತ್ತು. ವಿಶ್ವೇಶ್ವರಯ್ಯ ಗೋಪುರದ ನೆಲಮಹಡಿಯಲ್ಲಿರುವ ಕಚೇರಿಗೆ ಶುಕ್ರವಾರ ಸಂಜೆಯೇ ಸಿಬ್ಬಂದಿ ಬೀಗ ಹಾಕಿಕೊಂಡು ಹೋಗಿದ್ದರು. ಡಿ. 12ರಂದು ಬೆಳಿಗ್ಗೆ 9 ಗಂಟೆ ಸುಮಾರಿಗೆ ಎಂದಿನಂತೆ ಕಚೇರಿ ಬೀಗ ತೆಗೆಯಲು ಸಿಬ್ಬಂದಿ ಹೋಗಿದ್ದಾಗ ಕಳ್ಳತನ ಗಮನಕ್ಕೆ ಬಂದಿತ್ತು’ ಎಂದು ಮೂಲಗಳು ತಿಳಿಸಿವೆ.

ತುರ್ತು ನಿರ್ಗಮನದಿಂದ ನುಗ್ಗಿದ್ದ ಕಳ್ಳರು: ‘ಕಚೇರಿಯಲ್ಲಿ ಬೆಂಕಿ ಅವಘಡ ಸಂಭವಿಸಿದ ವೇಳೆ ತುರ್ತು ನಿರ್ಗಮನಕ್ಕೆಂದು ಪ್ರತ್ಯೇಕ ಗಾಜಿನ ಬಾಗಿಲು ಇದೆ. ಇದೇ ಗಾಜಿನ ಬಾಗಿಲು ಒಡೆದು ಕಳ್ಳರು ಒಳನುಗ್ಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕಚೇರಿಯ ಮೂರು ಮರದ ಕಬೋರ್ಡ್‌ಗಳ ಬಾಗಿಲು ತೆರೆದು, ಹಲವು ದಾಖಲೆಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಕೆಲ ದಾಖಲೆ, ಮೂರು ಮಾನಿಟರ್ ಹಾಗೂ ಒಂದು ಸಿಪಿಯು ಕದ್ದುಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ. ಮಾಹಿತಿ ಬರುತ್ತಿದ್ದಂತೆ ಬೆರಳಚ್ಚು ತಜ್ಞರು ಹಾಗೂ ಶ್ವಾನದಳದ ಸಿಬ್ಬಂದಿ ಜೊತೆ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಲಾಗಿದೆ. ಕಚೇರಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೇಳಿಕೆ ಸಹ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಯಾವ ದಾಖಲೆಗಳು ಕಳ್ಳತನವಾಗಿವೆ ಹಾಗೂ ಕಳ್ಳತನವಾಗಿರುವ ಸಿಪಿಯುನಲ್ಲಿ ಯಾವೆಲ್ಲ ದತ್ತಾಂಶವಿತ್ತು ಎಂಬುದನ್ನು ಅಧಿಕಾರಿಗಳಿಂದ ತಿಳಿದುಕೊಳ್ಳಬೇಕಿದೆ. ತುರ್ತು ನಿರ್ಗಮನ ಬಾಗಿಲು ಬಗ್ಗೆ ತಿಳಿದಿರುವ ವ್ಯಕ್ತಿಗಳೇ ಕೃತ್ಯ ಎಸಗಿರುವ ಅನುಮಾನವಿದೆ. ಇದು ಹೊರಗಿನವರ ಕೃತ್ಯವೋ ಅಥವಾ ಒಳಗಿನವರು ಯಾರಾದರೂ ಭಾಗಿಯಾಗಿದ್ದಾರೋ ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.



‘ಲೆವೆಲ್ ಕ್ರಾಸಿಂಗ್ ಗೇಟ್ ತೆಗೆದು ಹಾಕಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಸಂಚಾರ ದಟ್ಟಣೆಗೆ ಕಾರಣವಾಗುತ್ತಿರುವ ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದು ಹಾಕಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್ ಆಗ್ರಹಿಸಿದರು.

ಲೋಕಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಜತೆಗೆ, ನಗರದಲ್ಲಿ ಸಂಚಾರ ದಟ್ಟಣೆ ವಿಪರೀತವಾಗಿದೆ. ಬೆಂಗಳೂರಿನಲ್ಲಿ 26 ಲೆವೆಲ್ ಕ್ರಾಸಿಂಗ್ ಗೇಟ್‌ಗಳಿದ್ದು, ಇವು ಸಂಚಾರ ದಟ್ಟಣೆಗೆ ಕಾರಣವಾಗುತ್ತಿವೆ. ಹೆಚ್ಚಿನವು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲೇ ಇವೆ. ಬಾಣಸವಾಡಿ–ಹೆಬ್ಬಾಳ ನಡುವೆ ಆರು, ಕಾರ್ಮೆಲಾರಾಮ್–ಬೈಯಪ್ಪನಹಳ್ಳಿ ನಡುವೆ ಮೂರು ಇವೆ. ಹೆಬ್ಬಾಳ–ಯಶವಂತಪುರ, ಚನ್ನಸಂದ್ರ–ಯಲಹಂಕ, ಕೆಂಗೇರಿ–ಕೆಎಸ್‌ಆರ್ ನಿಲ್ದಾಣ, ಕೆಎಸ್‌ಆರ್ ರೈಲ್ವೆ ನಿಲ್ದಾಣ–ಯಶವಂತಪುರದ ನಡುವೆ ಉಳಿದ ಗೇಟ್‌ಗಳಿವೆ. ಪ್ರತಿ ಸಲ ಗೇಟ್ ಹಾಕಿದಾಗ ವಾಹನ ಸವಾರರು ಕನಿಷ್ಠ 15–20 ನಿಮಿಷ ಕಾಯಬೇಕಾಗುತ್ತದೆ’ ಎಂದರು.

‘ರೈಲ್ವೆ ಇಲಾಖೆಯು ದೇಶದಾದ್ಯಂತ ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದು ಹಾಕಲು ತೀರ್ಮಾನಿಸಿದೆ. ಆದರೆ, ಕರ್ನಾಟಕದಲ್ಲಿ ಮಾತ್ರ ವಿಳಂಬ ಮಾಡಲಾಗುತ್ತಿದೆ. ರೈಲ್ವೆ ಇಲಾಖೆ ಹಾಗೂ ಕರ್ನಾಟಕ ಸರ್ಕಾರ ಸಮನ್ವಯದಿಂದ ಕಾರ್ಯನಿರ್ವಹಿಸಿ ಶೀಘ್ರದಲ್ಲಿ ಈ ಗೇಟ್‌ಗಳನ್ನು ತೆಗೆದು ಹಾಕಬೇಕು’ ಎಂದರು.

ಬಿಬಿಎಂಪಿ: ಹಳೆ ಗುಂಡಿಗಳ ಜೊತೆ ಅಲ್ಲಲ್ಲಿ ಹೊಸ ಗುಂಡಿಗಳು; ದುರಸ್ತಿಗೆ ಈಗಾಗಲೇ ₹15 ಕೋಟಿ ವೆಚ್ಚ

ಮತ್ತೆ ತೆರೆಯಿತು ಗುಂಡಿ... ತಪ್ಪದ ಸವಾರರ ಗೋಳು

ರಸ್ತೆ ಅವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ಮಳೆಗೆ ಈ ಹಿಂದೆ ಮುಚ್ಚಿದ್ದ ಗುಂಡಿಗಳು ಮತ್ತೆ ಬಾಯಿತೆರೆದುಕೊಂಡಿವೆ.

ಚಂಡಮಾರುತದಿಂದ ನಗರದಲ್ಲಿ ನಾಲ್ಕೈದು ದಿನ ಮಳೆಯಾಯಿತು. ಈ ಮಳೆಗೆ ಮೊದಲು ನಗರದಲ್ಲಿದ್ದ ಎಲ್ಲ ಗುಂಡಿಗಳನ್ನೂ ಮುಚ್ಚಲಾಗಿದೆ ಎಂದು ಬಿಬಿಎಂಪಿ ಹೇಳಿಕೊಂಡಿತ್ತು. ಆದರೆ, ಇದೀಗ ಸುರಿದಿರುವ ಮಳೆಯಿಂದ ಹಳೆ ಗುಂಡಿಗಳು ಮತ್ತೆ ತೆರೆದುಕೊಂಡಿವೆ. ಜೊತೆಗೆ ಹೊಸ ಗುಂಡಿಗಳೂ ಮೂಡಿವೆ.

'ಈ ವರ್ಷ 33 ಸಾವಿರ ರಸ್ತೆಗುಂಡಿಗಳನ್ನು ಗುರುತಿಸಲಾಗಿದ್ದು, ಅವುಗಳಲ್ಲಿ ಬಹುತೇಕ ಎಲ್ಲವನ್ನೂ ಮುಚ್ಚಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ್ದರು. 'ಡಿಸೆಂಬರ್ ವೇಳೆಗೆ ನಗರದ ರಸ್ತೆಗಳನ್ನು ಗುಂಡಿಮುಕ್ತ ಮಾಡಲಾಗುತ್ತದೆ' ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದ್ದರು. ಆದರೆ, ಇದು ಸಾಕಾರಗೊಂಡಿಲ್ಲ.

ಜೆ.ಸಿ. ರಸ್ತೆ, ಟೌನ್‌ಹಾಲ್ ಮುಂಭಾಗ ಪ್ರಥಮವಾಗಿ ಬಿಬಿಎಂಪಿ ರಸ್ತೆ ಗುಂಡಿ ಮುಚ್ಚುವ ಕೆಲಸವನ್ನು ಎರಡು ತಿಂಗಳ ಹಿಂದೆ ಆರಂಭಿಸಿತ್ತು. ಆ ರಸ್ತೆಗಳಲ್ಲಿ ಇಂದು ಅದೇ ಗುಂಡಿಗಳು ಮತ್ತೆ ತೆರೆದುಕೊಂಡಿದೆ. ರಸ್ತೆಯಲ್ಲೆಲ್ಲ ಜೆಲ್ಲಿ ಹರಡಿದೆ. ಮೈಸೂರು ರಸ್ತೆ, ಹಳೇ ಮದ್ರಾಸ್ ರಸ್ತೆ, ವಿಜಯನಗರ, ನಾಗರಬಾವಿ, ರಾಜಾಜಿನಗರ, ಯಲಹಂಕ, ರಾಜರಾಜೇಶ್ವರಿನಗರ, ಯಶವಂತಪುರ ಸೇರಿ ಹಲವು ಪ್ರದೇಶಗಳ ರಸ್ತೆಗಳ ಸ್ಥಿತಿಯೂ ಇದೇ.


ರಾಜರಾಜೇಶ್ವರಿನಗರ ಆರ್ಚ್ ಬಳಿ ತೇಪೆ ಹಾಕಿರುವ ಸ್ಥಳದಲ್ಲೇ ಮತ್ತೆ ಗುಂಡಿಗಳಾಗಿರುವುದು

'ಮೈಸೂರು ರಸ್ತೆಯಲ್ಲಿ ಹೊಸಗುಡ್ಡಹಳ್ಳಿ, ಬಾಪೂಜಿನಗರ, ಬ್ಯಾಟರಾಯನಪುರದ ಸಮೀಪ ಮಳೆಯಿಂದ ಗುಂಡಿಗಳು ಮತ್ತೆ ಕಾಣಿಸಿಕೊಂಡಿವೆ. ಕವಿಕಾ ಸಮೀಪದ ರಸ್ತೆಯಲ್ಲಿ ದಿನಕ್ಕೆ ಕನಿಷ್ಠ ಇಬ್ಬರಾದರೂ ಗುಂಡಿಯಿಂದ ಬೀಳುತ್ತಾರೆ. ಇತ್ತೀಚಿನ ನಾಲ್ಕು ದಿನ ಮಳೆಯ ಸಂದರ್ಭದಲ್ಲಿ ನಿತ್ಯವೂ ಐದಾರು ಜನರು ಬೀಳುತ್ತಿದ್ದಾರೆ' ಎಂದು ಸ್ಥಳೀಯ ಮಳಿಗೆ ಮಾಲೀಕ ಮಹಮದ್ ಹೇಳಿದರು.

₹15 ಕೋಟಿ: 'ರಸ್ತೆ ಗುಂಡಿಗಳನ್ನು ಮುಚ್ಚಲು ಈ ವರ್ಷ ಸುಮಾರು ₹5 ಕೋಟಿ ಬಿಡುಗಡೆ ಮಾಡಲಾಗಿದೆ. ಕಳೆದ ಮೂರು ತಿಂಗಳಲ್ಲಿ ಗುಂಡಿ ಮುಚ್ಚಿರುವ ಕಾಮಗಾರಿಗೆ ಬಿಲ್ ಕಡತ ಪ್ರಾರಂಭವಾಗಿದ್ದು, ಇನ್ನೂ ಹಣ ಬಿಡುಗಡೆ ಆಗಿಲ್ಲ. ಅದೆಲ್ಲ ಸೇರಿದರೆ ಸುಮಾರು ₹15 ಕೋಟಿಯಾಗಬಹುದು' ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಮಾಹಿತಿ ನೀಡಿದರು.

ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ದಕ್ಷಿಣ ವಲಯ ಗುಂಡಿಮುಕ್ತ!

'ಬಿಬಿಎಂಪಿಯ ದಕ್ಷಿಣ ವಲಯದ ರಸ್ತೆಗಳು ಗುಂಡಿಮುಕ್ತವಾಗಿವೆ. ಗುಂಡಿಗಳು ಕಂಡುಬಂದರೆ ದಕ್ಷಿಣ ವಲಯದ ನಿಯಂತ್ರಣ ಕೊಠಡಿ 26566362/ 22975703 ದೂರು ನೀಡಬಹುದು. ವಾಟ್ಸ್ ಆ್ಯಪ್ 9480685704ಗೆ ಜಿಯೋ ಲೊಕೇಷನ್/ವಿಳಾಸ ಇರುವ ರಸ್ತೆ ಗುಂಡಿಗಳ ಚಿತ್ರಗಳನ್ನು ಕಳುಹಿಸಬಹುದು' ಎಂದು ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪೂರ ತಿಳಿಸಿದರು.

ಬಿಬಿಎಂಪಿಯ 8 ವಲಯಗಳ ಪೈಕಿ ದಕ್ಷಿಣ ವಲಯ ಮಾತ್ರ ಈ ರೀತಿ ರಸ್ತೆ ಗುಂಡಿಮುಕ್ತ ಎಂದು ಬಹಿರಂಗವಾಗಿ ಪ್ರಕಟಿಸಿರುವುದು. ಉಳಿದ ವಲಯಗಳಲ್ಲಿ ಮಾಹಿತಿ ನೀಡಲು ಅಧಿಕಾರಿಗಳು ಹಿಂಜರಿಯುತ್ತಿದ್ದಾರೆ. 'ಎಲ್ಲದಕ್ಕೂ ಪ್ರಧಾನ ಎಂಜಿನಿಯರ್ ಅವರನ್ನೇ ಕೇಳಬೇಕು' ಎಂದು ಹೇಳುತ್ತಾರೆ.


ಮೈಸೂರು ರಸ್ತೆಯ ಕರ್ನಾಟಕ ವಿದ್ಯುತ್ ಕಾರ್ಖಾನೆ ಬಳಿ ತೇಪೆ ಹಾಕಿರುವ ಸ್ಥಳದಲ್ಲೇ ಮತ್ತೆ ಗುಂಡಿಗಳಾಗಿರುವುದು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

'ಗುಣಮಟ್ಟದ ರಸ್ತೆ ತೋರಿಸಿದರೆ ಬಹುಮಾನ...'

'ಬಿಬಿಎಂಪಿ ವತಿಯಿಂದ ನಿರ್ಮಿಸಿರುವ ರಸ್ತೆ ಎಲ್ಲ ರೀತಿಯ ನಿಯಮಗಳನ್ನು ಪಾಲಿಸಿ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತಿದೆ. ಬಿಬಿಎಂಪಿಯವರು ಇದನ್ನು ಸಾಬೀತುಪಡಿಸಲಿ. ಐಆರ್‌ಸಿ ನಿಯಮವನ್ನು ಶೇ 100ರಷ್ಟು ಪಾಲಿಸಿ ನಿರ್ಮಿಸಲಾಗಿರುವ ಕನಿಷ್ಠ ಒಂದು ಕಿ.ಮೀ ರಸ್ತೆಯನ್ನು ತೋರಿಸಿ ಸಾಬೀತುಪಡಿಸಲಿ. ಅವರಿಗೆ ಬಹುಮಾನ ನೀಡುತ್ತೇನೆ' ಎಂದು ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆಯ ಮಾಜಿ ಸದಸ್ಯ ಕಾರ್ಯದರ್ಶಿ ಐ. ರವೀಂದ್ರನಾಥ್ ಸವಾಲು ಹಾಕಿದರು.

'ನಿಯಮದಂತೆ 'ರೋಡ್ ರಫ್‌ನೆಸ್ ಇಂಡೆಕ್ಸ್' ಸಾಬೀತುಪಡಿಸಲಿ. ರಸ್ತೆಯ ಮೇಲ್ಮೈ ಹೇಗಿರಬೇಕು ಎಂಬುದನ್ನು ಸ್ಥಿರೀಕರಿಸುವುದೇ ಈ ಮಾಪನ. ಇನ್ನು ಡಾಂಬರು ಹಾಕುವಾಗ 'ರೋಡ್ ಪೇವರ್ ಸೆನ್ಸರ್ ಮೆಷಿನ್' ತೋರುವ ಉಬ್ಬುತಗ್ಗುಗಳನ್ನೂ ಪರಿಗಣಿಸುತ್ತಿಲ್ಲ' ಎಂದು ದೂರಿದರು.

'ರಸ್ತೆಗಳ ಗುಣಮಟ್ಟ ಕಾಪಾಡಿಕೊಳ್ಳಲು ಬೋಟ್ ಅಥವಾ ಇತರೆ ರೀತಿಯ ಸಹಭಾಗಿತ್ವದಲ್ಲಿ ರಸ್ತೆ ನಿರ್ಮಾಣ ಯೋಜನೆಯನ್ನು ನೀಡಬೇಕು. ರಸ್ತೆ ನಿರ್ಮಿಸಿ ಐದು ವರ್ಷ ಅವರೇ ನಿರ್ವಹಣೆ ಮಾಡಬೇಕು. ಮತ್ತೆ 5 ವರ್ಷ ನಿರ್ವಹಣೆ ವೆಚ್ಚ ನೀಡಲಿ. ಈಗಿರುವ ಗುತ್ತಿಗೆದಾರರಿಗೇ ಈ ಯೋಜನೆಯಡಿ ಕಾಮಗಾರಿ ನೀಡಲಿ' ಎಂದು ಸಲಹೆ ನೀಡಿದರು.

ಲಿವಿಂಗ್ ಟುಗೆದರ್ ಸಂಗಾತಿ ಕೊಲೆ: ಆತ್ಮಹತ್ಯೆ ಎಂದು ಬಿಂಬಿಸಿದ್ದ ಗೆಳೆಯನ ಬಂಧನ

ಮದುವೆಯಾಗು ಎಂದಿದ್ದಕ್ಕೆ ಕೊಂದು ನೇಣು ಬಿಗಿದ

• ಸಂತೋಷ ಜಿಗಳಿಕೊಪ್ಪ

ಅಪರಾಧ ಸುದ್ದಿ

ಬೆಂಗಳೂರು: ತನ್ನ ಜೊತೆ ಲಿವಿಂಗ್ ಟುಗೆದರ್‌ನಲ್ಲಿದ್ದ (ಸಹಜೀವನ) ಮಹಿಳೆಯನ್ನು ಕೊಂದು ಆತ್ಮಹತ್ಯೆಯೆಂದು ಬಿಂಬಿಸಲು ನೇಣು ಬಿಗಿದು ನಾಟಕವಾಡಿದ್ದ ಆರೋಪಿ ಪ್ರಶಾಂತ್ (24) ಎಂಬಾತನನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಿಂಗಸಂದ್ರದ ಶ್ರೀನಿವಾಸ್ ಸ್ಟ್ರೀಟ್ ನಿವಾಸಿ ಪ್ರಶಾಂತ್, ಇ- ಕಾಮರ್ಸ್ ಕಂಪನಿಯೊಂದರ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ. ತನ್ನ ಜೊತೆ ಸಲುಗೆ ಇಟ್ಟುಕೊಂಡಿದ್ದ ಸಿ. ಸುನೀತಾ ಉರುಫ್ ದೀಪು (27) ಅವರನ್ನು ಕೊಲೆ ಮಾಡಿ ಆತ್ಮಹತ್ಯೆ ಎಂಬಂತೆ ಬಿಂಬಿಸಿ ನಾಟಕವಾಡಿದ್ದ. ಮರಣೋತ್ತರ ಪರೀಕ್ಷೆ ವರದಿಯಿಂದ ಕೊಲೆ ರಹಸ್ಯ ತಿಳಿಯುತ್ತಿದ್ದಂತೆ ಪ್ರಕರಣ ದಾಖಲಿಸಿಕೊಂಡು ಪ್ರಶಾಂತ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಾಲ್ಕು ವರ್ಷ ಲಿವಿಂಗ್ ಟುಗೆದರ್: 'ಆಂಧ್ರಪ್ರದೇಶದ ಸುನೀತಾ ವಿವಾಹಿತೆ. ಕೌಟುಂಬಿಕ ಕಲಹದಿಂದಾಗಿ ಪತಿಯನ್ನು ತೊರೆದು ಬೆಂಗಳೂರಿಗೆ ಬಂದು ಪರಿಚಯಸ್ಥರೊಬ್ಬರ ಮನೆಯಲ್ಲಿ ವಾಸವಿದ್ದರು. ಸಣ್ಣ-ಪುಟ್ಟ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ತನ್ನ ಹೆಸರನ್ನು ದೀಪು ಎಂದು ಬದಲಾಯಿಸಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸುನೀತಾ ವಾಸವಿದ್ದ ಪ್ರದೇಶದಲ್ಲೇ ಆರೋಪಿ ಪ್ರಶಾಂತ್ ನೆಲೆಸಿದ್ದ. ನಾಲ್ಕು ವರ್ಷಗಳ ಹಿಂದೆ ಅವರಿಬ್ಬರಿಗೂ ಪರಿಚಯವಾಗಿತ್ತು. ಸುನೀತಾ ಅವರಿಗಿಂತ ಪ್ರಶಾಂತ್ ವಯಸ್ಸಿನಲ್ಲಿ ಮೂರು ವರ್ಷ ಚಿಕ್ಕವನು. ವಯಸ್ಸಿನ ಅಂತರವಿದ್ದರೂ ಅವರಿಬ್ಬರು ಪರಸ್ಪರ ಒಪ್ಪಿ ಪ್ರೀತಿಸಲಾರಂಭಿಸಿದ್ದರು. ಸಲುಗೆಯೂ ಬೆಳೆದಿತ್ತು' ಎಂದು ಹೇಳಿವೆ.

'ಸುನೀತಾ ಅವರನ್ನು ಮದುವೆಯಾಗುವುದಾಗಿ ಹೇಳಿದ್ದ ಆರೋಪಿ ಪ್ರಶಾಂತ್, 'ನನ್ನ ತಂಗಿ ಇದ್ದಾಳೆ. ಅವಳ ಮದುವೆಯಾದ ನಂತರ ನಾವಿಬ್ಬರೂ ಮದುವೆಯಾಗೋಣ. ಅಲ್ಲಿಯವರೆಗೂ ಲಿವ್-ಇನ್ ಸಂಬಂಧದಲ್ಲಿ (ಸಹಜೀವನ) ಇರೋಣ' ಎಂದಿದ್ದ. ಅದಕ್ಕೆ ಸುನೀತಾ ಒಪ್ಪಿದ್ದಳು. ನಂತರ, ಅವರಿಬ್ಬರು ಶ್ರೀನಿವಾಸ್ ಸ್ಟ್ರೀಟ್ ಮನೆಯೊಂದರಲ್ಲಿ ಒಟ್ಟಿಗೆ ವಾಸವಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮದುವೆಗೆ ಒತ್ತಾಯಿಸಿದ್ದಕ್ಕೆ ಕೊಲೆ: 'ನಾಲ್ಕು ವರ್ಷವಾದರೂ ಆರೋಪಿ ಮದುವೆಯಾಗಿರಲಿಲ್ಲ. ಇದರಿಂದ ಬೇಸತ್ತ ಸುನೀತಾ, 'ಬೇಗ ಮದುವೆಯಾಗೋಣ' ಎಂದಿದ್ದರು. ಅದಕ್ಕೆ ಒಪ್ಪದ ಪ್ರಶಾಂತ್, ತಂಗಿ ಮದುವೆಯಾಗಬೇಕೆಂದು ತಿಳಿಸಿದ್ದರು. ಅಷ್ಟಾದರೂ ಸುನೀತಾ ಮದುವೆಯಾಗಬೇಕೆಂದು ಪಟ್ಟು ಹಿಡಿದಿದ್ದರು. ಇದರಿಂದ ಸಿಟ್ಟಾದ ಆರೋಪಿ, ಸುನೀತಾ ಕೊಲೆ ಮಾಡಲು ಸಂಚು ರೂಪಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮದುವೆ ವಿಚಾರಕ್ಕೆ ಮನೆಯಲ್ಲಿ ಇತ್ತೀಚೆಗೆ ಪುನಃ ಜಗಳವಾಗಿತ್ತು. ಸುನೀತಾ ಮೇಲೆ ಹಲ್ಲೆ ಮಾಡಿದ್ದ ಆರೋಪಿ, ಕತ್ತು ಹಿಸುಕಿ ಕೊಲೆ ಮಾಡಿದ್ದ. ನಂತರ, ನೇಣು ಬಿಗಿದು ಮೃತದೇಹವನ್ನು ಕೊಠಡಿಯಲ್ಲಿ ನೇತುಹಾಕಿದ್ದ. ಆತ್ಮಹತ್ಯೆ ಎಂಬಂತೆ ಸನ್ನಿವೇಶ ಸೃಷ್ಟಿಸಿದ್ದ' ಎಂದು ಮೂಲಗಳು ಹೇಳಿವೆ.

ಠಾಣೆಗೆ ಮಾಹಿತಿ ನೀಡಿದ್ದ ವೈದ್ಯರು: 'ಡಿ. 7ರಂದು ಮಧ್ಯಾಹ್ನ ಪೊಲೀಸರಿಗೆ ಮಾಹಿತಿ ನೀಡಿದ್ದ ಅಭಿರಾಮ್ ಆಸ್ಪತ್ರೆ ವೈದ್ಯರು, 'ದೀಪು ಎಂಬ ಮಹಿಳೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ನಮ್ಮ ಆಸ್ಪತ್ರೆಯಲ್ಲಿ ಮೃತದೇಹವಿದೆ' ಎಂದಿದ್ದರು. ಆಸ್ಪತ್ರೆಗೆ ಹೋಗಿದ್ದ ಸಿಬ್ಬಂದಿ, ಮೃತದೇಹವನ್ನು ಪರಿಶೀಲಿಸಿದಾಗ ಕತ್ತಿನಲ್ಲಿ ಗಾಯದ ಗುರುತು ಇತ್ತು. ಕೂಡಲೇ ಮೃತದೇಹವನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ಸಾಗಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರಂಭದಲ್ಲಿ ಇದೊಂದು ಆತ್ಮಹತ್ಯೆ ಇರಬಹುದೆಂದು ಭಾವಿಸಲಾಗಿತ್ತು. ಮಹಿಳೆ ಬಳಸಿದ್ದ ಮೊಬೈಲ್ ನಂಬರ್ ಆಧರಿಸಿ ಪೋಷಕರನ್ನು ಪತ್ತೆ ಮಾಡಿ, ಆಸ್ಪತ್ರೆಗೆ ಕರೆಸಲಾಗಿತ್ತು. ಮೃತದೇಹ ನೋಡಿದ್ದ ಅವರು, ತಮ್ಮ ಮಗಳು ಸುನೀತಾ ಎಂಬುದಾಗಿ ಗುರುತಿಸಿದ್ದರು. ನಂತರ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿತ್ತು.'

'ಕತ್ತಿಗೆ ತೀವ್ರ ಗಾಯವಾಗಿ ಮಹಿಳೆ ಮೃತಪಟ್ಟಿದ್ದಾರೆ. ಇದು ಕೊಲೆ' ಎಂಬುದು ಮರಣೋತ್ತರ ಪರೀಕ್ಷೆ ವರದಿಯಿಂದ ಗೊತ್ತಾಗಿತ್ತು. ಸುನೀತಾ ತಂದೆ ಸಹ ಕೊಲೆ ಶಂಕೆ ವ್ಯಕ್ತಪಡಿಸಿದ್ದರು. ಜೊತೆಗೆ, ಲಿವಿಂಗ್ ಟುಗೆದರ್ ಸಂಬಂಧದಲ್ಲಿದ್ದ ಪ್ರಶಾಂತ್ ಬಗ್ಗೆ ಮಾಹಿತಿ ನೀಡಿದ್ದರು. ಆರೋಪಿಯನ್ನು ಪತ್ತೆ ಮಾಡಿದಾಗ, ಆತ್ಮಹತ್ಯೆಯೆಂದು ಆರಂಭದಲ್ಲಿ ನಾಟಕವಾಡಿದ್ದ. ಹೆಚ್ಚಿನ ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ' ಎಂದು ಪೊಲೀಸ್ ಮೂಲಗಳು ಹೇಳಿವೆ.


ಚಿತ್ರದುರ್ಗದ ಹಳೆ ಮಾಧ್ಯಮಿಕ ಶಾಲಾ ಮೈದಾನದಲ್ಲಿ ಗುರುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ನಟ ಶಿವರಾಜ್ ಕುಮಾರ್ ಅಭಿನಯದ 'ವೇದ' ಚಿತ್ರದ 'ಜುಂಜಪ್ಪ' ಹಾಡನ್ನು ನಟ ಕಿಚ್ಚ ಸುದೀಪ್ ಬಿಡುಗಡೆ ಮಾಡಿದರು. ನಟಿ ಅನುಶ್ರೀ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ನಿರ್ದೇಶಕ ಹರ್ಷ, ಮಧು ಬಂಗಾರಪ್ಪ, ಶಿವರಾಜ್‌ಕುಮಾರ್ ಪುತ್ರಿ ನಿವೇದಿತಾ, ನಿರ್ಮಾಪಕಿ ಗೀತಾ ಶಿವರಾಜ್ ಕುಮಾರ್ ಇದ್ದಾರೆ.

ನಟ ಶಿವರಾಜ್ ಕುಮಾರ್, ಕಿಚ್ಚ ಸುದೀಪ್ ಭಾಗಿ

'ವೇದ' ಸಿನಿಮಾದ ಹಾಡು ಬಿಡುಗಡೆ

ಚಿತ್ರದುರ್ಗ: ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಅಭಿನಯದ 125ನೇ ಸಿನಿಮಾ 'ವೇದ' ಚಿತ್ರದ 'ಜುಂಜಪ್ಪ' ಆಡಿಯೊವನ್ನು ಅಪಾರ ಅಭಿಮಾನಿಗಳ ಸಮ್ಮುಖದಲ್ಲಿ ಗುರುವಾರ ರಾತ್ರಿ ಬಿಡುಗಡೆ ಮಾಡಲಾಯಿತು. ಶಿವರಾಜ್ ಕುಮಾರ್, ನಟ ಸುದೀಪ್ ಅವರನ್ನು ಒಟ್ಟಿಗೆ ನೋಡಿದ ಅಭಿಮಾನಿಗಳು ಹರ್ಷೋದ್ಗಾರ ಮಾಡಿ ಸಂಭ್ರಮಿಸಿದರು.


ಇಲ್ಲಿನ ಹಳೆ ಮಾಧ್ಯಮಿಕ ಶಾಲಾ ಮೈದಾನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ನಟ ಸುದೀಪ್ ಅವರು ಹಾಡನ್ನು ಬಿಡುಗಡೆ ಮಾಡಿದರು. 'ಅಕ್ಕ ಬಾ ರಕ್ಕು ಬರುವನ ಜುಂಜಪ್ಪನ, ತಂಗಿ ಬಾ ಕರೆದು ಬರುವೆನಾ...' ಎಂಬ ಹಾಡಿಗೆ ಮೈದಾನದಲ್ಲಿ ಕಿಕ್ಕಿರಿದು ಸೇರಿದ್ದ ಅಪಾರ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಸಂಗೀತ, ನೃತ್ಯಕ್ಕೆ ಪ್ರೇಕ್ಷಕರು ಹೊಡೆದ ಚಪ್ಪಾಳೆ, ಸಿಳ್ಳೆಯ ಸಂಭ್ರಮ ಮುಗಿಲು ಮುಟ್ಟಿತ್ತು.

'ಹುಚ್ಚ ಸಿನಿಮಾ ಚಿತ್ರೀಕರಣ ಚಿತ್ರದುರ್ಗದಲ್ಲಿ ನಡೆದಿತ್ತು. ಆ ಸಿನಿಮಾ ಇಲ್ಲದೇ ನಾನಿಲ್ಲ. ಈ ಊರು ಇಲ್ಲದೇ ಹುಚ್ಚ ಸಿನಿಮಾ ಇಲ್ಲ. ಗೀತಾ ಶಿವರಾಜ್ ಕುಮಾರ್ ನಿರ್ಮಾಣದ ಮೊದಲ ಸಿನಿಮಾ ಇದು. ಇದು ನಮ್ಮ ಸಿನಿಮಾ ಆಗಿದ್ದು, ಯಶಸ್ಸು ಕಾಣಬೇಕು' ಎಂದು ನಟ ಕಿಚ್ಚ ಸುದೀಪ್ ಹೇಳಿದರು. 'ಶಿವರಾಜ್ ಕುಮಾರ್ ಇನ್ನೂ 29 ವರ್ಷದ ಯುವಕನ ರೀತಿಯಲ್ಲಿ ನೃತ್ಯ ಮಾಡುತ್ತಿದ್ದಾರೆ. ನನ್ನ ಸಿನಿಮಾದ ಸಮಾರಂಭ ಕೂಡ ಚಿತ್ರದುರ್ಗದಲ್ಲೇ ನಡೆಯಲಿದೆ' ಎಂದರು.

ನಟ ಶಿವರಾಜ್ ಕುಮಾರ್, 'ಮೈಲಾರಿ ಚಿತ್ರಕ್ಕೆ ಚಿತ್ರದುರ್ಗಕ್ಕೆ ಬಂದಿದ್ದೆ. ಇಲ್ಲಿಯೇ ಆಡಿಯೊ ಬಿಡುಗಡೆ ಮಾಡಬೇಕು ಎಂಬ ಅಪೇಕ್ಷೆ ಇತ್ತು. ಹೀಗಾಗಿ ಚಿತ್ರದುರ್ಗ ಆಯ್ಕೆ ಮಾಡಿಕೊಂಡೆವು. ಸುದೀಪ್ ಅಭಿಮಾನದಿಂದ ಇಲ್ಲಿಗೆ ಬಂದಿದ್ದಾರೆ. ಇದಕ್ಕೆ ಹೆಚ್ಚು ಖುಷಿ ಆಗಿದೆ. ಡಿ.23ರಂದು ವೇದ ಚಿತ್ರ ಬಿಡುಗಡೆ ಆಗಲಿದೆ. ಎಲ್ಲರೂ ಹರಸಿ' ಎಂದು ಕೋರಿಕೊಂಡರು.

ನಿರ್ಮಾಪಕಿ ಗೀತಾ ಶಿವರಾಜ್ ಕುಮಾರ್, ಕೆಪಿಸಿಸಿ ಹಿಂದುಳಿದ ವರ್ಗ ವಿಭಾಗದ ಅಧ್ಯಕ್ಷ ಮಧು ಬಂಗಾರಪ್ಪ, ನಿರ್ದೇಶಕ ಹರ್ಷ, ಗಾಯಕಿ ಶಿವಾನಿ, 'ವೇದ' ಚಿತ್ರತಂಡದ ಶ್ವೇತಾ ಚಂಗಪ್ಪ, ಗಾನವಿ, ಅದಿತಿ, ಗುರುದತ್, ಅರ್ಜುನ್ ಜನ್ಯ, ಶ್ರೀಕಾಂತ್, ಕಾಂತರಾಜ್, ನಿವೇದಿತಾ ವೇದಿಕೆಯಲ್ಲಿ ಇದ್ದರು.

'ಗನ್ನೇರಿ' ಕೃತಿಗೆ ಪುತಿನ ಕಾವ್ಯ ನಾಟಕ ಪ್ರಶಸ್ತಿ


ಸ. ರಘುನಾಥ

ಶ್ರೀನಿವಾಸಪುರ: ಸಾಹಿತಿ ಸ. ರಘುನಾಥ ಅವರ 'ಗನ್ನೇರಿ' ಕೃತಿಯು 2021ನೇ ಸಾಲಿನ ಪು.ತಿ.ನ ಕಾವ್ಯ ನಾಟಕ ಪುರಸ್ಕಾರಕ್ಕೆ ಆಯ್ಕೆಯಾಗಿದೆ.

ಡಿ. 25ರಂದು ಬೆಳಿಗ್ಗೆ 10.30ಕ್ಕೆ ವರ್ಚುವಲ್ ಕಾರ್ಯಕ್ರಮದ ಮೂಲಕ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ. ಡಾ.ಪು.ತಿ.ನ ಟ್ರಸ್ಟ್ ಅಧ್ಯಕ್ಷ ಹಾಗೂ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಾಹಿತಿ ಡಾ. ಎಚ್. ಎಸ್. ಸತ್ಯನಾರಾಯಣ ಪುರಸ್ಕೃತರ ಬಗ್ಗೆ ಮಾತನಾಡಲಿದ್ದಾರೆ. ಚಿನ್ಮಯಿ ಚಂದ್ರಶೇಖರ್ ಅವರಿಂದ ಗೀತ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ: ಒಂದೇ ಹುದ್ದೆ– ಅನ್ಯಾಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಒಂದು ಹುದ್ದೆ ಇರುವ ಪ್ರವರ್ಗದಲ್ಲಿ ಮಹಿಳಾ ಅಭ್ಯರ್ಥಿಯನ್ನು ಪರಿಗಣಿಸದೆ ಸರ್ಕಾರ ಅನ್ಯಾಯ ಮಾಡಿದೆ' ಎಂದು ಆರೋಪಿಸಿರುವ ಕೆಲವು ಅಭ್ಯರ್ಥಿಗಳು, ಕೋರ್ಟ್ ಮೆಟ್ಟಿಲೇರಲು ಮುಂದಾಗಿದ್ದಾರೆ.

ಈ ಬಗ್ಗೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಮನವಿ ಸಲ್ಲಿಸಿರುವ ಕೆಲವು ಅಭ್ಯರ್ಥಿಗಳು, 'ನೇಮಕಾತಿ ನಡೆಯುತ್ತಿರುವ 15 ಸಾವಿರ ಹುದ್ದೆಗಳಲ್ಲಿ ಶೇ 50ರಷ್ಟನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಆದರೆ, ಪ್ರವರ್ಗದಲ್ಲಿ ಒಂದು ಹುದ್ದೆ ಮಾತ್ರ ಇರುವ ಕಡೆಗೆ ಮಹಿಳೆಯರಿಗೆ ಆದ್ಯತೆ ನೀಡಬೇಕೆಂಬ ಸಂವಿಧಾನದ ಆಶಯವನ್ನೇ ಪಾಲಿಸದೆ ಅನ್ಯಾಯ ಮಾಡಲಾಗಿದೆ' ಎಂದು ದೂರಿದ್ದಾರೆ.

> ಯಾವುದೇ ಪ್ರವರ್ಗದಲ್ಲಿ ಒಂದು ಹುದ್ದೆ ಮಾತ್ರ ಇದ್ದಾಗ ಅದನ್ನು ಮೀಸಲಿರಿಸದ ಎಂದು ಪರಿಗಣಿಸಲಾಗುತ್ತದೆ. ಅದರಂತೆ ನೇಮಕಾತಿ ಮಾಡಲಾಗುತ್ತದೆ
> **ಆರ್. ವಿಶಾಲ್**
> ಆಯುಕ್ತ, ಸಾರ್ವಜನಿಕ ಶಿಕ್ಷಣ ಇಲಾಖೆ

'ಸಂವಿಧಾನದ 15 (3) ವಿಧಿಯಲ್ಲಿ ಇರುವಂತೆ ಮಹಿಳೆಯರಿಗೆ ವಿಶೇಷ ಪ್ರಾಧಾನ್ಯತೆ ನೀಡಬೇಕೆಂದು ಹಲವು ಪ್ರಕರಣಗಳಲ್ಲಿ ನ್ಯಾಯಾಲಯಗಳು ತೀರ್ಪು ಕೊಟ್ಟಿವೆ. 2019ನೇ ಸಾಲಿನ ನೇಮಕಾತಿಯಲ್ಲಿ ಒಂದು ಹುದ್ದೆ ಇರುವ ಕಡೆ ಮಹಿಳಾ ಅಭ್ಯರ್ಥಿಯನ್ನು ಪರಿಗಣಿಸಲಾಗಿತ್ತು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈಗ ಒಂದು ಹುದ್ದೆ ಇರುವ ಕಡೆ ಮಹಿಳಾ ಮೀಸಲಾತಿ ನೀಡದೆ, ಅರ್ಹತೆ ಆಧಾರದಲ್ಲಿ ನೇಮಿಸಲಾಗಿದೆ ಇದು ಸಂವಿಧಾನದ 15 (3) ಮತ್ತು 335ನೇ (ಪರಿಶಿಷ್ಟರಿಗೆ ವಿಶೇಷ ಆದ್ಯತೆ) ವಿಧಿಯ ಉಲ್ಲಂಘನೆ. ಒಂದೇ ಹುದ್ದೆ ಇರುವ ಕಡೆಗಳಲ್ಲಿ ಯಾವ ರೀತಿ ಹುದ್ದೆಯನ್ನು ನೀಡಲಾಗುತ್ತದೆ ಎಂಬ ಬಗ್ಗೆ ನೇಮಕಾತಿ ಅಧಿಸೂಚನೆಯಲ್ಲಾಗಲಿ, ರಾಜ್ಯಪತ್ರದಲ್ಲಿ ಯಾವುದೇ ಮಾಹಿತಿ ನೀಡಿರಲಿಲ್ಲ' ಎಂದೂ ದೂರಿದ್ದಾರೆ.

ಸುಪ್ರೀಂ ಕೋರ್ಟ್ 2003ರಲ್ಲಿ ನೀಡಿದ್ದ ತೀರ್ಪು ಉಲ್ಲೇಖಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಪಿ.ಆರ್.ರಮೇಶ್ ಅವರು, 'ಒಂದು ಹುದ್ದೆ ಇರುವ ಕಡೆ ಮಹಿಳೆಯರಿಗೆ ಆದ್ಯತೆ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಕೆ–100 ಮಾರ್ಗ ಒತ್ತುವರಿ: ತೆರವಿಗೆ ಸೂಚನೆ

ಬೆಂಗಳೂರು: 'ಬೆಂಗಳೂರು ನಾಗರಿಕರ ಜಲ ಮಾರ್ಗ ಯೋಜನೆ (ಕೆ-100)' ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರುವ ಮಳಿಗೆಯವರು ಕೂಡಲೇ ತೆರವು ಮಾಡಬೇಕು ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಸೂಚಿಸಿದ್ದಾರೆ.

ಕೆ–100ಕ್ಕೆ ಹೊಂದಿಕೊಂಡಿರುವಂತಹ ಮಳಿಗೆಗಳು ಕೆಲ ಸಾಮಗ್ರಿಗಳನ್ನು ಮಾರ್ಗಕ್ಕೆ ಹಾಕಿ ಒತ್ತುವರಿ ಮಾಡಿದ್ದಾರೆ. ತ್ಯಾಜ್ಯ ವಸ್ತುಗಳನ್ನು ರಾಜಕಾಲುವೆ ಮತ್ತು ಪಾದಚಾರಿ ಮಾರ್ಗದಲ್ಲಿ ಹಾಕುತ್ತಿದ್ದಾರೆ. ಅದನ್ನು ಸಂಬಂಧಪಟ್ಟ ಮಳಿಗೆಗಳ ಮಾಲೀಕರು ಕೂಡಲೇ ತೆರವುಗೊಳಿಸಬೇಕು ಎಂದಿದ್ದಾರೆ. ಕೆ.ಆರ್. ಮಾರುಕಟ್ಟೆಯ ಎನ್.ಆರ್. ರಸ್ತೆಯಿಂದ ಬೆಳ್ಳಂದೂರು ಕೆರೆಯವರೆಗೆ 'ಬೆಂಗಳೂರು ನಾಗರಿಕರ ಜಲ ಮಾರ್ಗ ಯೋಜನೆ (ಕೆ-100)' ಕಾಮಗಾರಿಯು ಪ್ರಗತಿಯಲ್ಲಿದೆ. ಈ ಯೋಜನೆಯಲ್ಲಿ ಕೋರಮಂಗಲ ಕಣಿವೆಯ ಕಾಲುವೆಯನ್ನು ಅಭಿವೃದ್ಧಿಪಡಿಸಿ, ತ್ಯಾಜ್ಯ ನೀರಿನಿಂದ ಮುಕ್ತಗೊಳಿಸಲಾಗುತ್ತದೆ. ಕಾಲುವೆಯಲ್ಲಿ ಸದಾಕಾಲ ಶುದ್ಧೀಕರಿಸಿದ ನೀರು ಹರಿಯುವಂತೆ ಮಾಡಿ ಮಳೆ ನೀರುಗಾಲುವೆಯ ಸೌಂದರ್ಯೀಕರಣ ಕಾಮಗಾರಿಯನ್ನು ಕೈಗೊಳ್ಳುವುದು ಯೋಜನೆಯ ಉದ್ದೇಶವಾಗಿದೆ.

ಈ ಯೋಜನೆಯಡಿ ಎಸ್.ಆರ್. ರಸ್ತೆಯಿಂದ ಬೆಳ್ಳಂದೂರು ಕೆರೆಯವರೆಗಿನ ಕಾಲುವೆಯಲ್ಲಿ ಪಾದಚಾರಿಗಳ ಅನುಕೂಲಕ್ಕಾಗಿ ನಿರ್ಮಾಣ ಮಾಡಿರುವ ಮಾರ್ಗ ಮತ್ತು ಅದಕ್ಕೆ ಹೊಂದಿಕೊಂಡಿರುವ ಕೆಲವು ಮಳಿಗೆಗಳವರು ಸಾಮಗ್ರಿಗಳನ್ನು ಹಾಕಿ ಒತ್ತುವರಿ ಮಾಡಿದ್ದಾರೆ. ಇದರಿಂದ ಅಭಿವೃದ್ಧಿ ಮಾಡಲಾಗಿರುವ ಸ್ಥಳಕ್ಕೆ ಹಾನಿಯಾಗಿದೆ ಎಂದು ಪ್ರಹ್ಲಾದ್ ತಿಳಿಸಿದ್ದಾರೆ.

ಚಿತ್ರಾವಳಿ


ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ವಿಕಿರಣ ಭೌತವಿಜ್ಞಾನ ಎರಡನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಕುಲಪತಿ ಪ್ರೊ.ಎಸ್.ಎಂ. ಜಯಕರ, ಮುಂಬೈನ ಬಿಎಆರ್‌ಸಿಯ ಆರೋಗ್ಯ, ಸುರಕ್ಷತೆ ಮತ್ತು ಪರಿಸರ ಸಮೂಹದ ನಿರ್ದೇಶಕ ಡಾ.ಡಿ.ಕೆ. ಅಸ್ವಾಲ್, ಮಾಜಿ ಕುಲಪತಿಗಳಾದ ಪ್ರೊ.ಕೆ. ಸಿದ್ದಪ್ಪ, ಪ್ರೊ. ಪಿ.ವೆಂಕಟರಾಮಯ್ಯ ಉಪಸ್ಥಿತರಿದ್ದರು.


ಬಿಬಿಎಂಪಿ ಶಿಕ್ಷಣ ವಿಭಾಗದ ವತಿಯಿಂದ ಮಲ್ಲೇಶ್ವರದ ಆಟದ ಮೈದಾನದಲ್ಲಿ ಆಯೋಜಿಸಲಾಗಿರುವ 202223ನೇ ಸಾಲಿನ ಪಾಲಿಕೆಯ ಅಂತರ್‌ಶಾಲಾ ಕಾಲೇಜುಗಳ ಕ್ರೀಡಾಕೂಟವನ್ನು ವಿಧಾನ ಪರಿಷತ್ ಸದಸ್ಯರಾದ ಶ್ರೀ ಅ.ದೇವೇಗೌಡ ಗುರುವಾರ ಉದ್ಘಾಟಿಸಿದರು. ಸಹಾಯಕ ಆಯುಕ್ತ ರಾಹುಲ್ ಶರಣಪ್ಪ ಸಂಕನೂರ್, ಹಿರಿಯ ಸಹಾಯಕ ನಿರ್ದೇಶಕರಾದ ಹನುಮಂತಯ್ಯ ಇದ್ದರು.

ನಗರದಲ್ಲಿ ಇಂದು

ಆರ್‌ಬಿಎಸ್ ವಿಶೇಷ ಉಪನ್ಯಾಸ ಸರಣಿ: ಉಪನ್ಯಾಸಕರು: ಡಾ.ಸುಬ್ರಹ್ಮಣಿಯನ್‌ಸ್ವಾಮಿ, ವಿಷಯ: ಭವಿಷ್ಯದ ಉತ್ತಮ ಅವಕಾಶ ಸೃಷ್ಟಿಗೆ ನಾಯಕರು ಹಾಗೂ ಹೊಸ ಅಲೋಚನೆ ಇರುವವರ ಅಗತ್ಯ, ಆಯೋಜನೆ ಮತ್ತು ಸ್ಥಳ: ರೇವಾ ವಿಶ್ವವಿದ್ಯಾಲಯದ ಚಾಣಕ್ಯ ಸಭಾಂಗಣ, ಬೆಳಿಗ್ಗೆ 11

ರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ: ಅತಿಥಿಗಳು: ಪ್ರಭಾವತಿ ಎಂ. ಹಿರೇಮಠ, ದ್ವಾರಕನಾಥ್ ಬಾಬು, ಸಂಪನ್ಮೂಲ ವ್ಯಕ್ತಿಗಳು: ವಿ. ಸುದೇಶ್, ಸುನಿತಾ ಅಭಯ್ ಜೈನ್, ಅಧ್ಯಕ್ಷತೆ: ಡಬ್ಲ್ಯು. ಡಿ. ಅಶೋಕ್, ಆಯೋಜನೆ: ಕರ್ನಾಟಕ ಕಾನೂನು ಸಂಸದೀಯ ಸುಧಾರಣಾ ಸಂಸ್ಥೆ, ಸ್ಥಳ: ಶೇಷಾದ್ರಿಪುರ ಕಾನೂನು ಮಹಾವಿದ್ಯಾಲಯ, ಬೆಳಿಗ್ಗೆ 9

ವಾಸವಿ ಬ್ರಹ್ಮರಥೋತ್ಸವ, ನಾಗಲೋಕದ ಕಲಾಕೃತಿಗಳ ಅನಾವರಣ: ಸಾನ್ನಿಧ್ಯ: ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಶ್ರೀನಿವಾಸ ಪೂಜಾರ್, ಅಧ್ಯಕ್ಷತೆ: ಪಿ.ಎನ್. ಗೋವಿಂದರಾಜುಲು, ಆಯೋಜನೆ: ಮಲ್ಲೇಶ್ವರ ಆರ್ಯವೈಶ್ಯ ಸಂಘ, ಸ್ಥಳ: ಕನ್ಯಕಾಪರಮೇಶ್ವರಿ ದೇವಲಾಯ, ವಾಸವಿ ದೇವಸ್ಥಾನದ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9.30

ಬೆಂಗಳೂರು ನಗರ ಅಂತರ ಕಾಲೇಜು ವಿಶ್ವವಿದ್ಯಾಲಯದ ಮಹಿಳಾ ಹಾಗೂ ಪುರುಷರ ಬಾಕ್ಸಿಂಗ್ ಪಂದ್ಯಾವಳಿ: ಉದ್ಘಾಟನೆ: ಎಸ್.ಬಿ. ಅಪ್ಪಾಜಿ ಗೌಡ, ಅತಿಥಿಗಳು: ಎಚ್.ಜಿ. ನಾರಾಯಣ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಕಾಲೇಜು ಕ್ರೀಡಾಂಗಣ, ಬೆಳಿಗ್ಗೆ 10.30


ಲೋಹಿತಾಶ್ವ ನೆನಪಿನಲ್ಲಿ ವಿಚಾರಸಂಕಿರಣ, ವಿದ್ಯುತ್ ಜಾಗೃತಿ, 'ಲೈನ್‌ಮನ್' ನಾಟಕ ಪ್ರದರ್ಶನ: ಉದ್ಘಾಟನೆ: ಕಾ.ತ. ಚಿಕ್ಕಣ್ಣ, ಅಧ್ಯಕ್ಷತೆ: ಎ.ಆರ್. ಗೋವಿಂದಸ್ವಾಮಿ, ಸದಾಶಿವಯ್ಯ ಜರಗನಹಳ್ಳಿ, ಅತಿಥಿಗಳು: ಗಣೇಶ್ ರಾವ್, ಲೋಹಿತ್, ಎಂ. ಜಯರಾಮ್, ಜಗದೀಶ್, ವಿಶ್ವನಾಥ ನಾಯಕ್, ಕಿರಣ್, ಆಯೋಜನೆ: ದೇಸಿ ರಂಗ ತಂಡ, ಸ್ಥಳ: ಎಸ್.ಎಂ. ಕಲ್ಯಾಣ ಮಂಟಪ, ಜರಗನಹಳ್ಳಿ, ಜೆ.ಪಿ. ನಗರ, 6ನೇ ಹಂತ, ಕನಕಪುರ ರಸ್ತೆ, ಬೆಳಿಗ್ಗೆ 11

'ವಿಕಿರಣ ಭೌತವಿಜ್ಞಾನ'ದ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ: ಅತಿಥಿಗಳು: ಮಯಂಕ್ ಅಗರವಾಲ್, ಕರುಣಾಕರನ್ ಎನ್., ವಿ.ವಿ. ಸುರೇಶ್ ಬಾಬು, ಜೆ.ಟಿ. ದೇವರಾಜು, ಅಧ್ಯಕ್ಷತೆ: ಎನ್. ಮಹೇಶಬಾಬು, ಅಜಿತ್‌ಕುಮಾರ್ ಹೆಗ್ಡೆ, ಆಯೋಜನೆ: ಭೌತವಿಜ್ಞಾನ ವಿಭಾಗ, ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಕೆ. ವೆಂಕಟಸ್ವಾಮಿ ಸಭಾಂಗಣ, ಸಂಜೆ 4.30

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಮನು ಬಳಿಗಾರ್, ಅತಿಥಿಗಳು: ದೊಡ್ಡರಂಗೇಗೌಡ, ಅಧ್ಯಕ್ಷತೆ: ಎನ್.ಎಸ್. ನಂದೀಶ್ ರೆಡ್ಡಿ, ವಿದ್ಯಾಸಿರಿ, ವಿದ್ಯಾಶ್ರೀ ಮತ್ತು ಕನ್ನಡಶ್ರೀ ಪ್ರಶಸ್ತಿ ಪ್ರದಾನ: ಕೆ.ವಿ. ನವೀನ್ ಕಿರಣ್, ಜಿ. ಸತ್ಯವತಿ, ರಾಧಿಕಾ ಜಿ., ಎ.ವಿ. ಸೂರ್ಯಸೇನ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ ಆವರಣ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಸಂಜೆ 4.30

ಕಾವೆಂಶ್ರೀ ಕಾವ್ಯಸಂಜೆ: ಅಧ್ಯಕ್ಷತೆ: ನೀಲಮ್ಮ, ಅತಿಥಿಗಳು: ಕಾ.ವೆಂ. ಶ್ರೀನಿವಾಸಮೂರ್ತಿ, ಗೀತಗಾಯನ: ರಾಜಶೇಖರ್ ನುಲಿ, ನರೇಶ್, ಸವಿತ ಗೊವೆಕರ್, ಮಂಜುಳಾ ಬಾಬು, ದಿವ್ಯಾ ಬಿ. ಎಸ್., ಆಯೋಜನೆ: ಸುರಾಗ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಟಿ. ವೆಂಕಟೇಶಮೂರ್ತಿ ಅವರ 'ಕನ್ನಡ ನಾಟಕಗಳು ರಾತ್ರಿ ರೂಪಕಗಳು' ಪುಸ್ತಕ ಬಿಡುಗಡೆ: ಎಚ್.ಎಸ್. ಶಿವಪ್ರಕಾಶ್, ಪುಸ್ತಕದ ಕುರಿತು: ಎನ್. ಮಂಗಳಾ, ಅತಿಥಿಗಳು: ಶ್ರೀನಿವಾಸ ಜಿ. ಕಪ್ಪಣ್ಣ, ಎಲ್.ಎನ್. ಮುಕುಂದರಾಜ್, ಉಪಸ್ಥಿತಿ: ಟಿ. ವೆಂಕಟೇಶಮೂರ್ತಿ, ಅಧ್ಯಕ್ಷತೆ: ಜಯರಾಮ್ ರಾಯಪುರ, ಆಯೋಜನೆ: ಕಿ.ರಂ. ಪ್ರಕಾಶನ, ಕಾವ್ಯಮಂಡಲ, ಸ್ಥಳ: ಕೃಷ್ಣರಾಜ ಪರಿಷತ್ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5


ಎಚ್.ಎಸ್. ಶಿವಪ್ರಕಾಶ್

ಭರತನಾಟ್ಯ ರಂಗ ಪ್ರವೇಶ: ಪ್ರಸ್ತುತಿ: ಜಿ. ಚೈತನ್ಯ, ಅತಿಥಿಗಳು: ಸತ್ಯನಾರಾಯಣ ರಾಜು, ಶೋಬನಾ ಬಾಲಚಂದ್ರ, ಸೀತಾ ಕೋಟೆ, ಆಯೋಜನೆ: ಶಿವೋಹಂ ನೃತ್ಯ ಶಾಲೆ, ಸ್ಥಳ: ಶಿವರಾತ್ರೇಶ್ವರ ಸೆಂಟರ್ (ಜೆಎಸ್‌ಎಸ್), 1ನೇ ಹಂತ, ಜಯನಗರ, ಸಂಜೆ 6.15

ಶಿಶಿರ ರಂಗೋತ್ಸವ: ಅತಿಥಿಗಳು: ಕೆ.ಎ. ದಯಾನಂದ, ನರೇಂದ್ರಬಾಬು, ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಎನ್. ನಮ್ರತ, ರಾಧಾಕೃಷ್ಣ, 'ಚಂದ್ರಹಾಸ' ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಪ್ರಮೋದ್ ಶಿಗ್ಗಾಂವ್, ಆಯೋಜನೆ: ಪದ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

ಬೆಂಗಳೂರು ಸಂಚಾರ ದಟ್ಟಣೆ ಸುಧಾರಣೆ: ಅತಿಥಿಗಳು: ಎಂ.ಎ. ಸಲೀಂ, ಉಪಸ್ಥಿತಿ: ವಿ. ರವಿಚಂದ್ರ, ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ), ಸಂಜೆ 6.30

'ನಿಖಿಲ್ ಭವಿಷ್ಯವನ್ನು ಜನ ನಿರ್ಧರಿಸುತ್ತಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಖಿಲ್ ಕುಮಾರಸ್ವಾಮಿ ಅವರ ರಾಜಕೀಯ ಭವಿಷ್ಯವನ್ನು ನನಗೆ ರಾಜಕೀಯವಾಗಿ ಜನ್ಮ ನೀಡಿದ ಜನರೇ ತೀರ್ಮಾನ ಮಾಡುತ್ತಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ರಾಮನಗರ ಕ್ಷೇತ್ರದಿಂದ ನಿಖಿಲ್ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುತ್ತಾರೆಯೆ' ಎಂಬ ಪ್ರಶ್ನೆಗೆ ಸುದ್ದಿಗಾರರಿಗೆ ಗುರುವಾರ ಉತ್ತರಿಸಿದ ಅವರು, 'ನಿಖಿಲ್ ಈಗಾಗಲೇ ಸಕ್ರಿಯ ರಾಜಕಾರಣದಲ್ಲಿ ಇದ್ದಾರೆ. ಅವರ ಹೆಸರನ್ನು ಘೋಷಣೆ ಮಾಡುವುದಕ್ಕೆ ನನಗೆ ಯಾವುದೇ ಅಂಜಿಕೆ ಇಲ್ಲ. ನಿಖಿಲ್ ಅವರನ್ನು ಹೇಗೆ ದಡ ಸೇರಿಸುವುದು ಎಂಬ ಚಿಂತೆಯೂ ಇಲ್ಲ. ನನಗೆ ಇರುವುದು ಈ ನಾಡಿನ ಜನರ ಚಿಂತೆ' ಎಂದರು.

ಅಗ್ನಿ–5: ರಾತ್ರಿ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ಭಾರತವು ಅಗ್ನಿ-5 ಹೆಸರಿನ, ಅಣ್ವಸ್ತ್ರ ಹೊತ್ತೊಯ್ಯಬಲ್ಲ ಸಾಮರ್ಥ್ಯದ ಖಂಡಾಂತರ ಕ್ಷಿಪಣಿಯ ರಾತ್ರಿ ವೇಳೆಯ ಪ್ರಯೋಗವನ್ನು ಗುರುವಾರ ಯಶಸ್ವಿಯಾಗಿ ನಡೆಸಿದೆ. ಒಡಿಶಾದ ಕರಾವಳಿಯಲ್ಲಿ ಈ ಪ್ರಯೋಗ ನಡೆದಿದೆ.

ಈ ಕ್ಷಿಪಣಿಯು 5,000 ಕಿಲೊ ಮೀಟರ್ ದೂರದ, ಅಂದರೆ ಚೀನಾದ ಉತ್ತರ ತುದಿಯನ್ನು ಒಳಗೊಂಡಂತೆ ಬಹುತೇಕ ಇಡೀ ಏಷ್ಯಾ ಹಾಗೂ ಯುರೋಪ್‌ನ ಕೆಲ ಪ್ರದೇಶಗಳವರೆಗಿನ ಗುರಿಯ ಮೇಲೆ ದಾಳಿ ನಡೆಸಬಲ್ಲದು ಎಂದು ರಕ್ಷಣಾ ಇಲಾಖೆ ತಿಳಿಸಿದೆ.

ಚೀನಾವು ಗಡಿ ಕ್ಯಾತೆ ತೆಗೆಯುತ್ತಿರುವ ಸಂದರ್ಭದಲ್ಲೇ ಈ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಭಾರತವು ತನ್ನ ಪರಮಾಣು ಶಕ್ತಿಯನ್ನು ಹೆಚ್ಚಿಸಿಕೊಂಡಿದೆ ಎಂದು ಹೇಳಲಾಗಿದೆ. ಚೀನಾ ಡಾಂಗ್‌ಫೆಂಗ್–41 ಹೆಸರಿನ ಕ್ಷಿಪಣಿಯನ್ನು ಹೊಂದಿದೆ. ಇದು 12 ಸಾವಿರದಿಂದ 15 ಸಾವಿರ ಕಿಲೊ ಮೀಟರ್ ದೂರದ ಗುರಿಯ ಮೇಲೆ ದಾಳಿ ನಡೆಸಬಲ್ಲ ಸಾಮರ್ಥ್ಯ ಹೊಂದಿದೆ.

ಅಗ್ನಿ 1,2,3,4 ಹೆಸರಿನ ಕ್ಷಿಪಣಿಗಳನ್ನು ಈಗಾಗಲೇ ರಕ್ಷಣಾ ಪಡೆಗೆ ಸೇರ್ಪಡೆ ಮಾಡಲಾಗಿದೆ. ಇವು 700 ಕಿ.ಮೀ ನಿಂದ 3,500 ಕಿ.ಮೀ ದೂರದ ಗುರಿಯ ಮೇಲೆ ದಾಳಿ ನಡೆಸಬಲ್ಲವಾಗಿವೆ.

ಭಾರತವು ಕಳೆದ ವರ್ಷದ ಅಕ್ಟೋಬರ್‌ನಲ್ಲೂ ಕ್ಷಿಪಣಿಯೊಂದರ ಇದೇ ಮಾದರಿಯ ಪರೀಕ್ಷೆಯನ್ನು ಕೈಗೊಂಡಿತ್ತು.

17 ಮೀಟರ್‌ನಷ್ಟು ಎತ್ತರವಿರುವ ಅಗ್ನಿ–5 ಕ್ಷಿಪಣಿಯು ಅತ್ಯಂತ ನಿಖರವಾಗಿ ಗುರಿಯ ಮೇಲೆ ದಾಳಿ ನಡೆಸುವ ಸಾಮರ್ಥ್ಯ ಹೊಂದಿದೆ. ಇದು 1.5 ಟನ್ ಸಾಮರ್ಥ್ಯದ ಸಿಡಿತಲೆ ಹೊತ್ತೊಯ್ಯಬಲ್ಲದು.

ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಪ್ರಸಿದ್ಧರ ಸಾಧನೆ ಬಿಂಬಿಸಲು ‘ಸಂಗ್ರಹಾಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಸಾಹಿತಿಗಳು, ಕವಿಗಳು ಸೇರಿದಂತೆ ಸಾಂಸ್ಕೃತಿಕ ಲೋಕದ ಪ್ರಸಿದ್ಧರ ಸಾಧನೆಗಳನ್ನು ಬಿಂಬಿಸುವ ಸಂಗ್ರಹಾಲಯ ಶೀಘ್ರ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ, ನುಡಿ ಹಾಗೂ ಗೀತ ನಮನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಸ್ಥಾಪಿಸಲಾಗುವ ತೆರೆದ ಸಂಗ್ರಹಾಲಯದಲ್ಲಿ ಸಾಧಕರ ಪುತ್ಥಳಿಗಳನ್ನು ಪ್ರತಿಷ್ಠಾಪಿಸಲಾಗುವುದು. ಅವರ ಕೊಡುಗೆ, ಸಾಧನೆಗಳನ್ನು ಅನಾವರಣಗೊಳಿಸುವ ಮೂಲಕ ಕನ್ನಡದ ಸಾಂಸ್ಕೃತಿಕ ಹಿರಿಮೆಯನ್ನು ಬಿಂಬಿಸಲಾಗುವುದು, ಸಾಧಕರಿಗೆ ಸಾವಿಲ್ಲ ಎನ್ನುವುದನ್ನು ನಿರೂಪಿಸಲಾಗುವುದು ಎಂದರು.



ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ ಉದ್ಘಾಟನಾ ಸಮಾರಂಭದಲ್ಲಿ ಸುಬ್ಬಣ್ಣ ಅವರ ಗಾಯನದ ಧ್ವನಿಸುರಳಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಅರ್ಚನಾ ಉಡುಪ, ತುಳಸಿ ರಾಮನಾಯ್ಡು (ವೇಲು), ಎಚ್‌.ಎಸ್ ವೆಂಕಟೇಶ ಮೂರ್ತಿ, ಚಂದ್ರಶೇಖರ ಕಂಬಾರ, ಸಚಿವ ಆರ್ ಅಶೋಕ, ಶಾಂತಮ್ಮ ಸುಬ್ಬಣ್ಣ, ಶ್ರೀರಂಗ ಇದ್ದರು –ಪ್ರಜಾವಾಣಿ ಚಿತ್ರ

ಸಂತಶಿಶುನಾಳ ಶರೀಫರು ಹೇಗೆ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಗೀತೆಗಳನ್ನು ಬರೆದರೋ, ಹಾಗೆ ಶಿವಮೊಗ್ಗ ಸುಬ್ಬಣ್ಣ ಅವರು ಎಲ್ಲ ಗೀತೆಗಳನ್ನೂ ಅಮೋಘವಾಗಿ ಹಾಡಿದ್ದಾರೆ. ಅಂತಹ ಸಾಧನೆ ಹೇಗೆ ಸಾಧ್ಯವಾಯಿತು ಎನ್ನುವ ಕುರಿತು ಲೇಖನ ರೂಪದಲ್ಲಿ ಪ್ರಕಟಿಸಬೇಕು. ಆಳವಾದ ಅಧ್ಯಯನ ನಡೆಸಬೇಕು ಎಂದು ಸಲಹೆ ನೀಡಿದರು.

ಕವಿ ಎಚ್‌.ಎಸ್‌.ವೆಂಕಟೇಶಮೂರ್ತಿ ಮಾತನಾಡಿ, ಸುಬ್ಬಣ್ಣ ಅವರು ಕೇವಲ ಗಾಯಕರಾಗಿರಲಿಲ್ಲ. ಅವರಿಗೆ ಗ್ರಂಥಗಳ ಬಗ್ಗೆ ಅಪಾರ ಪ್ರೀತಿ ಇತ್ತು. ಸಾಹಿತ್ಯದ ಬಗ್ಗೆ ಒಲವಿತ್ತು. ಪಠ್ಯ ನೋಡದೇ ಹಾಡುತ್ತಿದ್ದರು. ಹಾಸ್ಯ ಪ್ರಜ್ಞೆ ಸದಾ ಜಾಗೃತವಾಗಿರುತ್ತಿತ್ತು. ತಮ್ಮ ಕೊನೆಯ ದಿನಗಳ ಮರೆವಿನಲ್ಲೂ ಗೀತೆಗಳನ್ನು ತಪ್ಪಿಲ್ಲದೇ ಹಾಡುತ್ತಿದ್ದರು ಎಂದು ಸ್ಮರಿಸಿದರು.

ಕಂದಾಯ ಸಚಿವ ಆರ್. ಅಶೋಕ್, ಲಹರಿ ಆಡಿಯೊ ಸಂಸ್ಥೆ ಅಧ್ಯಕ್ಷ ತುಳಸಿರಾಮ ನಾಯ್ಡು, ಶಾಂತಮ್ಮ ಶಿವಮೊಗ್ಗ ಸುಬ್ಬಣ್ಣ ಉಪಸ್ಥಿತರಿದ್ದರು.

ಅಂಟಿಕೊಂಡ ಶಿವಮೊಗ್ಗ ಸುಬ್ಬಣ್ಣ ಹೆಸರು

ಕಾಡುಕುದುರೆ ಚಿತ್ರಕ್ಕೆ ಹಾಡಿಸಲು ಸುಬ್ಬಣ್ಣ ಕರೆದುಕೊಂಡು ಮದ್ರಾಸ್‌ಗೆ ಬಂದಿದ್ದೆವು. ಹಲವು ಟೇಕ್‌ಗಳ ನಂತರ ವಾಪಸ್ ಬೆಂಗಳೂರಿಗೆ ಮರಳಿದರು. ಅವರ ನೈಜ ಹೆಸರು ಗೊತ್ತಿರಲಿಲ್ಲ. ಗಾಯಕರ ಹೆಸರು ನಮೂದಿಸುವಾಗ ನಾನೇ ಶಿವಮೊಗ್ಗ ಸುಬ್ಬಣ್ಣ ಎಂದು ಬರೆಸಿದೆ. ಅವರದು ಶಿವಮೊಗ್ಗ ಎನ್ನುವ ಕಾರಣಕ್ಕೆ ಆ ಹೆಸರು ಬರೆಸಿದೆ. ಹಾಡಿಗೆ ಪ್ರಶಸ್ತಿಯೂ ಬಂತು. ಆ ಹೆಸರೇ ಶಾಶ್ವತವಾಗಿ ಉಳಿಯಿತು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ನೆನಪಿನ ಬುತ್ತಿ ಹಂಚಿಕೊಂಡರು.

ಎಸಿಬಿ ಅಧಿಕಾರಿ, ಸಿಬ್ಬಂದಿ ಹಂಚಿಕೆ ● 40 ಠಾಣೆಗಳು ಮೇಲ್ದರ್ಜೆಗೆ

9 ಉಪ ವಿಭಾಗ, 4 ಠಾಣೆ ಆರಂಭಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ಗೃಹ ಇಲಾಖೆಗೆ ಹಂಚಿಕೆಯಾಗಿದ್ದ 221 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ಬಳಸಿಕೊಂಡು ಒಂಬತ್ತು ಹೊಸ ಪೊಲೀಸ್ ಉಪ ವಿಭಾಗ ಹಾಗೂ ಬೆಂಗಳೂರಿನಲ್ಲಿ ನಾಲ್ಕು ಹೊಸ ಸಂಚಾರ ಪೊಲೀಸ್ ಠಾಣೆಗಳನ್ನು ಆರಂಭಿಸಲು ಅನುಮತಿ ನೀಡಿ ಗೃಹ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ರಾಜ್ಯ ಗುಪ್ತವಾರ್ತೆ ವಿಭಾಗಕ್ಕೆ ಐದು, ಮಂಗಳೂರು, ಹುಬ್ಬಳ್ಳಿ–ಧಾರವಾಡ ಹಾಗೂ ಕಲಬುರಗಿ ನಗರ ಪೊಲೀಸ್ ಕಮಿಷನರೇಟ್‌ಗಳ ಸಿಸಿಬಿ ಘಟಕಗಳಿಗೆ ತಲಾ ಒಂದು ಡಿವೈಎಸ್‌ಪಿ ಹುದ್ದೆಗಳನ್ನು ಹಂಚಿಕೆ ಮಾಡಲಾಗಿದೆ. ಎಸಿಬಿಯಲ್ಲಿರುವವರಲ್ಲಿ ಬಾಕಿ ಉಳಿಯುವ 33 ಹಾಗೂ ಇಲಾಖೆಯಲ್ಲಿ ಹೆಚ್ಚುವರಿಯಾಗಿರುವ ಏಳು ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ಬಳಸಿಕೊಂಡು 15 ಜಿಲ್ಲೆಗಳ 40 ಪೊಲೀಸ್ ಠಾಣೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೂ ಒಪ್ಪಿಗೆ ನೀಡಲಾಗಿದೆ.

ತಲಘಟ್ಟಪುರ, ಬೆಳ್ಳಂದೂರು, ಹೆಣ್ಣೂರು ಮತ್ತು ಮಹದೇವಪುರ ಸಂಚಾರ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಒಪ್ಪಿಗೆ ನೀಡಲಾಗಿದೆ. ತಲಾ ಒಬ್ಬ ಇನ್‌ಸ್ಪೆಕ್ಟರ್, ಒಟ್ಟು 46 ಹೆಡ್ ಕಾನ್‌ಸ್ಟೆಬಲ್, 115 ಕಾನ್‌ಸ್ಟೆಬಲ್ ಸೇರಿದಂತೆ 165 ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಈ ಠಾಣೆಗಳಿಗೆ ಹಂಚಿಕೆ ಮಾಡಲಾಗಿದೆ.

ಒಂಬತ್ತು ಉಪ ವಿಭಾಗ: ಬೆಂಗಳೂರು ನಗರದಲ್ಲಿ ವಿಜಯನಗರ ಸಂಚಾರ ಉಪ ವಿಭಾಗ, ಎಚ್‌.ಎಸ್‌.ಆರ್. ಬಡಾವಣೆ ಸಂಚಾರ ಉಪ ವಿಭಾಗ, ಪೀಣ್ಯ, ಉಪ ವಿಭಾಗ, ಕೆಂಗೇರಿ ಉಪ ವಿಭಾಗಗಳು, ಮೈಸೂರು ನಗರದಲ್ಲಿ ವಿಜಯನಗರ ಉಪ ವಿಭಾಗ, ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ–2 ಉಪ ವಿಭಾಗ, ಹಾಸನ ಜಿಲ್ಲೆಯಲ್ಲಿ ಚನ್ನರಾಯಪಟ್ಟಣ ಉಪ ವಿಭಾಗ, ವಿಜಯಪುರ ಜಿಲ್ಲೆಯಲ್ಲಿ ವಿಜಯಪುರ ಗ್ರಾಮಾಂತರ ಉಪ ವಿಭಾಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳ್ತಂಗಡಿ ಉಪ ವಿಭಾಗಗಳನ್ನು ಸೃಜಿಸಲಾಗಿದೆ.

ವೃತ್ತ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿದ್ದ 40 ಠಾಣೆಗಳನ್ನು ಪೊಲೀಸ್ ಇನ್‌ಸ್ಪೆಕ್ಟರ್ ನೇತೃತ್ವದ ಠಾಣೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ನಾಲ್ಕು ತಿಂಗಳಿಂದ ಕೆಲಸವಿಲ್ಲದೆ ಕಾಲಹರಣ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳವನ್ನು(ಎಸಿಬಿ) ರದ್ದುಗೊಳಿಸಿ ಹೈಕೋರ್ಟ್ ವಿಭಾಗೀಯ ಪೀಠ ಆಗಸ್ಟ್ 11ರಂದು ತೀರ್ಪು ನೀಡಿತ್ತು. ಅಂದಿನಿಂದಲೇ ಎಸಿಬಿಯ ಎಲ್ಲ ಅಧಿಕಾರಿಗಳು, ಸಿಬ್ಬಂದಿ ಕೆಲಸ ಸ್ಥಗಿತಗೊಳಿಸಿದ್ದರು. ಎಸಿಬಿಯಲ್ಲಿದ್ದ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಬೇರೆಡೆ ವರ್ಗಾವಣೆ ಮಾಡಲಾಗಿತ್ತು.

ಒಟ್ಟು 445 ಅಧಿಕಾರಿಗಳು ಮತ್ತು ಸಿಬ್ಬಂದಿ ಎಸಿಬಿಯಲ್ಲೇ ಉಳಿದಿದ್ದರು. ಲೋಕಾಯುಕ್ತ ಮತ್ತು ಗೃಹ ಇಲಾಖೆಗೆ ಶೇಕಡ 50ರಷ್ಟು ಹುದ್ದೆಗಳನ್ನು ಹಂಚಿಕೆ ಮಾಡಿ ನವೆಂಬರ್ 19ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಈ ಹುದ್ದೆಗಳಿಗೆ ಮಂಜೂರಾತಿ ಇಲ್ಲದ ಕಾರಣದಿಂದ ತಿಂಗಳು ಕಳೆದರೂ ಸ್ಥಳನಿಯುಕ್ತಿ ಸಾಧ್ಯವಾಗಿರಲಿಲ್ಲ.

ಈ ಕುರಿತು ‘ಪ್ರಜಾವಾಣಿ’ಯ ಡಿ.10ರ ಸಂಚಿಕೆಯಲ್ಲಿ ವರದಿ ಪ್ರಕಟಿಸಲಾಗಿತ್ತು. ಡಿ.12ರಂದು ಆರ್ಥಿಕ ಇಲಾಖೆಗೆ ಪ್ರಸ್ತಾವ ಕಳುಹಿಸಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಈ ಹುದ್ದೆಗಳ ಸೃಜನೆಗೆ ಮಂಜೂರಾತಿ ಕೋರಿದ್ದರು. ಆರ್ಥಿಕ ಇಲಾಖೆಯು ಒಪ್ಪಿಗೆ ನೀಡಿ ಬುಧವಾರ ಆದೇಶ ಹೊರಡಿಸಿತ್ತು.

ಬಹುನಿರೀಕ್ಷಿತ ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಚಾಲನೆ

ಭೂಮಿಪೂಜೆ ನೆರವೇರಿಸಿದ ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುನಿರೀಕ್ಷಿತ ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್‌.ಆರ್. ವಿಶ್ವನಾಥ್ ಗುರುವಾರ ಭೂಮಿಪೂಜೆ ನೆರವೇರಿಸಿದರು.

ಯಲಹಂಕ ವಿಧಾನಸಭಾ ಕ್ಷೇತ್ರದ 17 ಗ್ರಾಮಗಳ 3,546 ಎಕರೆ ಪ್ರದೇಶದಲ್ಲಿ ₹2,600 ಕೋಟಿ ವೆಚ್ಚದಲ್ಲಿ ಮುಂದಿನ 18 ತಿಂಗಳಲ್ಲಿ ಬಡಾವಣೆ ನಿರ್ಮಾಣವಾಗಲಿದೆ. ಸುಮಾರು 22 ಸಾವಿರ ನಿವೇಶನಗಳನ್ನು 60:40 ಅನುಪಾತದಲ್ಲಿ ರೈತರು ಮತ್ತು ಸಾರ್ವಜನಿಕರಿಗೆ ಹಂಚಿಕೆ ಮಾಡುವ ಗುರಿಯನ್ನು ಬಿಡಿಎ ಹೊಂದಿದೆ.

ಹಾರೋಹಳ್ಳಿ, ಆವಲಹಳ್ಳಿ, ರಾಮಗೊಂಡನಹಳ್ಳಿ, ಕೆಂಪನಹಳ್ಳಿ, ಜಾರಕಬಂಡೆ ಕಾವಲ್, ವೀರಸಾಗರ, ದೊಡ್ಡಬೆಟ್ಟಹಳ್ಳಿ, ಶಾಮರಾಜಪುರ, ವಡೇರಹಳ್ಳಿ, ಮೇಡಿಅಗ್ರಹಾರ, ಬ್ಯಾಲಕೆರೆ, ಕಾಳತಮ್ಮನಹಳ್ಳಿ, ಗುಣಿ ಅಗ್ರಹಾರ, ಸೋಮಶೆಟ್ಟಿಹಳ್ಳಿ, ಲಕ್ಷ್ಮಿಪುರ, ಗಾಣಿಗರಹಳ್ಳಿ, ಕೆಂಪಾಪುರ ಗ್ರಾಮಗಳಲ್ಲಿ ಶಿವರಾಮ ಕಾರಂತ ಬಡಾವಣೆ ನಿರ್ಮಾಣವಾಗಲಿದೆ.

ವಿಶ್ವನಾಥ್ ಮಾತನಾಡಿ, ‘ಈ ಹಿಂದಿನ ಬಡಾವಣೆಗಳಂತೆ ಇದು ಸಹ ಆಗುತ್ತದೆ ಎನ್ನುವ ಆತಂಕ ಇತ್ತು. ಆದರೆ, ಸುಪ್ರೀಂ ಕೋರ್ಟ್ ಸಮಿತಿಯೊಂದನ್ನು ರಚಿಸಿ ಬಡಾವಣೆ ನಿರ್ಮಿಸಲು ಅನುಮತಿ ನೀಡಿದೆ’ ಎಂದರು.



ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್ ಗುರುವಾರ ಭೂಮಿ ಪೂಜೆ ನೆರವೇರಿಸಿದರು

‘ಫೆಬ್ರುವರಿ ವೇಳೆಗೆ ರೈತರಿಗೆ ಮೊದಲ ಕಂತಿನಲ್ಲಿ ಅಭಿವೃದ್ಧಿಪಡಿಸಿದ ನಿವೇಶನ ಹಂಚಿಕೆ ಮಾಡುವ ಉದ್ದೇಶವಿದೆ. ಭೂಮಿ ನೀಡಿದ ರೈತರಿಗೆ ಉಚಿತವಾಗಿ ನಿವೇಶನ ನೋಂದಣಿ ಮಾಡಿಕೊಡಲಾಗುತ್ತದೆ. ರೈತರು ತಮಗೆ ಹಣದ ರೂಪದಲ್ಲಿ ಅಥವಾ 60:40 ಅನುಪಾತದಲ್ಲಿ ಅಭಿವೃದ್ಧಿ ಪಡಿಸಿದ ನಿವೇಶನಗಳನ್ನು ಪಡೆಯಬಹುದಾಗಿದೆ’ ಎಂದರು.

‘ಕಾರಂತ ಬಡಾವಣೆಗೆ ಭೂಸ್ವಾಧೀನ ಅಧಿಸೂಚನೆ ಹೊರಡಿಸಿದ ಜಾಗದಲ್ಲಿ ಸುಮಾರು 4500 ಮನೆಗಳನ್ನು ನೆಲಸಮ ಮಾಡಬೇಕಿತ್ತು. ನಾವು ಸುಪ್ರೀಂ ಕೋರ್ಟ್ ಸಮಿತಿಗೆ ಮನವಿ ಮಾಡಿಕೊಂಡಿದ್ದರಿಂದ ಈ ಮನೆಗಳನ್ನು ನೆಲಸಮ ಮಾಡದಿರುವ ನಿರ್ಧಾರಕ್ಕೆ ಬರಲಾಗಿದೆ. ಅಲ್ಲದೇ, ಸುಮಾರು 5,000 ರೆವಿನ್ಯೂ ನಿವೇಶನದಾರರಿಗೆ ನಿಗದಿತ ಶುಲ್ಕ ಕಟ್ಟಿಸಿಕೊಂಡು ಬದಲಿ ನಿವೇಶನ ನೀಡುವ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಬಿಡಿಎ ಆಯುಕ್ತ ಕುಮಾರ ನಾಯಕ್ ಮಾತನಾಡಿ, ‘ಬೆಂಗಳೂರು ನಗರದ ವಿಸ್ತರಣೆಯಲ್ಲಿ ರೈತರ ತ್ಯಾಗ ಅತ್ಯಮೂಲ್ಯವಾದುದು. ಕಾರಂತ ಬಡಾವಣೆಗೆ ಭೂಮಿ ನೀಡಿರುವ ರೈತರ ಹಿತ ಕಾಪಾಡುವಲ್ಲಿ ಬಿಡಿಎ ಬದ್ಧವಾಗಿದೆ. ಯಾರಿಗೂ ಕಷ್ಟವಾಗದ ರೀತಿಯಲ್ಲಿ ನಾವು ಬಡಾವಣೆಯನ್ನು ಅಭಿವೃದ್ಧಿಪಡಿಸಲಿದ್ದೇವೆ’ ಎಂದು ತಿಳಿಸಿದರು.

ಎಂಜಿನಿಯರ್ ಸದಸ್ಯ ಶಾಂತ ರಾಜಣ್ಣ, ಕಾರ್ಯದರ್ಶಿ ಶಾಂತರಾಜು, ಅಧಿಕಾರಿಗಳಾದ ನಂಜುಂಡೇಗೌಡ, ರವಿಕುಮಾರ್, ಡಾ.ಸೌಜನ್ಯ, ಡಾ.ಬಸಂತಿ ಇದ್ದರು.

ಬಿಡಬ್ಲ್ಯುಎಸ್‌ಎಸ್‌ಬಿ: ಗ್ರಾಹಕರ ಹಣ ದುರುಪಯೋಗ– ತನಿಖೆಗೆ ಸೂಚನೆ

ಬೆಂಗಳೂರು: ನೀರಿನ ಕಂದಾಯವನ್ನು ಗ್ರಾಹಕರಿಂದ ಸಂಗ್ರಹಿಸಿದ ನಗದನ್ನು ಮಂಡಳಿಗೆ ಪಾವತಿಸದೆ ಕೋಟ್ಯಂತರ ರೂಪಾಯಿ ದುರುಪಯೋಗವಾಗಿದ್ದು, ಈ ಬಗ್ಗೆ ತನಿಖೆ ನಡೆಸಲು ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರು ಸೂಚಿಸಿದ್ದಾರೆ.

ಜಲಮಂಡಳಿಯ ದಕ್ಷಿಣ, ಆಗ್ನೇಯ, ನೈರುತ್ಯ, ಉತ್ತರ, ಈಶಾನ್ಯ ನಿರ್ವಹಣಾ ಉಪ ವಿಭಾಗಗಳಲ್ಲಿ ಮ್ಯಾನುಯಲ್ ಕ್ಯಾಷ್ ಕೌಂಟರ್ ಮೂಲಕ ನೀರಿನ ಕಂದಾಯವನ್ನು ನಗದು ರೂಪದಲ್ಲಿ ಸಂಗ್ರಹಿಸಲು ಆದೇಶಿಸಲಾಗಿತ್ತು. ಗ್ರಾಹಕರು ನಗದಾಗಿ ಪಾವತಿಸಿದ ನೀರಿನ ಕಂದಾಯವನ್ನು ಸಜಲ ತಂತ್ರಾಂಶದಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಕಂದಾಯ ವ್ಯವಸ್ಥಾಪಕ, ಹಿರಿಯ ಜಲಪರಿವೀಕ್ಷಕರ ಲಾಗಿನ್, ಪಾಸ್‌ವರ್ಡ್ ಬಳಸಿ ನಕಲಿ ಪಾವತಿಯನ್ನು ದಾಖಲಿಸಲಾಗಿದೆ. ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬುದು ಮಂಡಳಿಯ ಪ್ರಥಮ ಪರಿಶೋಧನೆ ಹಾಗೂ ತನಿಖೆಯಿಂದ ತಿಳಿದುಬಂದಿದೆ.

ಗ್ರಾಹಕರಿಂದ ಚೆಕ್/ಡಿಡಿ ಹಾಗೂ ನಗದನ್ನು ಪಡೆದು, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಕಂದಾಯ ವ್ಯವಸ್ಥಾಪಕರಿಗೆ ಸಜಲ ತಂತ್ರಾಂಶದಲ್ಲಿ ದಾಖಲಿಸುವ ಜವಾಬ್ದಾರಿ ವಹಿಸಲಾಗಿತ್ತು. ಅವರ ಲಾಗಿನ್‌ನಲ್ಲಿ ನಕಲಿ ದಾಖಲೆ ಮಾಡಲಾಗಿದೆ. ಹಣ ಮಾತ್ರ ಮಂಡಳಿಗೆ ಪಾವತಿಯಾಗಿಲ್ಲ. ಹೊರ ಗುತ್ತಿಗೆದಾರರು ನಗದನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿತ್ತು. ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ.

ಹಣ ಎಷ್ಟು ದುರಪಯೋಗವಾಗಿದೆ ಎಂಬುದರ ಬಗ್ಗೆ ಮಾಹಿತಿ ಇರಲಿಲ್ಲ. ಈ ಬಗ್ಗೆ ಐದು ವರ್ಷಗಳಿಂದ ಮುಂದಿನ ತನಿಖೆ ನಡೆದಿರಲಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಮಂಡಳಿ ಅಧ್ಯಕ್ಷ ಜಯರಾಂ ಅವರು ಡಿ.12ರಂದು ತನಿಖೆಗೆ ಆದೇಶಿಸಿದ್ದಾರೆ. ಅವರ ಸೂಚನೆಯಂತೆ ಜಲಮಂಡಳಿಯ ನಿರ್ವಹಣಾ ಉಪವಿಭಾಗಗಳಲ್ಲಿ ಮ್ಯಾನ್ಯುಯಲ್ ಕ್ಯಾಷ್ ಕೌಂಟರ್ ಮೂಲಕ ಸಂಗ್ರಹವಾಗಿರುವ ನೀರಿನ ಕಂದಾಯದ ಬಗ್ಗೆ ಪರಿಶೋಧಿಸಲು ಮೂರು ವಿಶೇಷ ಆಡಿಟ್ ತಂಡಗಳನ್ನು ರಚಿಸಿ, ಮುಖ್ಯ ಆಡಳಿತಾಧಿಕಾರಿ ಡಿ.13ರಂದು ಆದೇಶ ಹೊರಡಿಸಿದ್ದಾರೆ.

ಸಹಾಯಕ ಲೆಕ್ಕ ನಿಯಂತ್ರಕ ಜಿ. ಶಂಕರಾಚಾರ್ಯ ಅವರ ನೇತೃತ್ವದಲ್ಲಿ ಆರ್‌.ಡಿ. ವೆಂಕಟೇಶ್, ಸಿದ್ದಲಿಂಗಯ್ಯ, ಕವಿತಾ, ಲಕ್ಷ್ಮಣ್ ತಳವಾರ್; ಸುರೇಶ್‌ಕುಮಾರ್, ರಘುನಂದನ್, ಚೇತನ್; ಆಶಾಕಾಂತಿ, ಮಹೇಶ್, ವಿಶ್ವನಾಥ ಕುಳಗೇರಿ ಅವರ ಮೂರು ತಂಡವನ್ನು ರಚಿಸಲಾಗಿದೆ. ಈ ತಂಡಗಳು ಕೂಡಲೇ ಪರಿಶೋಧನೆ ಕಾರ್ಯ ನಡೆಸಿ, ಡಿ.21ರೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ.

ಶಿವಮೂರ್ತಿ ಶರಣರ ಅಧಿಕಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಶರಣರ ಅಧಿಕಾರವನ್ನು ಪ್ರಕರಣ ಇತ್ಯರ್ಥವಾಗುವವರೆಗೆ ನಿರ್ಬಂಧಿಸಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ಆದೇಶಿಸಿದೆ.

ಮುರುಘಾ ಮಠ ಹಾಗೂ ಎಸ್‌ಜೆಎಂ ವಿದ್ಯಾಪೀಠದಲ್ಲಿ ಶಿವಮೂರ್ತಿ ಶರಣರು ಹೊಂದಿದ್ದ ಅಧಿಕಾರವನ್ನು ‘ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ–1988’ ಸೆಕ್ಷನ್ 8ರ ಅಡಿಯಲ್ಲಿ ನಿರ್ಬಂಧಿಸಲಾಗಿದೆ.

ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ ಮತ್ತು ದೌರ್ಜನ್ಯ ತಡೆ ಕಾಯ್ದೆಯಡಿ ಆ. 28ರಂದು ಗ್ರಾಮಾಂತರ ಠಾಣೆಯಲ್ಲಿ ದಾಖಲಾದ ಪ್ರಕರಣದ ತನಿಖೆ ನಡೆಸಿದ ಪೊಲೀಸರಿಗೆ, ‘ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ’ ಉಲ್ಲಂಘನೆಯಾಗಿರುವುದು ಕಂಡುಬಂದಿತ್ತು. ಕಾಯ್ದೆಯ ಸೆಕ್ಷನ್– 3 ಮತ್ತು 7ರ ಅಡಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಇದನ್ನು ಆಧರಿಸಿ ಪೀಠಾಧ್ಯಕ್ಷರ ಅಧಿಕಾರವನ್ನು ನಿರ್ಬಂಧಿಸುವಂತೆ ಕೋರಿ ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರಿ ವಕೀಲರಾದ ಕೆ.ಬಿ. ನಾಗವೇಣಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿ ಆದೇಶ ಕಾಯ್ದಿರಿಸಿದ್ದ ನ್ಯಾಯಾಧೀಶೆ ಬಿ.ಕೆ. ಕೋಮಲಾ ಗುರುವಾರ ಆದೇಶ ಪ್ರಕಟಿಸಿದರು.

ಹೈಕೋರ್ಟ್‌ಗೆ ಮೊರೆ– ವಕೀಲ: ಜಿಲ್ಲಾ ನ್ಯಾಯಾಲಯ ನೀಡಿದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗುತ್ತೇವೆ ಎಂದು ಮುರುಘಾ ಮಠದ ಪರ ವಕೀಲ ಉಮೇಶ್ ತಿಳಿಸಿದರು.

ಪಿ.ಎಸ್. ವಸ್ತ್ರದ್ ಅಧಿಕಾರ ಸ್ವೀಕಾರ: ಮುರುಘಾ ಮಠದ ‘ಶ್ರೀಚಿನ್ಮುಲಾದ್ರಿ ಬೃಹನ್ಮಠ ಟ್ರಸ್ಟ್’ ಹಾಗೂ ಎಸ್‌ಜೆಎಂ ವಿದ್ಯಾಪೀಠದ ಆಡಳಿತಾಧಿಕಾರಿಯಾಗಿ ರಾಜ್ಯ ಸರ್ಕಾರದಿಂದ ನೇಮಕಗೊಂಡ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ವಸ್ತ್ರದ್ ಗುರುವಾರ ಅಧಿಕಾರ ಸ್ವೀಕರಿಸಿದರು.

ರಿಟ್: ಮಠಕ್ಕೆ ಆಡಳಿತಾಧಿಕಾರಿ ನೇಮಕ ಮಾಡಿದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ರಿಟ್ ಅರ್ಜಿ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠದ ಮುಂದೆ ಶುಕ್ರವಾರ (ಡಿ.16) ವಿಚಾರಣೆಗೆ ನಿಗದಿಯಾಗಿದೆ.

ಸೌಭಾಗ್ಯ ಬಸವರಾಜನ್ ಪೊಲೀಸ್ ವಶಕ್ಕೆ



ಸೌಭಾಗ್ಯ ಬಸವರಾಜನ್

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಪಿತೂರಿ ನಡೆಸಿದ ಆರೋಪದಡಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ಅವರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನಕ್ಕೆ ಪೊಲೀಸ್ ತಂಡ ರಚಿಸಲಾಗಿತ್ತು. ದಾವಣಗೆರೆಯಲ್ಲಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಇಲಾಖೆಯ ಮೂಲಗಳು ಮಾಹಿತಿ ನೀಡಿವೆ.

ಬಂಧನ ಭೀತಿ ಎದುರಿಸುತ್ತಿದ್ದ ಸೌಭಾಗ್ಯ, ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಅರ್ಜಿ ವಜಾ ಮಾಡಿತ್ತು. ಇದೇ ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ಸೌಭಾಗ್ಯ ಅವರ ಪತಿ ಎಸ್‌.ಕೆ. ಬಸವರಾಜನ್, ಶಿಕ್ಷಕ ಬಸವರಾಜೇಂದ್ರ, ಛಾಯಾಚಿತ್ರಗ್ರಾಹಕ ಮಯೂರ ಬಂಧಿತರಾಗಿದ್ದಾರೆ.

ಡಿ.30ರ ಒಳಗೆ ’2ಎ’ಗೆ ಸೇರಿಸಿ: ಬಲಿಜರ ಗಡುವು

ಬೆಂಗಳೂರು: ಚಳಿಗಾಲದ ವಿಧಾನ ಮಂಡಲ ಅಧಿವೇಶನ ಮುಗಿಯುವ ಮುನ್ನ ಬಲಿಜ ಸಮಾಜಕ್ಕೆ ಪ್ರವರ್ಗ 2ಎ ಮೀಸಲಾತಿ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಆಗ್ರಹಿಸಿದೆ.

ಮೀಸಲಾತಿಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಡಿ.30ರ ಒಳಗೆ ಸಮುದಾಯದ ಮನವಿಗೆ ಸರ್ಕಾರದ ಸ್ಪಂದಿಸದಿದ್ದರೆ ರಾಜ್ಯದಾದ್ಯಂತ ಮತ್ತೊಮ್ಮೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ತಿಳಿಸಿದೆ.

ನ್ಯಾಯಮೂರ್ತಿ ಭಕ್ತವತ್ಸಲಂ ವರದಿ ಪ್ರಕಾರ ಸುಮಾರು 820 ಹಿಂದುಳಿದ ಜಾತಿಗಳಿವೆ. ಇವುಗಳಲ್ಲಿ ಕೇವಲ 156 ಜಾತಿಗಳಿಗೆ ಮಾತ್ರ ಮೀಸಲಾತಿ ಕಲ್ಪಿಸಲಾಗಿದೆ. ಇದರಿಂದ ಪ್ರಬಲ ಜಾತಿಗಳ ಜತೆ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸ್ಪರ್ಧಿಸಲು ಸಾಧ್ಯವಾಗದ ಕಾರಣ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರೆಯುತ್ತಿಲ್ಲ ಎಂದು ವೇದಿಕೆಯ ಅಧ್ಯಕ್ಷ ಎನ್‌.ಪಿ. ಮುನಿಕೃಷ್ಣ ಮತ್ತು ಪ್ರಧಾನ ಕಾರ್ಯದರ್ಶಿ ಎಸ್. ರಮೇಶ್ ತಿಳಿಸಿದ್ದಾರೆ.

ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ



ಎಂ. ಶಕುಂತಲಾ ಹನುಮಂತಪ್ಪ




ಪಿ.ಕೆ. ಖಂಡೋಬಾ



ಬಿ. ಹೀರಾ ನಾಯ್ಕ



ಡಿ.ಬಿ. ನಾಯಕ



ಗಂಗಪ್ಪ ಖೇಮಪ್ಪ ಲಮಾಣಿ

ಬೆಂಗಳೂರು: ಜೀವಮಾನ ಸಾಧನೆ ಮಾಡಿದ ಮತ್ತು ವಿವಿಧ ಕಲಾ ಪ್ರಕಾರಗಳ ಕಲಾವಿದರಿಗೆ ನೀಡುವ 2022ನೇ ಸಾಲಿನ ಪ್ರಶಸ್ತಿಗಳನ್ನು ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿ ಘೋಷಿಸಿದೆ.

2022ನೇ ಸಾಲಿನ ಜೀವನಮಾನ ಸಾಧನೆ ಮಾಡಿರುವ ಚಿಕ್ಕಮಗಳೂರು ಜಿಲ್ಲೆಯ ಎಂ. ಶಕುಂತಲಾ ಹನುಮಂತಪ್ಪ, ಬಾಗಲಕೋಟೆ ಜಿಲ್ಲೆಯ ಪಿ.ಕೆ. ಖಂಡೋಬಾ, ದಾವಣಗೆರೆಯ ಜಿಲ್ಲೆಯ ಬಿ. ಹೀರಾನಾಯಕ, ಕಲಬುರಗಿ ಜಿಲ್ಲೆಯ ಡಿ.ಬಿ. ನಾಯಕ, ಬೆಳಗಾವಿ ಜಿಲ್ಲೆಯ ಗಂಗಪ್ಪ ಖೇಮಪ್ಪ ಲಮಾಣಿ ಆಯ್ಕೆಯಾಗಿದ್ದಾರೆ.

ವಿವಿಧ ಕಲಾ ಪ್ರಕಾರಗಳಲ್ಲಿ ನೀಡುವ ಪ್ರಶಸ್ತಿಗೆ ವಿಜಯಪುರ ಜಿಲ್ಲೆಯ ಗುಲಾಬ್ ಸಿಂಗ ಮೇಗು ಪತ್ತಾರ (ಆಭರಣ ಕಲೆ), ವಿಜಯನಗರ ಜಿಲ್ಲೆಯ ಕೊಟ್ರೇಶ ನಾಯ್ಕ(ಹಲಗೆ ವಾದನ), ದಾವಣಗೆರೆ ಜಿಲ್ಲೆಯವರಾದ ಉಮ್ಮಾನಾಯ್ಕ (ಸಾರಂಗಿ ಕಥನ ಗೀತೆ) ಮತ್ತು ಗುಂಡಾ ಚಂದ್ರಾ ನಾಯ್ಕ (ಕಥನ ಗೀತೆ), ಬಳ್ಳಾರಿ ಜಿಲ್ಲೆಯ ಶಾಂತಬಾಯಿ ಕಾಶ್ಯಾನಾಯ್ಕ (ಕಸೂತಿ ಕಲೆ), ಗದಗ ಜಿಲ್ಲೆಯ ಸಾವಿತ್ರಿ ಮಾಂತೇಶ ಲಮಾಣಿ (ಜಾನಪದ ಹಾಡು), ಬೀದರ್ ಜಿಲ್ಲೆಯ ಸೋಪ ನರಾವ ರೂಪ್ಲಾ (ಹೋಳಿ ಹಾಡು), ಚಿತ್ರದುರ್ಗ ಜಿಲ್ಲೆಯ ಪು ಟ್ಟಿ ಬಾ ಯಿ ಮಿ ಟ್ಯಾ ನಾ ಯ್ಕ (ವಳಂಗ ಗೀತೆ), ಹಾವೇರಿ ಜಿಲ್ಲೆಯ ದೇವಲಪ್ಪ ಟೀಕಪ್ಪ ಲಮಾಣಿ (ಡೋ ಡೋ ನಂಗಾರಾ ಗೀತೆ) ಮತ್ತು ಕೊಪ್ಪಳ ಜಿಲ್ಲೆಯ ಮಂಜುನಾಥ ಚಂದ್ರಗಿರಿ ಬುವನವರ (ಧಾರ್ಮಿಕ ವೃತ್ತಿಕಲೆ) ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗೆಲುವಿಗೆ ಕಾರ್ಯತಂತ್ರ: ಬಿಜೆಪಿ ವರಿಷ್ಠರ ಚರ್ಚೆ

ನವದೆಹಲಿ: ರಾಷ್ಟ್ರರಾಜಧಾನಿಯಲ್ಲಿ ಇತ್ತೀಚೆಗೆ ಬಿಜೆಪಿಯ ಹಿರಿಯ ಮುಖಂಡ ಸಭೆ ನಡೆದಿದ್ದು, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಒಕ್ಕಲಿಗ ಹಾಗೂ ಲಿಂಗಾಯತರ ಮತಗಳನ್ನು ಪಡೆಯಲು ಅನುಸರಿಸಬೇಕಾದ ಕಾರ್ಯತಂತ್ರ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು.

ಹಳೆ ಮೈಸೂರು ಭಾಗದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಬಗೆ, ನಳಿನ್‌ಕುಮಾರ್ ಕಟೀಲ್ ಅವರನ್ನೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮುಂದುವರಿಸಬೇಕೇ, ಬೇಡವೇ?. ರಾಜ್ಯದ ಮೂಲಕ ಹಾಯ್ದು ಹೋದ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರ ಬಗ್ಗೆ ಬಿಜೆಪಿ ನಾಯಕರು ಚರ್ಚಿಸಿದರು ಎಂದು ಮೂಲಗಳು ಹೇಳಿವೆ.

ಕರ್ನಾಟಕವಲ್ಲದೇ, ಉತ್ತರ ಪ್ರದೇಶ ಹಾಗೂ ತ್ರಿಪುರಾ ರಾಜ್ಯಗಳಲ್ಲಿನ ಪಕ್ಷದ ಸ್ಥಿತಿ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಜ್ಯ ಉಸ್ತುವಾರಿಗಳು, ಪ್ರಧಾನ ಕಾರ್ಯದರ್ಶಿಗಳು ಸಭೆಯಲ್ಲಿ ಉಪಸ್ಥಿತರಿದ್ದರು ಎಂದು ಇವೇ ಮೂಲಗಳು ಹೇಳಿವೆ.

ಜೆಡಿಎಸ್ ಸಖ್ಯ?: ಮುಂಬರುವ ಚುನಾವಣೆಗೆ ಸಂಬಂಧಿಸಿದಂತೆ ಜೆಡಿಎಸ್‌ನ ನಡೆ ಬಗ್ಗೆ ಗಮನವಿರಿಸಬೇಕು ಎಂಬ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು ಎನ್ನಲಾಗಿದೆ.

ಗಮನಾರ್ಹವೆಂದರೆ, ಬಿಜೆಪಿ ವರಿಷ್ಠರ ಉಪಸ್ಥಿತಿಯಲ್ಲಿ-ರಾಜ್ಯ ಬಿಜೆಪಿ ನಾಯಕರ ಸಭೆ ನಡೆದ ದಿನವೇ, ಇತ್ತ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು. ಅಂತರರಾಜ್ಯ ನದಿ ವಿವಾದಗಳಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯ ಹಾಗೂ ಇತರ ವಿಷಯಗಳ ಕುರಿತು ಮೋದಿ ಅವರೊಂದಿಗೆ ದೇವೇಗೌಡ ಚರ್ಚಿಸಿದರು.

ಭಾರತ್ ಜೋಡೊ ಯಾತ್ರೆಯು ಕಾಂಗ್ರೆಸ್ ಪಾಳೆಯದಲ್ಲಿ ಉತ್ಸಾಹ ತುಂಬಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒಂದಾಗಿದ್ದಾರೆ ಹಾಗೂ ರಾಜ್ಯ ಕಾಂಗ್ರೆಸ್ ಈಗ ಒಡೆದ ಮನೆಯಲ್ಲ ಎಂಬ ಸಂದೇಶವನ್ನು ರವಾನಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಈ ಎಲ್ಲ ವಿದ್ಯಮಾನಗಳು ಮುಂದಿನ ಚುನಾವಣೆಯಲ್ಲಿ ಬಿಜೆಪಿಯ ಸಾಧನೆ ಮೇಲೆ ಯಾವ ಪರಿಣಾಮ ಬೀರಬಹುದು ಎಂಬ ಬಗ್ಗೆ ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

ರಾಮನಗರ ಭಕ್ತರಿಂದ ಸಮರ್ಪಣೆ ● 1.5 ಕೆ.ಜಿ. ತೂಕದ ಇಟ್ಟಿಗೆ

ರಾಮಮಂದಿರಕ್ಕೆ ಬೆಳ್ಳಿ ಇಟ್ಟಿಗೆ ಅರ್ಪಣೆ

ಪ್ರಜಾವಾಣಿ ವಾರ್ತೆ

ರಾಮನಗರ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರಕ್ಕೆ ರಾಮನಗರದ ಭಕ್ತರ ತಂಡವು ಗುರುವಾರ ಬೆಳ್ಳಿ ಇಟ್ಟಿಗೆ ಸಮರ್ಪಿಸಿತು.

ಅಯೋಧ್ಯೆ ಪ್ರವಾಸಕ್ಕೆ ತೆರಳಿದ್ದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದ 150 ಯಾತ್ರಾರ್ಥಿಗಳ ತಂಡವು 1.5 ಕೆ.ಜಿ. ತೂಕದ ಬೆಳ್ಳಿ ಇಟ್ಟಿಗೆ ಹಾಗೂ ಸೀತಾ ಮಾತೆಗೆ ರಾಮನಗರದ ರೇಷ್ಮೆ ಸೀರೆ, ರಾಮ-ಲಕ್ಷ್ಮಣರಿಗೆ ಶಲ್ಯಗಳನ್ನು ಸಮರ್ಪಿಸಿತು. ಮಂದಿರದ ಆವರಣದಲ್ಲಿ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪಕ್ ರಾಯ್ ಮತ್ತು ನ್ಯಾಸದ ಪದಾಧಿಕಾರಿಗಳಿಗೆ ಈ ಕಾಣಿಕೆಗಳನ್ನು ಹಸ್ತಾಂತರಿಸಲಾಯಿತು.

ಇದಕ್ಕೂ ಮುನ್ನ ಅಯೋಧ್ಯೆಯಲ್ಲಿರುವ ಕನ್ನಡಿಗ ಅರ್ಚಕರಾದ ಗೋಪಾಲ್ ಭಟ್ ಮತ್ತು ತಂಡವು ಯಾತ್ರಿಗಳನ್ನು ಬರಮಾಡಿಕೊಂಡು ಕಾಣಿಕೆಗಳಿಗೆ ವಿಧಿಬದ್ಧವಾಗಿ ಪೂಜೆ ಸಲ್ಲಿಸಿತು. ಈ ಸಂದರ್ಭದಲ್ಲಿ ಅಯೋಧ್ಯೆಯ ಪವಿತ್ರ ಮೃತ್ತಿಕೆಯನ್ನು ಪೂಜಿಸಿ ಯಾತ್ರಾರ್ಥಿಗಳಿಗೆ ನೀಡಲಾಯಿತು. ಈ ಮೃತ್ತಿಕೆಯನ್ನು ರಾಮದೇವರ ಬೆಟ್ಟಕ್ಕೆ ಸಮರ್ಪಿಸಲಾಗುವುದು ಎಂದು ಸಚಿವರು ತಿಳಿಸಿದರು.



ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ನೇತೃತ್ವದ ತಂಡವು ಅಯೋಧ್ಯೆಯ ರಾಮಮಂದಿರದಲ್ಲಿ ಗುರುವಾರ ಮಂದಿರ ನಿರ್ಮಾಣಕ್ಕಾಗಿ ಬೆಳ್ಳಿ ಇಟ್ಟಿಗೆಯನ್ನು ಮಂದಿರ ನ್ಯಾಸದ ಪದಾಧಿಕಾರಿಗಳಿಗೆ ಹಸ್ತಾಂತರಿಸಿತು. ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪಕ್ ರಾಯ್, ರೇಷ್ಮೆ ಕೈಗಾರಿಕೆ ಉದ್ಯಮಗಳ ನಿಗಮದ ಅಧ್ಯಕ್ಷ ಗೌತಮ್ ಗೌಡ ಇದ್ದರು

'ರಾಮದೇವರ ಬೆಟ್ಟದ ತಾಣವಾದ ರಾಮನಗರವು ರಾಮನ ಹೆಸರನ್ನೇ ಹೊತ್ತಿದೆ. ಜತೆಗೆ ಈ ಬೆಟ್ಟದಲ್ಲಿ ದೇಶದಲ್ಲೇ ಅಪರೂಪವಾಗಿರುವ ರಣಹದ್ದಿನ ಸಂತತಿ ಉಳಿದುಕೊಂಡಿದೆ. ರಾಮಾಯಣದಲ್ಲೂ ಈ ಸಂತತಿಗೆ ಸೇರಿದ ಜಟಾಯು, ಸಂಪಾತಿಗಳ ಪಾತ್ರವಿದೆ. ಹೀಗೆ ರಾಮನಗರ, ರಾಮ ಮತ್ತು ರಾಮಾಯಣಗಳ ನಡುವೆ ಮಧುರ ಬಾಂಧವ್ಯವಿದೆ' ಎಂದು ಸಚಿವ ಅಶ್ವತ್ಥನಾರಾಯಣ ಸ್ಮರಿಸಿದರು.

ಸಚಿವರ ಜೊತೆ ರಾಮನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ದೇವರಾಜು, ರಾಜ್ಯ ರೇಷ್ಮೆ ಕೈಗಾರಿಕೆ ಉದ್ಯಮಗಳ ನಿಗಮದ ಅಧ್ಯಕ್ಷ ಗೌತಮ್ ಗೌಡ ಮತ್ತಿತರರು ಇದ್ದರು.

ಕಾಶ್ಮೀರ ಪ್ರಸ್ತಾಪ: ಪಾಕ್‌ಗೆ ಭಾರತ ತಿರುಗೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿದ ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಗುರುವಾರ ತಿರುಗೇಟು ನೀಡಿದ್ದಾರೆ.

ಭಾರತಕ್ಕೆ ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವ ನೀಡುವುದಕ್ಕೂ ಬಿಲಾವಲ್ ಭುಟ್ಟೊ ಈ ಸಭೆಯಲ್ಲಿ ವಿರೋಧ ವ್ಯಕ್ತಪಡಿಸಿದರು.

ಪಾಕಿಸ್ತಾನ ನೆಲದಿಂದಲೇ ಭಯೋತ್ಪಾದನಾ ಚಟುವಟಿಕೆಗಳು ನಡೆಯುತ್ತಿವೆ. 2008ರ ನವೆಂಬರ್ 26ರಂದು ಮುಂಬೈ ಮೇಲಿನ ದಾಳಿ ಸೇರಿದಂತೆ ಹಲವಾರು ಕೃತ್ಯಗಳು ಇದಕ್ಕೆ ನಿದರ್ಶನ ಎಂದು ಬಿಲಾವಲ್ ಭುಟ್ಟೊಗೆ ಜೈಶಂಕರ್ ತಿರುಗೇಟು ನೀಡಿದರು.

'ಮುಂಬೈ ಮೇಲಿನ ದಾಳಿ ಸೇರಿದಂತೆ ಭಾರತದ ಮೇಲಾದ ಭಯೋತ್ಪಾದಕ ಕೃತ್ಯದ ಪ್ರಕರಣಗಳಲ್ಲಿ ಸಂತ್ರಸ್ತರಾದವರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ' ಎಂದು ಅವರು ಭದ್ರತಾ ಮಂಡಳಿ ಸಭೆಗೆ ತಿಳಿಸಿದರು.

ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ, ಕೆಆರ್‌ಎಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲು

ಮುಖ್ಯ ಶಿಕ್ಷಕನಿಗೆ ಅಟ್ಟಾಡಿಸಿ ಹೊಡೆದ ಬಾಲಕಿಯರು

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಸರ್ಕಾರಿ ಹಾಸ್ಟೆಲ್‌ಗೆ ಬುಧವಾರ ರಾತ್ರಿ ಬಂದು ಅನುಚಿತವಾಗಿ ವರ್ತಿಸಿದ ಪಾಂಡವಪುರ ತಾಲ್ಲೂಕಿನ ಪ್ರೌಢಶಾಲೆಯೊಂದರ ಮುಖ್ಯ ಶಿಕ್ಷಕನೊಬ್ಬನಿಗೆ ಅಲ್ಲಿನ ವಿದ್ಯಾರ್ಥಿನಿಯರು ಸೌದೆ, ಬಡಿಗೆಯಿಂದ ಹಾಸ್ಟೆಲ್ ಆವರಣದಲ್ಲಿ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ಆರೋಪಿಯನ್ನು ಬಂಧಿಸಲಾಗಿದೆ.

'ಹಾಸ್ಟೆಲ್ ನಿರ್ವಹಣಾ ಜವಾಬ್ದಾರಿಯನ್ನೂ ಹೊತ್ತಿದ್ದ ಮುಖ್ಯ ಶಿಕ್ಷಕ ಹಲವು ವರ್ಷಗಳಿಂದ ವಿದ್ಯಾರ್ಥಿನಿಯರೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದ. ಮೈ, ಕೈ ಮುಟ್ಟಿ, ಕೆಟ್ಟ ಭಾಷೆ ಬಳಸಿ ಮಾತನಾಡುತ್ತಿದ್ದ. ಅಶ್ಲೀಲ ವಿಡಿಯೊ ನೋಡುವಂತೆ ಒತ್ತಾಯಿಸುತ್ತಿದ್ದ. ಬಟ್ಟೆ ಬಿಚ್ಚುವಂತೆ ಹೇಳುತ್ತಿದ್ದ. ಈ ವಿಚಾರವನ್ನು ಯಾರಿಗೂ ಹೇಳದಂತೆ ಬೆದರಿಸುತ್ತಿದ್ದ' ಎಂದು ವಿದ್ಯಾರ್ಥಿನಿಯರು ಆರೋಪಿಸಿದ್ದಾರೆ.



ಭಾವು ಪತ್ತಾರ್

ರಾತ್ರಿ 8.30ರ ಸಮಯದಲ್ಲಿ ಹಾಸ್ಟೆಲ್‌ಗೆ ಬಂದ ಆರೋಪಿಯು ವಿದ್ಯಾರ್ಥಿನಿಯೊಬ್ಬರನ್ನು ಕೊಠಡಿಗೆ ಕರೆಸಿಕೊಂಡಿದ್ದು, ಅನುಚಿತವಾಗಿ ವರ್ತಿಸಿದ ಕಾರಣ ಆಕೆ ಜೋರಾಗಿ ಕಿರುಚಿಕೊಂಡರು. ಕೂಡಲೇ ಕೊಠಡಿಗೆ ಬಂದ ಇತರ ವಿದ್ಯಾರ್ಥಿನಿಯರೂ ಮುಖ್ಯ ಶಿಕ್ಷಕನನ್ನು ಕೆಟ್ಟದಾಗಿ ನಿಂದಿಸಿದ್ದಾರೆ. ಅದರಿಂದ ರೊಚ್ಚಿಗೆದ್ದ ಅವರು ಸೌದೆ ಸೇರಿದಂತೆ ಕೈಗೆ ಸಿಕ್ಕಸಿಕ್ಕ ವಸ್ತುಗಳಲ್ಲಿ ಥಳಿಸಿದ್ದಾರೆ. ಮುಖ್ಯ ಶಿಕ್ಷಕ ತಪ್ಪಿಸಿಕೊಳ್ಳಲು ಯತ್ನಿಸಿದರೂ ಬಿಡದೇ ಹೊಡೆದಿದ್ದಾರೆ.

ಘಟನೆ ನಂತರ ಹಾಸ್ಟೆಲ್ ವಾರ್ಡನ್ ನೀಡಿದ ದೂರಿನ ಮೇರೆಗೆ ಕೆಆರ್‌ಎಸ್ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಗುರುವಾರ ಆತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ವಾರ್ಡನ್ ದೂರು ನೀಡಿದ ತಕ್ಷಣದಲ್ಲೇ ಆರೋಪಿ ವಿರುದ್ಧ ಪೋಕ್ಸೊ ಅಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ. ಘಟನೆ ಕುರಿತು ಸಮಗ್ರ ತನಿಖೆ ನಡೆಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಹೇಳಿದರು.

ಪೋಷಕರಿಂದ ಆಕ್ರೋಶ: ವಿಷಯ ತಿಳಿಯುತ್ತಿದ್ದಂತೆ ಗುರುವಾರ ಪೋಷಕರು ಹಾಸ್ಟೆಲ್‌ಗೆ ಬಂದು ಆರೋಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ಈ ಹಿಂದೆಯೂ ಹಲವು ಬಾರಿ ಹೆಣ್ಣು ಮಕ್ಕಳಿಗೆ ತೊಂದರೆ ಕೊಟ್ಟಿದ್ದರೂ ಅಧಿಕಾರಿಗಳು ಆತನ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ' ಎಂದು ಆರೋಪಿಸಿದರು.

ವಿದ್ಯಾರ್ಥಿನಿಯರಿಗೆ ಶೌರ್ಯ ಪ್ರಶಸ್ತಿ: ಸಚಿವ

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ 'ಆರೋಪಿಯನ್ನು ಕರ್ತವ್ಯದಿಂದ ವಜಾಗೊಳಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಪೊಲೀಸರು ಯಾವುದೇ ಒತ್ತಡಕ್ಕೆ ಮಣಿಯದೇ ಶೀಘ್ರ ಕ್ರಮ ಜರುಗಿಸಬೇಕು' ಎಂದು ಸೂಚಿಸಿದರು. 'ಶಿಕ್ಷಕನ ದೌರ್ಜನ್ಯವನ್ನು ವಿದ್ಯಾರ್ಥಿನಿಯರು ಒಗ್ಗಟ್ಟಿನಿಂದ ಎದುರಿಸಿದ್ದಾರೆ. ಆ ಮಕ್ಕಳನ್ನು ಗುರುತಿಸಿ ಶೌರ್ಯ ಪ್ರಶಸ್ತಿಗೆ ಶಿಫಾರಸು ಮಾಡಿ' ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

ಈಶಾನ್ಯ ರೈಲ್ವೆ	ಇ–ಆಕ್ಷನ್ ಲಾಟ್ ನೋಟಿಸ್

ಭಾರತದ ರಾಷ್ಟ್ರಪತಿಗಳ ಪರವಾಗಿ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಲಕ್ನೋ ಇವರು 03 ವರ್ಷಗಳ ಅವಧಿಗೆ ವಾಣಿಜ್ಯ ಪ್ರಚಾರಕ್ಕಾಗಿ ಮೈಲ್/ಎಕ್ಸ್‌ಪ್ರೆಸ್ ರೈಲುಗಳ ಪ್ರತಿ ಕೋಚ್‌ನ ಒಳಭಾಗದಲ್ಲಿ (ಕನ್ನಡಿಯ ಕೆಳಗೆ, ಕ್ಯಾಬಿನ್, ಕಿಟಕಿಯ ಮಧ್ಯೆ) 30 ಸ್ಟಿಕ್ಕರ್‌ಗಳ (ಗಾತ್ರ ತಲಾ 2x1.5 ಚ.ಅ.) ವಿನೈಲ್ ರ‍್ಯಾಪಿಂಗ್ ಕಾಮಗಾರಿಗಾಗಿ ಜಾಹೀರಾತು ಸಂಸ್ಥೆಗಳಿಂದ ಇ–ಹರಾಜು ವ್ಯವಸ್ಥೆಯ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ವಿವರ ಕೆಳಗಿನಂತಿರುತ್ತದೆ:–

ಕ್ರ. ಸಂ.	ಇ–ಹರಾಜು ಪ್ರಕಟಣೆ ಸಂ.	ರೈಲು ನಂಬರ್	ಒಟ್ಟು ರೇಕ್‌ಗಳು	ಇಂದ	ವರೆಗೆ	ಒಟ್ಟು ಕೋಚ್‌ಗಳ ಸಂಖ್ಯೆ	ಪ್ರತಿ ರ‍್ಯಾಕ್‌ನಲ್ಲಿ ವಿನೈಲ್ ರ‍್ಯಾಪಿಂಗ್‌ನ ಒಟ್ಟು ಪ್ರದೇಶ	ಹರಾಜು ಕ್ಲೋಸಿಂಗ್ ದಿನಾಂಕ ಮತ್ತು ಸಮಯ
01	ಎಡಿವಿಟಿ–ಐಎನ್‌ಟಿ 131210-87-22-1	12531/12532	01	ಲಕ್ನೋ	ಗೋರಖಪುರ	20	1800	ದಿ: 28-12-22 ರಂದು 13:30 ಗಂಟೆ
02	ಎಡಿವಿಟಿ–ಐಎನ್‌ಟಿ 131316-22-1	15048/15047 15050/15049 15052/15051 15009/15010	04	ಗೋರಖಪುರ	ಕೋಲ್ಕತಾ/ ಮೈಲಾನಿ	84	7560	ದಿ: 28-12-22 ರಂದು 13:40 ಗಂಟೆ
03	ಎಡಿವಿಟಿ–ಐಎನ್‌ಟಿ 154401-85-22-1	02529D/05069D 12530/12529 15070/15069	02	ಲಕ್ನೋ/ ಆಯಿಷಬಾಗ್	ಆಯಿಷಬಾಗ್/ ಪಾಟಲಿಪುತ್ರ/ ಗೋರಖಪುರ	32	2880	ದಿ: 28-12-22 ರಂದು 13:50 ಗಂಟೆ
04	ಎಡಿವಿಟಿ–ಐಎನ್‌ಟಿ 131245-93-22-1	15011/15012	02	ಲಕ್ನೋ	ಚಂದೀಗಢ್	32	2880	ದಿ: 28-12-22 ರಂದು 14:00 ಗಂಟೆ
05	ಎಡಿವಿಟಿ–ಐಎನ್‌ಟಿ 131320-97-22-1	22537/22538 15017/15018	07	ಗೋರಖಪುರ	ಲೋಕಮಾನ್ಯ ತಿಲಕ್ ಟರ್ಮಿನಲ್	154	13860	ದಿ: 28-12-22 ರಂದು 14:10 ಗಂಟೆ
06	ಎಡಿವಿಟಿ–ಐಎನ್‌ಟಿ 132368-88-22-1	12511/12512 12589/12590 12591/12592	04	ಗೋರಖಪುರ	ತಿರುವನಂತಪುರಂ/ ಸಿಕಂದರಾಬಾದ್/ ಯಶವಂತಪುರ	84	7560	ದಿ: 28-12-22 ರಂದು 14:20 ಗಂಟೆ
07	ಎಡಿವಿಟಿ–ಐಎನ್‌ಟಿ 131321-96-22-1	15003/15004 12555/12556	04	ಗೋರಖಪುರ	ಕಾನ್ಪುರ್ ಅನ್ವರಗಂಜ್/ ಭಟಿಂಡಾ	88	7920	ದಿ: 28-12-22 ರಂದು 14:30 ಗಂಟೆ
08	ಎಡಿವಿಟಿ–ಐಎನ್‌ಟಿ 129409-84-22-1	12533/12534	03	ಲಕ್ನೋ	ಮುಂಬೈ	66	5940	ದಿ: 28-12-22 ರಂದು 14:40 ಗಂಟೆ

- ಗುತ್ತಿಗೆ ಅವಧಿ: 03 ವರ್ಷ • ವೆಬ್‌ಸೈಟ್ ವಿಳಾಸ: www.ireps.gov.in (ಇ–ಆಕ್ಷನ್ ಮಾಡ್ಯೂಲ್)
- ಹರಾಜು ಪ್ರಾರಂಭವಾಗುವ ದಿನಾಂಕ ಮತ್ತು ಸಮಯ (ಎಲ್ಲಾ ಲಾಟ್‌ಗಳು): ದಿನಾಂಕ 28–12–2022 ರಂದು 13:00 ಗಂಟೆ

ಸಿಪಿಆರ್‌ಒ/ವಾಣಿಜ್ಯ–224 — ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ವಾಣಿಜ್ಯ,) ಲಕ್ನೋ

ಯಾವುದೇ ಯಾತ್ರಿಕ ಸೌಲಭ್ಯ ಸಂಬಂಧಿತ ದೂರು ಎಸ್‌ಎಂಎಸ್ ಮಾಡಿರಿ ಮೊಬೈಲ್ ನಂ. 09794845955

ರೂಫ್ ಹಾಗೂ ಫುಟ್ ಬೋರ್ಡ್‌ಗಳ ಮೇಲೆ ಪ್ರಯಾಣ ಮಾಡಬೇಡಿ.

ಈಶಾನ್ಯ ಗಡಿಯಲ್ಲಿ ಸಮರಾಭ್ಯಾಸ

ನವದೆಹಲಿ (ಪಿಟಿಐ): ತನ್ನ ಬತ್ತಳಿಕೆಗೆ ಎಲ್ಲ 36 ರಫೇಲ್ ಯುದ್ಧವಿಮಾನಗಳು ಸೇರ್ಪಡೆಯಾದ ಬೆನ್ನಲ್ಲೇ, ಈಶಾನ್ಯ ಭಾಗದ ಗಡಿಯಲ್ಲಿ ಭಾರತೀಯ ವಾಯುಪಡೆ ಗುರುವಾರ ಬೃಹತ್ ಸಮರಾಭ್ಯಾಸಕ್ಕೆ ಚಾಲನೆ ನೀಡಿದೆ.

ಎರಡು ದಿನಗಳ ಕಾಲ ನಡೆಯುವ ಈ ಸಮರಾಭ್ಯಾಸದಲ್ಲಿ ರಫೇಲ್ ಸೇರಿದಂತೆ ಈಶಾನ್ಯ ಭಾಗದಲ್ಲಿ ನಿಯೋಜಿಸಲಾಗಿರುವ ಎಲ್ಲ ಯುದ್ಧ ವಿಮಾನಗಳು ಭಾಗಿಯಾಗಲಿದ್ದು, ಯುದ್ಧಸನ್ನದ್ಧತೆಯನ್ನು ಪ್ರದರ್ಶಿಸಲಿವೆ ಎಂದು ಮೂಲಗಳು ಹೇಳಿವೆ.

ಅರುಣಾಚಲ ಪ್ರದೇಶದಲ್ಲಿನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಕೆಲ ದಿನಗಳ ಹಿಂದೆಯಷ್ಟೇ ಚೀನಾ ಸೈನಿಕರು ದೇಶದ ಗಡಿಯೊಳಗೆ ನುಸುಳಲು ಯತ್ನಿಸಿದ್ದರು. ಚೀನಾ ಸೈನಿಕರಿಗೆ ಭಾರತೀಯ ಯೋಧರು ತಕ್ಕ ಪ್ರತ್ಯುತ್ತರ ನೀಡಿದ್ದರು. ಈ ಉದ್ವಿಗ್ನ ಸ್ಥಿತಿಯ ಹಿನ್ನೆಲೆಯಲ್ಲಿ ವಾಯುಪಡೆ ಕೈಗೊಂಡ ತಾಲೀಮಿಗೆ ಮಹತ್ವ ಬಂದಿದೆ.

'ಈ ಸಮರಾಭ್ಯಾಸವನ್ನು ಬಹಳ ಮುಂಚಿತವಾಗಿಯೇ ಯೋಜಿಸಲಾಗಿತ್ತು. ತವಾಂಗ್ ಸೆಕ್ಟರ್‌ನಲ್ಲಿ ಕಂಡುಬಂದ ಸಂಘರ್ಷಕ್ಕೂ, ಈ ಸಮರಾಭ್ಯಾಸಕ್ಕೂ ಯಾವುದೇ ಸಂಬಂಧ ಇಲ್ಲ' ಎಂದು ವಾಯುಪಡೆ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೊನೆಯ ರಫೇಲ್ ಸೇರ್ಪಡೆ: ಭಾರತವು ಫ್ರಾನ್ಸ್‌ನಿಂದ 36 ರಫೇಲ್ ಯುದ್ಧವಿಮಾನಗಳನ್ನು ಖರೀದಿಸಿದೆ. '36 ರಫೇಲ್‌ಗಳ ಪೈಕಿ ಕೊನೆಯ ಯುದ್ಧವಿಮಾನ ಭಾರತಕ್ಕೆ ಬಂದಿಳಿಯಿತು. ಇದರೊಂದಿಗೆ ಎಲ್ಲ ಯುದ್ಧವಿಮಾನಗಳ ಸೇರ್ಪಡೆಗೊಳಿಸುವ ಕಾರ್ಯ ಪೂರ್ಣಗೊಂಡಂತಾಗಿದೆ. ಮಾರ್ಗ ಮಧ್ಯೆ ಯುಎಇ ವಾಯುಪಡೆ ಟ್ಯಾಂಕರ್‌ಗಳಿಂದ ಈ ರಫೇಲ್ ಯುದ್ಧವಿಮಾನಕ್ಕೆ ಇಂಧನ ತುಂಬಿಸಲಾಯಿತು' ಎಂದು ವಾಯುಪಡೆ ಟ್ವೀಟ್ ಮಾಡಿದೆ.

ಫೆಡರೇಷನ್ ಕ್ರಿಕೆಟ್ ಲೀಗ್ ಸ್ನೇಹಪರ ಟೂರ್ನಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೇಂಜ್‌ಮೇಕರ್ಸ್ ಆಫ್ ಕನಕಪುರ ರೋಡ್ ಅಸೋಸಿಯೇಷನ್ ಆಶ್ರಯದಲ್ಲಿ ಡಿ.17 ಮತ್ತು 18 ರಂದು ಸ್ನೇಹಪರ ಕ್ರಿಕೆಟ್ ಟೂರ್ನಿ 'ಫೆಡರೇಷನ್ ಕ್ರಿಕೆಟ್ ಲೀಗ್' ಆಯೋಜಿಸಲಾಗಿದೆ.

ಕನಕಪುರ ರಸ್ತೆಯ ಸಾರಕ್ಕಿಯಿಂದ ಕಗ್ಗಲೀಪುರದವರೆಗೆ ಹರಡಿಕೊಂಡಿರುವ ಬಡಾವಣೆಗಳು ಮತ್ತು ಅಪಾರ್ಟ್‌ಮೆಂಟ್‌ಗಳ ನೂರಕ್ಕೂ ಹೆಚ್ಚು ಕ್ಷೇಮಾಭಿವೃದ್ಧಿ ಸಂಘಗಳು ಈ ಟೂರ್ನಿಗೆ ಕೈಜೋಡಿಸಿದ್ದು, 30 ತಂಡಗಳು ಪಾಲ್ಗೊಳ್ಳಲಿವೆ.

ಕನಕಪುರ ರಸ್ತೆಯ ಜುಡಿಷಿಯಲ್ ಬಡಾವಣೆ ಮತ್ತು ಗುಬ್ಬಲಾಳದ ಸಿಟಿ ಎಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ಪಂದ್ಯಗಳನ್ನು ಆಯೋಜಿಸಲಾಗಿದೆ. ಅರ್ಹತಾ ಸುತ್ತು ಹಾಗೂ ನಾಕೌಟ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ.

ಅರ್ಜುನ ವರ ಜ್ಯುವೆಲರ್ಸ್ ಮತ್ತು ಕನಕಪುರ ರಸ್ತೆಯಲ್ಲಿರುವ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಟೂರ್ನಿಯ ಪ್ರಾಯೋಜಕತ್ವ ವಹಿಸಿಕೊಂಡಿವೆ. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಟೂರ್ನಿಯನ್ನು ಉದ್ಘಾಟಿಸುವರು ಎಂದು ಟೂರ್ನಿಯ ಸಂಘಟಕರಲ್ಲೊಬ್ಬರಾದ ಶ್ರೀವತ್ಸ ಅವರು ತಿಳಿಸಿದ್ದಾರೆ.



ನಮ್ಮ ನೆರೆಹೊರೆಯವರನ್ನು ಒಂದುಗೂಡಿಸುವ ಉದ್ದೇಶದಿಂದ 2019 ರಿಂದಲೂ ಈ ಟೂರ್ನಿಯನ್ನು ಆಯೋಜಿಸುತ್ತಿದ್ದೇವೆ

ಶ್ರೀವತ್ಸ, ಸಂಘಟಕ

PUBLIC NOTICE

ಸಾರ್ವಜನಿಕ ಪ್ರಕಟಣೆ


ನನ್ನ ಕಕ್ಷಿದಾರರಾದ ಶ್ರೀಮತಿ ಅಂಬಿಕಾ ಮಲ್ಲನಗೌಡ ಪಾಟೀಲ್ (38 ವರ್ಷ) ಕೋಂ ಮಲ್ಲನಗೌಡ ಪಾಟೀಲ್ ಮತ್ತು ಮಲ್ಲನಗೌಡ ಎಸ್. ಪಾಟೀಲ್ (38 ವರ್ಷ) ಬಿನ್ ಶಿವನಗೌಡ ಪಾಟೀಲ್, ಇಬ್ಬರೂ ವಾಸ: 'ಶಿವದೀಪ್ತಿ ನಿಲಯ', 3ನೇ ಕ್ರಾಸ್, ಎಸ್.ಎಸ್.ಪುರಂ ಬಡಾವಣೆ, ತುಮಕೂರು ನಗರ. ಇವರುಗಳು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರುಗಳಾದ ಆಶೀಶ್ ಜೈನ್ (31 ವರ್ಷ) ಬಿನ್ ಅಶೋಕ್ ಚಂದ್, ವಾಸ: ರುಕ್ಮಿಣಿ ಕಾಲೋನಿ, ಅಲಸೂರು ಬಡಾವಣೆ, ಬೆಂಗಳೂರು ನಗರ ಮತ್ತು ಶ್ರೀ ಹಿತೇಶ್ ಸಕ್ಲೇಚಾ (33 ವರ್ಷ) ಬಿನ್ ಎಸ್. ಮಹೇಂದ್ರ ಕುಮಾರ್, ವಾಸ: ನಾರಾಯಣ ಪಿಳ್ಳೈ ರಸ್ತೆ, ಶಿವಾಜಿನಗರ ಬಡಾವಣೆ, ಬೆಂಗಳೂರು ನಗರ. ಇವರುಗಳಿಂದ ಒಟ್ಟಾಗಿ ಶುದ್ಧಕ್ರಯಕ್ಕೆ ಪಡೆದುಕೊಳ್ಳಲು ಇಚ್ಛಿಸಿದ್ದು, ಈ ಬಗ್ಗೆ ಸ್ವತ್ತಿನ ಮಾಲೀಕರುಗಳು ನನ್ನ ಕಕ್ಷಿದಾರರಿಂದ ಮುಂಗಡ ಹಣವನ್ನು ಪಡೆದುಕೊಂಡು ಅವರ ಪರವಾಗಿ ಒಂದು ಕ್ರಯದ ಕರಾರನ್ನು ದಿನಾಂಕ: 29.08.2022ರಲ್ಲಿ ಮಾಡಿಕೊಟ್ಟಿರುತ್ತಾರೆ. ಆದ್ದರಿಂದ ಸದರಿ ಸ್ವತ್ತಿನ ಬಗ್ಗೆ ಯಾರಿಗಾದರೂ ಹಕ್ಕು ಬಾಧ್ಯತೆ, ತಂಟೆ ತಕರಾರು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಈ ಪ್ರಕಟಣೆಯ ದಿನದಿಂದ 10 (ಹತ್ತು) ದಿನಗಳೊಳಗಾಗಿ ನಮ್ಮನ್ನು ಕೆಳಕಂಡ ವಿಳಾಸದಲ್ಲಿ ಖುದ್ದಾಗಿ ಅಥವಾ ಫೋನ್ ಮುಖಾಂತರ ಸಂಪರ್ಕಿಸಿ ಅಧಿಕೃತ ದಾಖಲೆಗಳೊಂದಿಗೆ ಮಾಹಿತಿಯನ್ನು ಕೊಡತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಸದರಿ ಸ್ವತ್ತನ್ನು ನನ್ನ ಕಕ್ಷಿದಾರರು ಶುದ್ಧಕ್ರಯಕ್ಕೆ ಪಡೆದುಕೊಳ್ಳಲು ಯಾರಿಂದಲೂ ಯಾವುದೇ ತಂಟೆ ತಕರಾರು ಇಲ್ಲವೆಂದು ಭಾವಿಸಿ ಸ್ವತ್ತಿನ ಮಾಲೀಕರುಗಳಿಗೆ ಸ್ವತ್ತಿನ ಕ್ರಯದ ಬಾಕಿ ಮೌಲ್ಯವನ್ನು ಪಾವತಿಸಿ ಅವರುಗಳಿಂದ ನನ್ನ ಕಕ್ಷಿದಾರರ ಪರವಾಗಿ ಶುದ್ಧಕ್ರಯಪತ್ರವನ್ನು ಬರೆಸಿ ನೋಂದಾವಣೆ ಮಾಡಿ ಕೊಳ್ಳುವುದರ ಮೂಲಕ ಸದರಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸ್ವತ್ತಿನ ವಿವರಗಳು: ಐಟಂ ನಂಬರ್–1 (ಅಶೀಶ್ ಜೈನ್): ಕರ್ನಾಟಕ ರಾಜ್ಯ, ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ತುಮಕೂರು ನಗರ, ತುಮಕೂರು ಮಹಾನಗರಪಾಲಿಕೆ ವಾರ್ಡ್ ನಂ. 13, ಗಾಂಧಿನಗರ ಬಡಾವಣೆ, ಪಾರ್ಕ್ ದಕ್ಷಿಣ ಭಾಗದ ಮುನಿಸಿಪಲ್ ಸೈಟ್ ನಂ. 10, ಹಳೇ ಖಾತಾ ನಂಬರ್ 1788, ತದನಂತರ 2749/2738, ಅನಂತರ 2934/174, ಅನಂತರ 2935/174ಎ, ತದನಂತರ 174/200, ಚಾಲ್ತಿ ನಗರಪಾಲಿಕೆ ಖಾತಾ ನಂಬರ್ 200/209/201/210, ಪಿ.ಐ.ಡಿ. ನಂಬರ್ 2774, ಅಳತೆ ಪೂರ್ವ–ಪಶ್ಚಿಮ: 123 (ಒಂದು ನೂರಾ ಇಪ್ಪತ್ತಮೂರು) ಅಡಿಗಳು, ಉತ್ತರ–ದಕ್ಷಿಣ: 25 (ಇಪ್ಪತ್ತೈದು) ಅಡಿಗಳು, ಒಟ್ಟು 3075 ಚದುರ ಅಡಿಗಳು ಉಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ–ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಹಿತೇಶ್ ಸಕ್ಲೇಚಾರವರ ಇದೇ ಪೈಕಿ ಅರ್ಧ ಭಾಗದ ಸ್ವತ್ತು, ದಕ್ಷಿಣಕ್ಕೆ: ಚನ್ನೇಗೌಡರ ಮನೆ. ಈ ಮಧ್ಯೆ ಇರುವ ಸ್ವತ್ತು.

ಐಟಂ ನಂಬರ್–2 (ಹಿತೇಶ್ ಸಕ್ಲೇಚಾ): ಕರ್ನಾಟಕ ರಾಜ್ಯ, ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ತುಮಕೂರು ನಗರ, ತುಮಕೂರು ಮಹಾನಗರಪಾಲಿಕೆ ವಾರ್ಡ್ ನಂ. 13, ಗಾಂಧಿನಗರ ಬಡಾವಣೆ, ಪಾರ್ಕ್ ದಕ್ಷಿಣ ಭಾಗದ ಮುನಿಸಿಪಲ್ ಸೈಟ್ ನಂ. 10, ಹಳೇ ಖಾತಾ ನಂಬರ್ 1788, ತದನಂತರ 2749/2738, ಅನಂತರ 2934/174, ಅನಂತರ 2935/174ಎ, ತದನಂತರ 174/200, ಚಾಲ್ತಿ ನಗರಪಾಲಿಕೆ ಖಾತಾ ನಂಬರ್ 200/209/201/210/613, ಪಿ.ಐ.ಡಿ. ನಂಬರ್ 86006, ಅಳತೆ ಪೂರ್ವ–ಪಶ್ಚಿಮ: 123 (ಒಂದು ನೂರಾ ಇಪ್ಪತ್ತಮೂರು) ಅಡಿಗಳು, ಉತ್ತರ–ದಕ್ಷಿಣ: 25 (ಇಪ್ಪತ್ತೈದು) ಅಡಿಗಳು, ಒಟ್ಟು 3075 ಚದುರ ಅಡಿಗಳು ಉಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ–ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಎನ್.ಆರ್. ಸೋಮಶೇಖರ್‌ರವರ ಮನೆ, ದಕ್ಷಿಣಕ್ಕೆ: ಆಶೀಶ್ ಜೈನ್‌ರವರ ಇದೇ ಪೈಕಿ ಉತ್ತರಾರ್ಧ ಭಾಗದ ಸ್ವತ್ತು. ಈ ಮಧ್ಯೆ ಇರುವ ಸ್ವತ್ತು.

ಸಹಿ/– ಎಂ. ಬಾಲಕೃಷ್ಣ ಭಟ್, ವಕೀಲರು,
3ನೇ ಕ್ರಾಸ್, ಎಂ.ಜಿ. ರಸ್ತೆ, ಕೆ.ಆರ್.ಬಡಾವಣೆ,
ತುಮಕೂರು. ಮೊ: 9448660812

9ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ. ಅಶ್ವಥಪ್ಪನವರು

ತಿಂಡ್ಲು, ವಿದ್ಯಾರಣ್ಯಪುರ – 560 097

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆಯಿತು. ನಿಮ್ಮ ಸರಳ ಜೀವನದ ಮಾರ್ಗದರ್ಶನ ನಮಗೆ ದಾರಿದೀಪ. ನಿಮ್ಮ ಮಾರ್ಗದರ್ಶನದಲ್ಲಿ ನಡೆಯುವ ಕುಟುಂಬದವರು ಮತ್ತು ಅಪಾರ ಬಂಧು ವರ್ಗದವರು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ

ಪತ್ನಿಯರು ಹಾಗೂ ಮಕ್ಕಳು

18ಕ್ಕೆ ಪುಸ್ತಕ ಬಿಡುಗಡೆ

ಬೆಂಗಳೂರು: ಮ.ಸು. ಮನ್ನಾರ್ ಕೃಷ್ಣರಾವ್ ಅವರ 'ನಮ್ಮ ಹೆಮ್ಮೆಯ ಪ್ರಧಾನಿ ಲಾಲ್ ಬಹಾದುರ್ ಶಾಸ್ತ್ರಿ' ಎಂಬ ಪುಸ್ತಕ ಡಿ. 18ರಂದು ಬಸವನಗುಡಿಯ ವಾಡಿಯಾ ಸಭಾಂಗಣದಲ್ಲಿ ಬಿಡುಗಡೆಯಾಗಲಿದೆ.

'ಸ್ವಾತಂತ್ರ್ಯ ಹೋರಾಟಗಾರ ಮತ್ತು ಸ್ವತಂತ್ರ ಭಾರತದ ಎರಡನೇ ಪ್ರಧಾನಿ ಲಾಲ್ ಬಹಾದುರ್ ಶಾಸ್ತ್ರಿಯವರು ಸಮಾಜದ ಮುನ್ನೆಲೆಗೆ ಬಾರದೇ ಹಿಂದೆಯೇ ಉಳಿದುಬಿಟ್ಟರು. ಅವರನ್ನು ಜನರಿಗೆ ಪರಿಚಯಿಸುವ ಸಣ್ಣ ಪ್ರಯತ್ನ ಇದಾಗಿದೆ' ಎಂದು ಲೇಖಕ ಮ.ಸು. ಮನ್ನಾರ್ ಕೃಷ್ಣರಾವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರು ರೇಸ್

ವಿಕ್ಟೋರಿಯಾ ಪಂಚ್ ಗೆಲ್ಲುವ ನಿರೀಕ್ಷೆ

ವೂಲ್ಫ್ 777 ಬೆಂಗಳೂರು 1000 ಗಿನ್ನೀಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿಕ್ಟೋರಿಯಾ ಪಂಚ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬಾಲ್ಟಿಮೋರ್ 4, ಸ್ಟ್ರೋನಿಯನ್ 3, ಏರ್‌ಬ್ಲಾಸ್ಟ್ 5
2ನೇ ರೇಸ್: ಟಗ್ನಾನೆಲ್ಲೊ 2, ರಿಪ್ಲ್ ಎನ್ ಸ್ವಾರ್ಮ್ 4, ಪೆಲೂಷೆ 1
3ನೇ ರೇಸ್: ಬೋಲ್ಡ್ ಆರ್ಕ್ 1, ಕ್ಯಾಟ್ ವಿಸ್ಕರ್ಸ್ 3, ರೂಲಿಂಗ್ ಡೈನಾಸ್ಟಿ 5
4ನೇ ರೇಸ್: ಅಸ್ಗೊವಾಲ್ 1, ಗೋಲ್ಡನ್ ಓಕ್ಸ್ 3
5ನೇ ರೇಸ್: ವಿಕ್ಟೋರಿಯಾ ಪಂಚ್ 8, ಫಿಲಾಸಫಿ 3, ಟ್ರಿಪಲ್ ವಿಶ್ 7
6ನೇ ರೇಸ್: ವಾಚ್‌ಮೈಸ್ಟಾರ್ಸ್ 4, ಇಂಪೀರಿಯಲ್ ಬ್ಲೂ 3, ಪ್ರಾಮಿಸ್ ಕೆಪ್ಟ್ 6
7ನೇ ರೇಸ್: ರೈಟ್ಲಿ ನೋಬಲ್ 2, ಗೋಲ್ಡ್ ಗ್ರೇ 3, ಪ್ಯಾಸ್ಟಿಷ್ 1

ಉತ್ತಮ ಬೆಟ್: ವಾಚ್‌ಮೈಸ್ಟಾರ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ಉಕಾ–3/ಅರ್ಕಾವತಿ/03/463/2022–23 ದಿನಾಂಕ: 12.12.2022

ಪತ್ರಿಕಾ ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಶ್ರೀ ಎನ್. ಸ್ವಾಮಿರಾವ್ ಎಂಬುವವರಿಗೆ ಅರ್ಕಾವತಿ 03ನೇ ಬ್ಲಾಕ್ ಬಡಾವಣೆಯಲ್ಲಿರುವ 9x12 ಮೀ ಅಳತೆಯ ನಿವೇಶನ ಸಂಖ್ಯೆ: 463ನ್ನು ಹಂಚಿಕೆ ಮಾಡಿದ್ದು, ಸದರಿ ನಿವೇಶನಕ್ಕೆ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ದಿನಾಂಕ 23.08.2006 ರಂದು ನೊಂದಾಯಿಸಿ, ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ನಂತರ ಸದರಿ ನಿವೇಶನವು ಲಭ್ಯವಿಲ್ಲದೇ ಇರುವುದರಿಂದ ಬದಲಿ ನಿವೇಶನ ಹಂಚಿಕೆ ಸಮಿತಿ ಸಭೆಯ ತೀರ್ಮಾನದಂತೆ ಹಾಗೂ ದಿನಾಂಕ 04.08.2021ರಂದು Randomization ಮೂಲಕ ಆಯ್ಕೆಯಾಗಿರುವ ಹಂಚಿಕೆದಾರರಿಗೆ ಅರ್ಕಾವತಿ 17ನೇ ಬ್ಲಾಕ್ ಬಡಾವಣೆಯಲ್ಲಿರುವ 9x12 ಮೀ ಅಳತೆಯ ನಿವೇಶನ ಸಂಖ್ಯೆ: GH-438ನ್ನು ದಿನಾಂಕ 04.04.2022ರಂದು ಹಂಚಿಕೆ ಮಾಡಲಾಗಿರುತ್ತದೆ.

ಆದುದರಿಂದ, ತಾವು ನೀಡಿರುವ ವಿಳಾಸಕ್ಕೆ ಹಂಚಿಕೆ ಪತ್ರವನ್ನು ರವಾನಿಸಲಾಗಿರುತ್ತದೆ. ಆದರೆ ಹಂಚಿಕೆ ಪತ್ರವು ರವಾನೆಯಾಗದೆ ವಾಪಸ್ ಬಂದಿರುತ್ತದೆ. ನಂತರ ಕಂದಾಯ ಅಧಿಕಾರಿ ರವರ ಮುಖಾಂತರ ಜಾರಿ ಮಾಡಲು ಹಂಚಿಕೆ ಪತ್ರವನ್ನು ಕಳುಹಿಸಿಕೊಡಲಾಗಿತ್ತು. ಆದರೆ ಷರಾದೊಂದಿಗೆ ಕಂದಾಯ ಅಧಿಕಾರಿಗಳು ಹಂಚಿಕೆ ಪತ್ರವನ್ನು ವಾಪಸ್ ಕಳುಹಿಸಿರುತ್ತಾರೆ. ಆದ್ದರಿಂದ ತಾವು ಪ್ರಾಧಿಕಾರಕ್ಕೆ ಭೇಟಿ ನೀಡಿ, ತಮಗೆ ಬದಲಿಯಾಗಿ ಹಂಚಿಕೆ ಮಾಡಿರುವ ಅರ್ಕಾವತಿ 17ನೇ ಬ್ಲಾಕ್ ಬಡಾವಣೆಯಲ್ಲಿರುವ 9x12 ಮೀ ಅಳತೆಯ ನಿವೇಶನ ಸಂಖ್ಯೆ: GH-438ಕ್ಕೆ ಹಂಚಿಕೆ ಪತ್ರವನ್ನು ಪಡೆದುಕೊಳ್ಳಬಹುದು.

ಸಹಿ/– ಆಯುಕ್ತರು, ಬೆಂ.ಅ.ಪ್ರಾ. ಬೆಂಗಳೂರು.

ಅಬಕಾರಿ ಇಲಾಖೆ ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ರಾಮನಗರ ಜಿಲ್ಲೆಯಲ್ಲಿ ವಿವಿಧ ಅಬಕಾರಿ ಪ್ರಕರಣಗಳಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಗೆ ಸಂಬಂಧಿಸಿದಂತೆ. ಈ ಕೆಳಕಂಡ ವಾಹನಗಳನ್ನು ಜಪ್ತುಪಡಿಸಲಾಗಿರುತ್ತದೆ. ವಾಹನಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಶಪಡಿಸಿಕೊಂಡ ವಾಹನಗಳ ವಿವರ	ವಾಹನದ ನೋಂದಣಿ ಸಂಖ್ಯೆ
01.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	KA-05-EE-5990
02.	ಮಹೀಂದ್ರ ಕಂಪನಿಯ ರೊಡಿಯೋ	kA-55-J-5446
03.	ಟಿ.ವಿ.ಎಸ್. ಸ್ಕೂಟಿ ಪೆಪ್	KA-05-A-1605
04.	ಬಜಾಜ್ ಚೇತಕ್	KA-03-R-5139
05.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	KA-42-J-1978
06.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	KA-42-H-2870
07.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	TN-46-P-8633
08.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	KA-02-HJ-2785
09.	ಹೋಂಡಾ ಆಕ್ಟೀವಾ	KA-05-EY-8077
10.	ಹೀರೋ ಸ್ಪ್ಲೆಂಡರ್ ಪ್ರೋ	KA-51-R-2521
11.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	KA-42-E-9318
12.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	KA-42-H-6707
13.	ಬಜಾಜ್ ಡಿಸ್ಕವರ್ 100	KA-42-Q-2347
14.	ಟಿ.ವಿ.ಎಸ್. ಎಕ್ಸ್‌ಎಲ್ ಹೆವಿಡ್ಯೂಟಿ	KA-42-S-7336
15.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	TN-24-Q-1854
16.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್	KA-41-L-3684
17.	ಹೋಂಡಾ ಆಕ್ಟೀವಾ 3ಜಿ	KA-42-U-4194
18.	ಟಿ.ವಿ.ಎಸ್. ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ	TN-46-Q-5717
19.	ಟಿ.ವಿ.ಎಸ್. ಸ್ಪೋರ್ಟ್ಸ್	KA-42-L-3318

ಮೇಲ್ಕಂಡ ವಾಹನಗಳನ್ನು ಜಪ್ತುಡಿಸಿಕೊಂಡು ಸುಮಾರು ತಿಂಗಳುಗಳು ಗತಿಸಿದ್ದರೂ ಇಲ್ಲಿಯವರೆಗೆ ವಾಹನಗಳನ್ನು ತನ್ನದೆಂದು ಹೇಳಿಕೊಂಡು, ಪ್ರಾಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ರಾಮನಗರ ಜಿಲ್ಲೆರವರ ಮುಂದೆ ಯಾರು ಬಂದು ಹಕ್ಕು ಚಲಾಯಿಸಿರುವುದಿಲ್ಲ ಹಾಗೂ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ ಆದ್ದರಿಂದ ಮೇಲಿನ ವಾಹನಗಳಿಗೆ ಸಂಬಂಧಿಸಿದಂತೆ ವಾಹನದ ಮಾಲೀಕರು / ವಾರಸುದಾರರು ದಿನಾಂಕ: 23–12–2022ರ ಒಳಗಾಗಿ ಈ ಪ್ರಾಧಿಕಾರದ ಮುಂದೆ ವೈಯಕ್ತಿಕವಾಗಿ ಅಥವಾ ತಮ್ಮ ವಕೀಲರ ಮೂಲಕ ಲಿಖಿತ ಅರ್ಜಿ ಸಲ್ಲಿಸುವುದು, ತಪ್ಪಿದ್ದಲ್ಲಿ ಸದರಿ ವಾಹನಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ) ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯಪಡಿಸಿದೆ.

ಸಹಿ/– ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ರಾಮನಗರ ಜಿಲ್ಲೆ, ರಾಮನಗರ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ,

ಶಾಖಾ ಕಛೇರಿ, ನಂ:153/ಎ, ಕೆ.ಆರ್.ರಸ್ತೆ,
ಸುಭಾಷ್ ನಗರ, ಮಂಡ್ಯ–571 401.
ದೂರವಾಣಿ ಸಂಖ್ಯೆ: 08232 – 226745, Mobile : 9845425656
Email: mnd.ksfc@karnataka.gov.in
Website: https://ksfc.karnataka.gov.in

ಇ–ಹರಾಜಿನ ಮೂಲಕ ಆಸ್ತಿಗಳ ಮಾರಾಟ

ಈ ಕೆಳಕಂಡ ಘಟಕದ ಆಸ್ತಿಗಳನ್ನು ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ 1951 ಕಲಂ 29 ರನ್ವಯ ಸಂಸ್ಥೆಯ ವಶಕ್ಕೆ ಪಡೆದಿದ್ದು "ಅವು ಎಲ್ಲಿ ಹೇಗಿವೆಯೋ ಅದೇ ಸ್ಥಿತಿಯಲ್ಲಿ" ಘನ ಕರ್ನಾಟಕ ರಾಜ್ಯ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಹರಾಜಿನಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ. **(KSFC/2022-23/ AUCTION No.2747)**

ಮೆ: ಶ್ರೀ ಮಲೆ ಮಹದೇಶ್ವರ ಸಮುದಾಯ ಭವನ, ಮಾಗನೂರು ಗ್ರಾಮ, ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ, ಕಿರುಗಾವಲು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಮಾಲೀಕರು: ಶ್ರೀ.ಎಂ.ಡಿ ಗಂಗಾಧರ್

ಆಸ್ತಿಯ ವಿವರ:

ಭೂಮಿ: ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಯಾದ ಭೂಮಿ ಜಂಜರ್ ನಂ.293, ಆಸ್ತಿ ಸಂಖ್ಯೆ.231, ಸರ್ವೆ ನಂ.139 – 21 ಗುಂಟೆ, ಸರ್ವೆ ನಂ.139/ಬಿ – 8 ಗುಂಟೆ (ಒಟ್ಟು 29 ಗುಂಟೆ) ಮಾಗನೂರು ಗ್ರಾಮ, ಕಿರುಗಾವಲು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಕಟ್ಟಡ : ಅ) ನೆಲಮಾಳಿಗೆ ಆರ್.ಸಿ.ಸಿ. ವಿಸ್ತೀರ್ಣ 871.77 ಚದರ ಮೀಟರ್ ನಲ್ಲಿರುವ ಊಟದ ಹಾಲ್, ಅಡುಗೆ ಕೋಣೆ ಹಾಗೂ ಸ್ಟೋರ್ ರೂಮ್ (ಆ) ಕಲ್ಯಾಣ ಮಂಟಪದ ನೆಲಮಹಡಿಯಲ್ಲಿ 20 ಅಡಿ ಎತ್ತರ ಹಾಗೂ 563.80 ಚದರ ಮೀಟರ್ ವಿಸ್ತೀರ್ಣದ ಷೀಟ್ ಮೇಲ್ಛಾವಣಿ ಮದುವೆ ಸಭಾಂಗಣ ಇ) ಕಲ್ಯಾಣ ಮಂಟಪದ ನೆಲಮಹಡಿಯ ಮದುವೆ ಸಭಾಂಗಣಕ್ಕೆ ಹೊಂದಿಕೊಂಡಂತಿರುವ 364.16 ಚದರ ಮೀಟರ್ ವಿಸ್ತೀರ್ಣದಲ್ಲಿ ನಿರ್ಮಿಸಿರುವ 2 ಅಂತಸ್ತು ಆರ್‌ಸಿಸಿ ಕಟ್ಟಡದಲ್ಲಿ ಬಾತ್ ರೂಮ್ ಒಳಗೊಂಡಂತೆ 05 ರೂಮ್‌ಗಳು ಪ್ರತಿ ಅಂತಸ್ತಿನಲ್ಲಿ ಹಾಗೂ ಇದರ ತಾರಸಿ ಮೇಲೆ ನಿರ್ಮಿಸಿರುವ 21 x 14 ಅಡಿ ವಿಸ್ತೀರ್ಣದ ಆರ್.ಸಿ.ಸಿ ಕಟ್ಟಡ ಹಾಗೂ ಎಲ್ಲಾ ಫ್ಲೋರ್‌ಗಳಿಗೆ ಸಂಪರ್ಕಿಸುವ 20 x 8 ಅಡಿ ವಿಸ್ತೀರ್ಣದ ಮೆಟ್ಟಿಲುಗಳು.

ಮೀಸಲು ಬೆಲೆ : ರೂ.274.85 ಲಕ್ಷಗಳು,

ಇ.ಎಂ.ಡಿ ಹಣ : ರೂ.27.50 ಲಕ್ಷಗಳು

ಆಸ್ತಿಯ ಪರಿವೀಕ್ಷಣೆ : ದಿನಾಂಕ: 23.12.2022,ಬೆಳಿಗ್ಗೆ 11.00 ರಿಂದ 1.00 ಗಂಟೆ ಇ–ಹರಾಜು ಪ್ರಕ್ರಿಯೆ ದಿನಾಂಕ: 16.01.2023 ರಂದು ಬೆಳಿಗ್ಗೆ 11.00 ಗಂಟೆಗೆ ಪ್ರಾರಂಭವಾಗಿ ದಿನಾಂಕ: 23.01.2023 ರ ಬೆಳಿಗ್ಗೆ 11.00 ಗಂಟೆಗೆ ಮುಕ್ತಾಯವಾಗುತ್ತದೆ. ಇ.ಎಂ.ಡಿ.ಮೊತ್ತ ಹಾಗೂ ಇ.ಹರಾಜು ಸಂಸ್ಕರಣ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 21.01.2023 ಮಧ್ಯಾಹ್ನ 1.00 ಗಂಟೆಯವರೆಗೆ, ಆಸಕ್ತಿಯುಳ್ಳವರು ಇ–ಹರಾಜಿನ ನಿಯಮ ಮತ್ತು ಷರತ್ತುಗಳನ್ನು ಹಾಗೂ ಸರಳ ಇ–ಹರಾಜಿನಲ್ಲಿ ಭಾಗವಹಿಸಲು ಅನುಸರಿಸಬೇಕಾದ ಕ್ರಮಗಳು ಮತ್ತು ಪಾವತಿಯ ವಿಧಾನಗಳ ಬಗ್ಗೆ https//eproc.karnataka.gov.in ಮತ್ತು https://ksfc.karnataka.gov.in ಅಂತರ್ಜಾಲ ವಿಳಾಸಗಳಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080–68948777 & 22631200, ಶ್ರೀ ಅರವಿಂದ ಭವನ, 4ನೇ ಮಹಡಿ, ಮೈತ್ರಿಕ್ ಸೊಸೈಟಿ ಬಿಲ್ಡಿಂಗ್, ನೃಪತುಂಬ ರಸ್ತೆ, ಬೆಂಗಳೂರು –560001 ಹಾಗೂ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು. **ಆಸ್ತಿಯ ಮಾಲೀಕರು / ಸಾಲಗಾರರು / ಕಾನೂನು ಬದ್ಧ ವಾರಸುದಾರರು ಸಹ ತಮ್ಮ ಕಡೆಯಿಂದ ಹೆಚ್ಚಿನ ಬೆಲೆಗೆ ಕೊಂಡುಕೊಳ್ಳುವ ಖರೀದಿದಾರರನ್ನು ಕರೆತಂದು ತಮ್ಮ ಹಿತ ಕಾಯ್ದುಕೊಳ್ಳಲು ತಿಳಿಸಲಾಗಿದೆ.**

ದಿನಾಂಕ:15.12.2022 ಸಹಿ/–
ಸ್ಥಳ : ಮಂಡ್ಯ ಸಹಾಯಕ ಪ್ರಧಾನ ವ್ಯವಸ್ಥಾಪಕರು

ಹತ್ತು ಜಿಲ್ಲೆಗಳ ಬಿಜೆಪಿ ಕಚೇರಿ ಉದ್ಘಾಟನೆ • ಪಕ್ಷದ ರಾಜ್ಯ ನಾಯಕರಿಗೆ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸಲಹೆ

‘ಸಾಧನೆಯ ಕಾರ್ಡ್ ಮುಂದಿಟ್ಟು ಮತ ಕೇಳಿ’

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಬಡವರು, ರೈತರು, ದೀನದಲಿತರು ಹೀಗೆ ಎಲ್ಲಾ ವರ್ಗದವರ ಏಳಿಗೆಗೆ ನಮ್ಮ ಸರ್ಕಾರ ಮಾಡಿದ ಕೆಲಸಗಳನ್ನು ಜನರ ಮುಂದಿಟ್ಟು ಮತ ಕೇಳಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಕಾರ್ಯಕರ್ತರಿಗೆ ಸಲಹೆ ನೀಡಿದರು.

ಕೊಪ್ಪಳ ಸೇರಿದಂತೆ ರಾಜ್ಯದ ವಿವಿಧ ಹತ್ತು ಜಿಲ್ಲೆಗಳ ಬಿಜೆಪಿ ಕಚೇರಿಗಳನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ವಿಧಾನಸಭಾ ಚುನಾವಣೆಗೆ ಮತ ಕಹಳೆ ಊದಿದರು.

‘ಪ್ರಧಾನಿ ನರೇಂದ್ರ ಮೋದಿ, ಬಿ.ಎಸ್. ಯಡಿಯೂರಪ್ಪ ಮಾಡಿದ ಕೆಲಸಗಳು ಮತ್ತು ಈಗ ಬಸವರಾಜ ಬೊಮ್ಮಾಯಿ ಜಾರಿಗೆ ತಂದ ಯೋಜನೆಗಳನ್ನು ಜನರ ಮನೆಬಾಗಿಲಿಗೆ ಮುಟ್ಟಿಸಬೇಕು. ಜನರ ಹಿಂದೆ ಹೋಗಬೇಕು’ ಎಂದು ಕರೆ ನೀಡಿದರು.

‘ಆಂಜನೇಯ ಜನಿಸಿದ ಪುಣ್ಯಭೂಮಿ ಯಿಂದ ಮಾತನಾಡುತ್ತಿರುವುದು ಹೆಮ್ಮೆಯ ಸಂಗತಿ’ ಎಂದು ಮಾತು ಆರಂಭಿಸಿದ ನಡ್ಡಾ ತಮ್ಮ ಮಾತಿನ ಮಧ್ಯೆ ‘ಈ ಬಾರಿ ಬಿಜೆಪಿಯನ್ನು ಗೆಲ್ಲಿಸುತ್ತೀರಲ್ಲವೇ’ ಎಂದು ಪ್ರಶ್ನಿಸಿದರು.

‘ರಾಹುಲ್ ಗಾಂಧಿ ನಡೆಸಿದ ಭಾರತ್ ಜೋಡೊ ದೇಶವನ್ನು ಒಗ್ಗೂಡಿಸಲು ಮಾಡಿದ್ದಲ್ಲ. ಅದು ಪಶ್ಚಾತಾಪದ ಯಾತ್ರೆ. ರಾಹುಲ್ ಪೂರ್ವಜರು ದೇಶವನ್ನು ಒಡೆದಿದ್ದಾರೆ. ಜಮ್ಮು ಕಾಶ್ಮೀರವನ್ನು ಇಬ್ಭಾಗ ಮಾಡಿದ್ದಾರೆ. ಅವರು ಮಾಡಿದ ಪಾಪಕ್ಕೆ ಈಗ ಪಶ್ಚಾತ್ತಾಪ ಪಟ್ಟು ಯಾತ್ರೆ ಮಾಡುತ್ತಿದ್ದಾರೆ’ ಎಂದು ಹರಿಹಾಯ್ದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡ ನಡ್ಡಾ, ‘ಬಿಜೆಪಿಗೆ ಪಕ್ಷವೇ ಪರಿವಾರವಾದರೆ, ಕಾಂಗ್ರೆಸ್‌ಗೆ ಪರಿವಾರವೇ ಪಕ್ಷವಾಗಿದೆ. ಸಿದ್ದರಾಮಯ್ಯ ಜನರಲ್ಲಿ ಜಾತಿಯ ವಿಷಬೀಜ ಬಿತ್ತುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ದಿನಕ್ಕೊಂದು ಹಗರಣದಲ್ಲಿ ಸಿಲುಕುತ್ತಿದ್ದಾರೆ. ಅವರ ಬಗ್ಗೆ ಮಾತನಾಡಲು ಆಗದಷ್ಟು ಹಗರಣಗಳಿವೆ’ ಎಂದರು.



ಕೊಪ್ಪಳದಲ್ಲಿ ಗುರುವಾರ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಜೊತೆ ಕೈ ಜೋಡಿಸಿದ ರಾಜ್ಯ ಹಾಗೂ ರಾಷ್ಟ್ರೀಯ ಬಿಜೆಪಿ ನಾಯಕರು —ಪ್ರಜಾವಾಣಿ ಚಿತ್ರ

‘ಸಿದ್ದರಾಮಯ್ಯ ಏನು ಮಾಡಿದ್ದಾರೆ?’

ಕೊಪ್ಪಳ: ‘ಪರಿಶಿಷ್ಟ ಸಮುದಾಯಕ್ಕೆ ಮೀಸಲಾತಿ ಮತ್ತು ಒಳಮೀಸಲಾತಿ ನೀಡುವ ವಿಷಯದಲ್ಲಿ ಅಧಿಕಾರದಲ್ಲಿದ್ದಾಗ ಏನೂ ಮಾಡದ ಸಿದ್ದರಾಮಯ್ಯ ಈಗ ವಿನಾಕಾರಣ ಅಡ್ಡಗಾಲು ಹಾಕುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದರು.

> **ಯಡಿಯೂರಪ್ಪ ಸಾಕಷ್ಟು ಶ್ರಮಪಟ್ಟು ಪಕ್ಷವನ್ನು ರಾಜ್ಯದಲ್ಲಿ ಕಟ್ಟಿ ಬೆಳೆಸಿದ್ದಾರೆ. ಅವರು ಬಿಜೆಪಿಯ ಪಿತಾಮಹ**
> **ಜೆ.ಪಿ. ನಡ್ಡಾ,** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

‘ಒಳ ಮೀಸಲಾತಿಗೆ ಸಚಿವ ಸಂಪುಟ ಉಪ ಸಮಿತಿ ರಚಿಸಿದ್ದಕ್ಕೆ ಸಿದ್ದರಾಮಯ್ಯ ಟೀಕೆ ಮಾಡುತ್ತಿದ್ದಾರೆ. ಇದೇ ಬೇಡಿಕೆಗೆ ಆಗ್ರಹಿಸಿ ಹಿಂದೆ ಹೋರಾಟ ನಡೆದಾಗ ಸುಮ್ಮನಿದ್ದವರು ಈಗ ಮಾತನಾಡುತ್ತಿದ್ದಾರೆ. ಜನರಿಗೆ ಮೋಸ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ’ ಎಂದು ಟೀಕಿಸಿದರು.

‘ಮೊದಲೆಲ್ಲ ಹಿಂದಿನ ಸರ್ಕಾರಗಳು ಹಗರಣಗಳನ್ನು ಮುಂದಿಟ್ಟು ಮತಯಾಚನೆ ಮಾಡುತ್ತಿದ್ದವು. ಈಗ ಸರ್ಕಾರದ ಸಾಧನೆಗಳು ಮತ್ತು ಸಕಾರಾತ್ಮಕ ವಿಚಾರಗಳನ್ನು ಜನರಿಗೆ ಹೇಳಿ ಮತ ಕೇಳಲಾಗುತ್ತದೆ. ಅಂಜನಾದ್ರಿಯನ್ನು ಮಾದರಿಯಾಗಿ ಅಭಿವೃದ್ಧಿ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಸಂಸದ ಸಂಗಣ್ಣ ಕರಡಿ, ಸಚಿವರಾದ ಗೋವಿಂದ ಕಾರಜೋಳ, ಆನಂದ್ ಸಿಂಗ್, ಹಾಲಪ್ಪ ಆಚಾರ್, ಶಾಸಕರಾದ ಪರಣ್ಣ ಮುನವಳ್ಳಿ, ಬಸವರಾಜ ದಢೇಸೂಗೂರು, ವಿಧಾನಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಹೇಮಲತಾ ನಾಯಕ್ ಇದ್ದರು.

ಕಾಂಗ್ರೆಸ್‌ಗೆ 136, ಬಿಜೆಪಿಗೆ 66: ಡಿ.ಕೆ.ಶಿವಕುಮಾರ್

ಬೆಂಗಳೂರು: ‘ನಮ್ಮ ಸಮೀಕ್ಷೆ ಪ್ರಕಾರ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 136, ಬಿಜೆಪಿ 66 ಸ್ಥಾನ ಪಡೆಯಲಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವ ಕುಮಾರ್ ಗುರುವಾರ ಹೇಳಿದರು.

ಪ್ರೆಸ್‌ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್‌ನಲ್ಲಿ ಕೆಲವರು ತಮ್ಮ ನಾಯಕರ ಪರ ಅಭಿಮಾನ ವ್ಯಕ್ತಪಡಿಸುತ್ತಾರೆ. ಆದರೆ, ನಾನು ಮತ್ತು ಸಿದ್ದರಾಮಯ್ಯ ಕಿತ್ತಾಡಿದ್ದನ್ನು ಹೇಳಿ ನೋಡೋಣ. ಬಿಜೆಪಿಯಲ್ಲಿ ಕಿತ್ತಾಟದ ಪಟ್ಟಿ ನೀಡಲೇ?’ ಎಂದರು.

‘ದೆಹಲಿ ನಾಯಕರು ನಿಮ್ಮಿಬ್ಬರನ್ನು ಕುಳ್ಳಿರಿಸಿ ಮಾತನಾಡಿಸಿದ್ದು ಸುಳ್ಳಾ’ ಎಂಬ ಪ್ರಶ್ನೆಗೆ, ‘ನಮ್ಮನ್ನು ಯಾರೂ ಕುಳ್ಳಿರಿಸಿ ಮಾತನಾಡಿಲ್ಲ. ನನ್ನನ್ನು, ಶಾಸಕಾಂಗ ಪಕ್ಷದ ನಾಯಕ ಹಾಗೂ ಇತರ ನಾಯಕರನ್ನು ಕರೆಸಿ ಚುನಾವಣೆ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಸಮೀಕ್ಷೆ ಮಾಡಿಸಿದ್ದೆ. ರಾಷ್ಟ್ರೀಯ ನಾಯಕರೂ ಸಮೀಕ್ಷೆ ಮಾಡಿಸಿದ್ದಾರೆ’ ಎಂದರು.

‘ಮುಖ್ಯಮಂತ್ರಿ ಸ್ಥಾನಕ್ಕೆ ಕಿತ್ತಾಟ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ನಮ್ಮಲ್ಲಿ ಕಿತ್ತಾಟದ ಒಂದು ಘಟನೆ ಸಿಗದಿದ್ದರೂ ಆ ಚರ್ಚೆಗೆ ನೀವು (ಮಾಧ್ಯಮ) ಅವಕಾಶ ಮಾಡಿಕೊಟ್ಟಿದ್ದೀರಿ. ಕಾಂಗ್ರೆಸ್ ಮುಖ್ಯಮಂತ್ರಿ ಬಗ್ಗೆಯೇ ಬಿಜೆಪಿಯವರು ಹೆಚ್ಚು ಮಾತನಾಡುತ್ತಿದ್ದಾರೆ. ಅಂದರೆ, ಅವರು ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂಬುದನ್ನು ಒಪ್ಪಿಕೊಂಡಂತೆ ಅಲ್ಲವೇ’ ಎಂದರು.

‘ನಿಮ್ಮನ್ನು ಕೊತ್ವಾಲ್ ರಾಮ ಚಂದ್ರನ ಶಿಷ್ಯ ಎನ್ನುತ್ತಾರಲ್ಲ’ ಎಂದಾಗ, ‘ಕೊತ್ವಾಲ್ ರಾಮಚಂದ್ರನ ಶಿಷ್ಯ ಎಂಬುದಕ್ಕೆ ದಾಖಲೆ ಏನಿದೆ? 1980 ರಿಂದ ರಾಜಕಾರಣದಲ್ಲಿದ್ದೇನೆ. 85ರಲ್ಲಿ ದೇವೇಗೌಡರ ವಿರುದ್ಧ ಸ್ಪರ್ಧಿಸಿದ್ದೆ’ ಎಂದರು.

‘ಕುಮಾರಸ್ವಾಮಿ ಬಗ್ಗೆ ಮಾತು ಕಡಿಮೆ ಮಾಡಿದ್ದೀರಿ’ ಎಂಬ ಪ್ರಶ್ನೆಗೆ ‘ಎಷ್ಟು ಅಂತ ಕುಸ್ತಿ ಮಾಡಲಿ. ಕುಸ್ತಿ ಸೈದ್ಧಾಂತಿಕವಾಗಿರಲಿದೆ, ವೈಯಕ್ತಿಕವಾಗಿ ಅಲ್ಲ’ ಎಂದರು.

ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ಇದ್ದರು.

‘ಕೈ’ ಹಿಡಿದ ಬಿಜೆಪಿ ಮುಖಂಡರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲ್ಲಾಪುರ ಕ್ಷೇತ್ರದ ಮಾಜಿ ಶಾಸಕ, ಬಿಜೆಪಿಯ ವಿ.ಎಸ್. ಪಾಟೀಲ ಮತ್ತು ಮುಖಂಡ ಶ್ರೀನಿವಾಸ್ ಭಟ್ ದಾತ್ರಿ ಅವರು ಗುರುವಾರ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಪಕ್ಷದ ಧ್ವಜ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು.

‘ನಮ್ಮ ಜತೆ ವಿ.ಎಸ್.ಪಾಟೀಲ ಕೆಲಸ ಮಾಡಿದ್ದಾರೆ. ಅಬ್ದುಲ್ ಕಲಾಂ ರಾಷ್ಟ್ರಪತಿ ಆಗಿದ್ದ ಸಂದರ್ಭದಲ್ಲಿ ಪಾಟೀಲ ಅವರಿಗೆ ಅತ್ಯುತ್ತಮ ಶಾಸಕ ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದರು. ಪಾಟೀಲರ ತಂದೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಈ ಮಧ್ಯೆ, ವಿ.ಎಸ್.ಪಾಟೀಲರು ಬಿಜೆಪಿ ಸೇರಿ ಸ್ಪರ್ಧಿಸಿದ್ದರು. ನಮ್ಮ ಶಾಸಕರು ‘ಆಪರೇಷನ್ ಕಮಲ’ದಲ್ಲಿ ಬಿಜೆಪಿಗೆ ಹೋದ ನಂತರ ಆ ಕ್ಷೇತ್ರಗಳಲ್ಲಿರುವ ಬಿಜೆಪಿಯ ಅನೇಕ ನಾಯಕರು ನಮ್ಮ ಪಕ್ಷದತ್ತ ಬರುತ್ತಿದ್ದಾರೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಶ್ರೀನಿವಾಸ್ ಭಟ್ ದಾತ್ರಿ ಅವರು ಶಾಸಕ ಆರ್.ವಿ.ದೇಶಪಾಂಡೆ ಮತ್ತು ನನ್ನನ್ನು ಭೇಟಿ ಮಾಡಿ ಪಕ್ಷ ಸೇರುವ ಇಂಗಿತ ವ್ಯಕ್ತಪಡಿಸಿದ್ದರು.

ಪಕ್ಷದ ಸಿದ್ಧಾಂತ, ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆ, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ನಾಯಕತ್ವ ಒಪ್ಪಿ ಬಂದಿದ್ದಾರೆ. ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಮತ್ತು ಸ್ಥಳೀಯ ನಾಯಕರ ಜೊತೆ ಚರ್ಚಿಸಿ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದೇವೆ’ ಎಂದರು.

‘ಪಕ್ಷ ಸೇರಲು ಹಲವರು ಅರ್ಜಿ ಹಾಕಿದ್ದಾರೆ. ಇನ್ನಿಬ್ಬರು ನಾಯಕರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳಬೇಕಾಗಿತ್ತು. ಅವರ ಆರೋಗ್ಯ ಸರಿ ಇಲ್ಲದ ಕಾರಣ ಸೇರ್ಪಡೆ ಕಾರ್ಯಕ್ರಮವನ್ನು ಮುಂದೂಡಿದ್ದೇವೆ. ಕೆಲವರು ವಿಧಾನ ಮಂಡಲ ಅಧಿವೇಶನ ಮುಗಿಯಲಿ ಎಂದು ಕಾಯುತ್ತಿದ್ದಾರೆ. ನಾವು ಮುಂದಿನ ದಿನಗಳಲ್ಲಿ ಪ್ರತಿವಾರ ಸಭೆ ಮಾಡಿ ಒಬ್ಬೊಬ್ಬರನ್ನೇ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ’ ಎಂದು ಅವರು ಹೇಳಿದರು.

‘ಬಿಜೆಪಿ ಸೇರಲು ವಿಜಯೇಂದ್ರ ದುಡ್ಡು ಕೊಡಲು ಬಂದಿದ್ದರು’

ಮೈಸೂರು: ‘ನಾನು ಬಿಜೆಪಿ ಸೇರಬೇಕೆಂದು ಕೇಳಿಕೊಂಡು ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ದುಡ್ಡು ಕೊಡಲು ಬಂದಿದ್ದರು. ಅವರ ಅಪಾರ್ಟ್‌ಮೆಂಟ್‌ನಲ್ಲೇ ಮಾತುಕತೆ ನಡೆದಿತ್ತು’ ಎಂದು ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಇಲ್ಲಿ ಗುರುವಾರ ತಿಳಿಸಿದರು.

‘ನನ್ನನ್ನು ಬಿಜೆಪಿ ಹೆಬ್ಬಾಗಿಲಿಗೆ ಕರೆದುಕೊಂಡು ಬಂದು ಕಡಿದವರೇ ಸಂಸದ ವಿ.ಶ್ರೀನಿವಾಸ ಪ್ರಸಾದ್. ವಿಜಯೇಂದ್ರ ಮನೆಯಲ್ಲಿ ಮಾತುಕತೆ ನಡೆದಿತ್ತು. ಅವರೊಂದಿಗೆ ಬಿ.ಎಸ್.ಯಡಿಯೂರಪ್ಪ, ರಮೇಶ ಜಾರಕಿಹೊಳಿ ಇದ್ದರು. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡುವುದಕ್ಕಾಗಿ ನೀವು ಬಿಜೆಪಿಗೆ ಬರಬೇಕು ಎಂದು ನನ್ನನ್ನು ಕರೆದಿದ್ದರು. ಆ ಸ್ನೇಹಕ್ಕೆ ಕಟ್ಟುಬಿದ್ದು ಬಂದೆ’ ಎಂದು ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಶ್ರೀನಿವಾಸಪ್ರಸಾದ್ ಹಾಗೂ ಯಡಿಯೂರಪ್ಪ ನನ್ನ ಕೈಬಿಟ್ಟರು. ನಾನು ಸಚಿವನಾಗಲು ಯಾರೂ ಸಹಕಾರ ಕೊಡಲಿಲ್ಲ. ವಿಧಾನಪರಿಷತ್ ಸದಸ್ಯ ಸ್ಥಾನ ಸಿಗುವುದಕ್ಕೂ ಅವರಾರೂ ಕಾರಣವಾಗಲಿಲ್ಲ. ಸಹಾಯವನ್ನೂ ಮಾಡಲಿಲ್ಲ. ನನ್ನನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದವರು ಆರ್‌ಎಸ್‌ಎಸ್ ರಾಜ್ಯ ಪ್ರಮುಖ ಮುಕುಂದ. ಅವರಿಲ್ಲದಿದ್ದರೆ ನನಗೆ ಮೋಸವಾಗುತ್ತಿತ್ತು. ಶೀಘ್ರದಲ್ಲೇ ಹೊರಬರಲಿರುವ ನನ್ನ ‘ಬಾಂಬೆ ಡೇಸ್’ ಪುಸ್ತಕದ ಮೊದಲ ಅಧ್ಯಾಯದಲ್ಲೇ ಈ ಎಲ್ಲ ವಿವರಗಳಿವೆ’ ಎಂದು ಪ್ರತಿಕ್ರಿಯಿಸಿದರು.

‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಸೌಹಾರ್ದದಿಂದ ಭೇಟಿಯಾಗಿದ್ದೇನಷ್ಟೆ. ಅದೇನು ಘೋರ ಅಪರಾಧವೇ? ರಾಜಕೀಯ ಸಹಿಷ್ಣುತೆ ಯಾಕಿರಬಾರದು? ನಾನೀಗ ಸಂಪೂರ್ಣವಾಗಿ, ಮಾನಸಿಕವಾಗಿ ಬಿಜೆಪಿಯಲ್ಲಿದ್ದೇನೆ. ಚುನಾವಣೆಯ ಯೋಚನೆಯಲ್ಲಿಲ್ಲ. ನಾನು ಅವಕಾಶವಾದಿ ರಾಜಕಾರಣಿಯಲ್ಲ’ ಎಂದರು.

ಒಕ್ಕಲಿಗರ ಮತ: ‘ಕೈ’ ನಾಯಕರ ಚಿತ್ತ

ಬೆಂಗಳೂರು: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕರು ಜಾತಿ ಸಮೀಕರಣಕ್ಕೆ ಮುಂದಾಗಿದ್ದು, ಒಕ್ಕಲಿಗ ಸಮುದಾಯವನ್ನು ಸೆಳೆಯಲು ರೂಪಿಸಬೇಕಾದ ತಂತ್ರಗಾರಿಕೆಗಳ ಬಗ್ಗೆ ಗುರುವಾರ ಚರ್ಚೆ ನಡೆಸಿದರು.

ನಗರದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಒಕ್ಕಲಿಗ ನಾಯಕರ ಸಭೆಯಲ್ಲಿ ಜೆಡಿಎಸ್‌ನಿಂದ ಉಚ್ಚಾಟನೆಗೊಂಡಿರುವ ಗುಬ್ಬಿ ಕ್ಷೇತ್ರದ ಶಾಸಕ ಎಸ್.ಆರ್. ಶ್ರೀನಿವಾಸ್ ಮತ್ತು ಕೋಲಾರ ಶಾಸಕ ಶ್ರೀನಿವಾಸ್ ಗೌಡ ಕೂಡಾ ಭಾಗವಹಿಸಿದರು. ಈ ಸಂದರ್ಭದಲ್ಲಿ ಎಸ್.ಆರ್.ಶ್ರೀನಿವಾಸ್, ‘ನನ್ನ ಕ್ಷೇತ್ರಕ್ಕೆ ಬಂದು ನನ್ನ ವಿರುದ್ಧವೇ ಅಭ್ಯರ್ಥಿ ಘೋಷಿಸಿದ್ದಾರೆ. ನಾನು ಎಲ್ಲಿಗೆ ಬೇಕಾದರೂ ಹೋಗಬಹುದು. ನಾನು ಈಗ ಸ್ವತಂತ್ರ ಹಕ್ಕಿ. ಮುಂದಿನ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಆಗಬಹುದು’ ಎಂದರು.

‘ಬಜೆಟ್ ಅಧಿವೇಶನದ ಬಳಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಮನವೊಲಿಕೆ ಮುಗಿದ ಅಧ್ಯಾಯ’ ಎಂದರು. ‘ಸಮುದಾಯದ ನಾಯಕರ ಸಭೆ ಬರುವಂತೆ ಕಾಂಗ್ರೆಸ್ ನಾಯಕರು ಆಹ್ವಾನಿಸಿದ್ದರು. ಹೀಗಾಗಿ ಬಂದಿದ್ದೇನೆ’ ಎಂದೂ ಹೇಳಿದರು.

ಚೆಲುವರಾಯಸ್ವಾಮಿ ಮಾತನಾಡಿ, ‘ಹಳೆ ಮೈಸೂರು ಭಾಗದಲ್ಲಿ ಪಕ್ಷದತ್ತ ಸಮುದಾಯದ ಮತ ಸೆಳೆಯಲು ರಾಜಕೀಯವಾಗಿ ಯಾವ ನಡೆ ತೆಗೆದುಕೊಳ್ಳಬೇಕು ಎಂದು ಚರ್ಚಿಸಿದ್ದೇವೆ’ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಸಂಸದ ಡಿ.ಕೆ.ಸುರೇಶ್, ಶಾಸಕರಾದ ಕೃಷ್ಣ ಭೈರೇಗೌಡ, ಎಂ. ಕೃಷ್ಣಪ್ಪ, ಎಚ್.ಸಿ ಬಾಲಕೃಷ್ಣ, ರಾಜೇಗೌಡ, ಹನೂರು ನರೇಂದ್ರ, ಮಾಲೂರು ನಂಜೇಗೌಡ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಮಾದೇಗೌಡ, ಮುಖಂಡರಾದ ಆತ್ಮಾನಂದ, ಕಿಮ್ಮನೆ ರತ್ನಾಕರ್, ಟಿ.ಬಿ. .ಜಯಚಂದ್ರ, ಪ್ರಿಯಕೃಷ್ಣ ಸೇರಿದಂತೆ 25ಕ್ಕೂ ಹೆಚ್ಚು ನಾಯಕರು ಸಭೆಯಲ್ಲಿದ್ದರು.

ಬಿಹಾರ ಕಳ್ಳಬಟ್ಟಿ: 26 ಸಾವು

ಪಟ್ನಾ (ಪಿಟಿಐ): ಬಿಹಾರದ ಸರಣ್ ಜಿಲ್ಲೆಯಲ್ಲಿ ಸಂಭವಿಸಿದ ಕಳ್ಳಬಟ್ಟಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 26ಕ್ಕೆ ಏರಿಕೆಯಾಗಿದ್ದು, ರಾಜ್ಯದಲ್ಲಿ ಇರುವ ಮದ್ಯ ನಿಷೇಧ ಕಾನೂನಿನ ಔಚಿತ್ಯದ ಬಗ್ಗೆ ತೀವ್ರ ಟೀಕೆ ವ್ಯಕ್ತವಾಗಿದೆ.

ಬಿಹಾರ ವಿಧಾನಸಭೆಯ ಚಳಿಗಾಲದ ಅಧಿವೇಶನದಲ್ಲಿ ಸತತ ಎರಡನೇ ದಿನವೂ ವಿರೋಧ ಪಕ್ಷಗಳು ಸಾರಣ್ ದುರಂತದ ಕುರಿತು ಗದ್ದಲ ಎಬ್ಬಿಸಿದವು. ಸ್ಪೀಕರ್ ಪೀಠದ ಎದುರು ಬಿಜೆಪಿ ಶಾಸಕರು ಫಲಕಗಳನ್ನು ಹಿಡಿದು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪಕ್ಷದಲ್ಲಿ ನಿರ್ಲಕ್ಷ್ಯದ ಪ್ರಶ್ನೆಯೇ ಇಲ್ಲ: ಯಡಿಯೂರಪ್ಪ

ಕೊಪ್ಪಳ: ‘ಹಗಲಿರುಳು ಕಷ್ಟಪಟ್ಟು ದುಡಿದು ಪಕ್ಷ ಕಟ್ಟಿದವರಲ್ಲಿ ನಾನೂ ಪ್ರಮುಖ ಎನ್ನುವ ವಿಷಯ ಎಲ್ಲರಿಗೆ ಗೊತ್ತಿರುವುದೇ. ಪಕ್ಷದಲ್ಲಿ ನನ್ನನ್ನು ನಿರ್ಲಕ್ಷ್ಯ ಮಾಡುವ ಪ್ರಶ್ನೆಯೇ ಇಲ್ಲ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನನ್ನನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎನ್ನುವುದಕ್ಕೆ ಅರ್ಥವಿಲ್ಲ. ನಾವೆಲ್ಲ ಒಟ್ಟಾಗಿದ್ದೇವೆ. ಬಿಜೆಪಿಯನ್ನು ಅಧಿಕಾರಕ್ಕೆ ತರುವುದೇ ನಮ್ಮ ಮುಂದಿನ ಗುರಿ’ ಎಂದರು. ‘ವಿಶೇಷವಾದ ಕಾರಣಕ್ಕಾಗಿ ಎಲ್ಲಿಯೂ ಹೋಗುವ ಸ್ಥಿತಿಯಲ್ಲಿ ಇರಲಿಲ್ಲ. ಸ್ವತಃ ರಾಷ್ಟ್ರೀಯ ಅಧ್ಯಕ್ಷರೇ ಕೊಪ್ಪಳಕ್ಕೆ ಬಂದ ಕಾರಣ ಎಲ್ಲ ಕಾರ್ಯಕ್ರಮ ರದ್ದುಪಡಿಸಿ ಬಂದಿದ್ದೇನೆ. ಯಾರೂ ಯಾರನ್ನೂ ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎನ್ನುವುದರಲ್ಲಿ ಅರ್ಥವಿಲ್ಲ’ ಎಂದರು.

ಬಿಎಸ್‌ವೈ ಸರ್ವೋಚ್ಚ ನಾಯಕರು: ಯಡಿಯೂರಪ್ಪ, ನನ್ನ ನಡುವೆ ತಂದೆ ಮಗನ ಸಂಬಂಧವಿದೆ. ಭಿನ್ನಾಭಿಪ್ರಾಯ ಎನ್ನುವುದು ಹಗಲುಗನಸು. ಅವರು ಸರ್ವೋಚ್ಚ ನಾಯಕರು. ಅವರ ಮಾರ್ಗದರ್ಶನ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಗಡಿ ವಿವಾದ– ಕೇಂದ್ರದ ನಡೆಗೆ ಶಿಂದೆ ಪ್ರಶಂಸೆ

ಪ್ರಜಾವಾಣಿ ವಾರ್ತೆ

ಮುಂಬೈ: ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ನಡೆದ ಸಭೆ ಕುರಿತು ಮೆಚ್ಚುಗೆಯ ಮಾತನಾಡಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು, ಈ ವಿವಾದ ಸಂಬಂಧಿಸಿ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರವು ಮಧ್ಯಪ್ರವೇಶಿಸಿದೆ. ಈ ನಡೆ ಪ್ರಶಂಸಾರ್ಹ ಎಂದಿದ್ದಾರೆ.

‘ಸಭೆ ಕರ್ನಾಟಕ ಪರವಾಗಿತ್ತು’: ಗಡಿ ವಿವಾದಕ್ಕೆ ಸಂಬಂಧಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನಡೆದ ಸಭೆಯಿಂದ ರಾಜ್ಯಕ್ಕೆ ಯಾವುದೇ ಪ್ರಯೋಜನವಿಲ್ಲ. ಈ ಸಭೆಯಲ್ಲಿ ನಡೆದ ಚರ್ಚೆಗಳು ಕರ್ನಾಟಕ ಪರವಾಗಿಯೇ ಇದ್ದವು ಎಂದು ಶಿವಸೇನಾ (ಉದ್ಧವ್ ಠಾಕ್ರೆ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಗುರುವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಸಭೆಯು ಗಾಯದ ಮೇಲೆ ಬರೆ ಎಳೆದಿದೆಯಷ್ಟೆ’ ಎಂದರು.



ರುಕ್ಮಿಣಿ ವಸಂತ್



ವೇದ
ಶಿವರಾಜ್ ಕುಮಾರ್
ಗಾನವಿ ಲಕ್ಷ್ಮಣ್

‘ಪುಷ್ಪ’ ಅಂದ್ರೆ ಫ್ಲವರ್ ಅಲ್ಲ!

‘ಹೀರೋ’ ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿದ್ದ ನಟಿ ಗಾನವಿ ಲಕ್ಷ್ಮಣ್, ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ ‘ವೇದ’ದ ಮೂಲಕ ತಮ್ಮ ಸಿನಿಪಯಣಕ್ಕೊಂದು ದೊಡ್ಡ ತಿರುವು ನೀಡಿದ್ದಾರೆ...

ಅಭಿಲಾಷ್ ಪಿ.ಎಸ್.

• ನಿಮ್ಮ ಪುಟ್ಟ ಸಿನಿಪಯಣದಲ್ಲೊಂದು ದೊಡ್ಡ ಪ್ರಾಜೆಕ್ಟ್ ‘ವೇದ’. ಇದನ್ನು ನೀವು ನೋಡಿದ ಬಗೆ..

ಕಲಾವಿದೆಯಾಗಿ ಕಲಿಯುತ್ತಾ ಯಾದ ದಿಕ್ಕಿನಲ್ಲಿ ಸಾಗುತ್ತಿದ್ದೇನೆ, ಎಷ್ಟು ಸಾಮರ್ಥ್ಯದಿಂದ ಕೆಲಸ ಮಾಡಬಹುದು ಎನ್ನುವುದನ್ನು ನಾನು ಅರಿತಿದ್ದೆ. ಕಥೆ ಕೇಳುವಾಗ, ಈ ಪಾತ್ರವನ್ನು ನಾನೇ ಮಾಡಬೇಕು ಎನ್ನುವ ಹುಮ್ಮಸ್ಸು ಮೂಡಬೇಕು ಎನ್ನುವುದು ನನ್ನ ಆದ್ಯತೆ. ಇಂಥ ಅವಕಾಶಕ್ಕಾಗಿ ಕಾಯುತ್ತಿದ್ದೆ. ‘ವೇದ’ ಪ್ರಾಜೆಕ್ಟ್ ದೊರಕಿದಾಗ, ನನ್ನ ಮನಸ್ಸಿನಲ್ಲಿ ಎರಡನೇ ಯೋಚನೆಯೇ ಇರಲಿಲ್ಲ. ‘ಮಗಳು ಜಾನಕಿ’ ಧಾರಾವಾಹಿಗೆ ಪ್ರವೇಶಿಸಿದಾಗ, ಈ ಬಣ್ಣದ ಲೋಕಕ್ಕೆ ನಾನು ಹೊಸಬಳು. ಅಲ್ಲಿ ಕಲಿತಿರುವುದು ‘ಭಾವಚಿತ್ರ’ ಸಿನಿಮಾವಾಗಿ ಹೊರಬಂತು. ‘ಹೀರೋ’ ಸಿನಿಮಾ ಮೂಲಕ ನನ್ನ ನಟನೆಯನ್ನು ಮತ್ತಷ್ಟು ಹರಿತ ಮಾಡಿಕೊಂಡೆ. ಮುಂದಿನ ಹೆಜ್ಜೆ ಇಡುವ ಮುಂಚೆ ಹತ್ತಾರು ಬಾರಿ ಯೋಚಿಸಿದ್ದೆ. ದೊಡ್ಡ ಕಥೆ, ಶಕ್ತಿಯುತವಾದ ಪಾತ್ರವೇ ಬೇಕು ಎನ್ನುವ ತುಡಿತ ಸದಾ ಜಾಗೃತವಾಗಿತ್ತು. ಇದಕ್ಕೆ ‘ವೇದ’ದಲ್ಲಿ ವೇದಿಕೆಯಿತ್ತು.

• ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳಲು ಏಕಿಷ್ಟು ಸಮಯ ತೆಗೆದುಕೊಂಡಿರಿ?

ನಾನು ಈ ಕಲೆಯನ್ನು ಬಹಳ ದೈವಿಕ ದೃಷ್ಟಿಯಿಂದ ನೋಡುತ್ತೇನೆ. ಪ್ರಯೋಗಕ್ಕೆ ಒಡ್ಡಿಕೊಳ್ಳುವ ಜೀವನವೇ ನಮ್ಮದು. ಚೌಕಟ್ಟಿನಲ್ಲಿ ಸಿಲುಕಿಕೊಳ್ಳಬಾರದು. ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದೇ ಬಂದ ನನಗೆ ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಇರಲಿಲ್ಲ. ಈ ಸಮುದ್ರಕ್ಕೆ ಇಳಿದು ಈಜುವಾಗ ಸುಳಿಯಲ್ಲಿ ಸಿಲುಕಿಕೊಂಡರೆ ಒಮ್ಮೆಲೇ ಕುಸಿದು ಬೀಳುವಂಥ ಭೀತಿ ಹುಟ್ಟುತ್ತದೆ. ಕೋವಿಡ್ ಸಂದರ್ಭದಲ್ಲಿ ಎಲ್ಲರಂತೇ ನನ್ನ ಜೀವನವೂ ಸ್ಥಗಿತವಾಗಿತ್ತು. ಸಿನಿಮಾ ಎನ್ನುವುದು ಬೃಹತ್ ಜಗತ್ತು. ಇಲ್ಲಿ ನೀವು ನೀವಾಗಿಯೇ ಇರುವುದಕ್ಕೆ ಬಹಳ ಧೈರ್ಯ ಬೇಕು. ನಾಟಕೀಯವಾಗಿ ಇರಲು ನನಗಂತೂ ಸಾಧ್ಯವಿಲ್ಲ. ಇದಕ್ಕೆ ಮನಸ್ಸು ಒಪ್ಪುವುದಿಲ್ಲ. ಪ್ರತಿ ಬಾರಿ ಕಥೆ ಬಂದಾಗ, ಈ ರೀತಿಯೇ ಯೋಚಿಸುತ್ತಿದ್ದೆ. ಆಯ್ಕೆಗೆ ಹೆಚ್ಚಿನ ಆದ್ಯತೆ ನೀಡಿದರೆ ಈ ಕ್ಷೇತ್ರದಲ್ಲಿ ಉಳಿಯಲು ಸಾಧ್ಯವೇ, ಇಲ್ಲವೇ ಬೇರೆ ಕೆಲಸ ಮಾಡಬೇಕೇ ಎನ್ನುವ ಪ್ರಶ್ನೆಗಳೂ ಉದ್ಭವಿಸಿದ್ದವು. ಈ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಇಷ್ಟು ವರ್ಷ ನನ್ನ ಸಮಯವನ್ನು ವಿನಿಯೋಗಿಸಿದ್ದೇನೆ. ನಟನೆಯಲ್ಲಿ, ನನ್ನನ್ನು ನಾನು ಮತ್ತೊಂದು ಹಂತದಲ್ಲಿ ನೋಡಲು ಇಚ್ಛಿಸಿದ್ದೆ. ಹೀಗಿರುವಾಗ ‘ವೇದ’ ಪ್ರಾಜೆಕ್ಟ್ ಸಿಕ್ಕಿತು. ಈ ಸಿನಿಮಾದಲ್ಲಿ ಸಿಕ್ಕಿರುವ ಪಾತ್ರ ನನಗೆ ಬಹಳ ತೃಪ್ತಿ ತಂದಿದೆ. ಮುಂದೆ ಏನು ಮಾಡಬೇಕು ಎಂದು ತೋಚದಷ್ಟು ತೃಪ್ತಿ ಸಿಕ್ಕಿದೆ.

• ಗಾನವಿಯವರ ಪ್ರಕಾರ ‘ವೇದ’ ಎಂದರೆ?

‘ವೇದ’ ಎಂದರೆ ನನ್ನ ದೃಷ್ಟಿಯಲ್ಲಿ ಒಂದು ಅದ್ಭುತವಾದ ಶಕ್ತಿ. ಅದೊಂದು ವ್ಯಕ್ತಿತ್ವ. ಒಮ್ಮೊಮ್ಮೆ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಒಮ್ಮೆಮ್ಮೆ ಅದು ನಮ್ಮ ಸಂಸ್ಕೃತಿಯಿಂದಲೇ ಬರುತ್ತದೆ. Be a man like Vedha. ಮಹಿಳೆಯೂ ‘ವೇದ’ನಂತೆ ಇರಬಹುದು, ಆಗಬಹುದು. ಹ್ಯಾಟ್ರಿಕ್ ಹೀರೊ ಆಗಿ, ಸೆಂಚುರಿ ಸ್ಟಾರ್ ಆಗಿ ಶಿವರಾಜ್‌ಕುಮಾರ್ ಅವರು ತಮ್ಮ ವೃತ್ತಿ ಜೀವನದಲ್ಲಿ ಇಂತಹ ಒಂದು ಹೆಜ್ಜೆ ಇಟ್ಟಿರುವುದು ಕರುನಾಡಿನ ಜನತೆಗೆ ಅವರು ನೀಡಿರುವ ಕೊಡುಗೆ. ಈ ರೀತಿಯ ಕಥಾಹಂದರದ ಸಿನಿಮಾವನ್ನು ನೀಡಿರುವುದಕ್ಕೆ ಅವರಿಗೆ ಧನ್ಯವಾದ. ಈ ಸಿನಿಮಾದಲ್ಲಿ ಪ್ರತಿಯೊಂದು ಪಾತ್ರವನ್ನು ನಾಜೂಕಿನಿಂದ ಹೆಣೆದಿದ್ದಾರೆ ನಿರ್ದೇಶಕ ಎ.ಹರ್ಷ ಅವರು. ಪ್ರತಿಯೊಂದು ಪಾತ್ರದಲ್ಲೂ ಶಕ್ತಿ ಇದೆ. ಮಹಿಳೆ ಹಾಗೂ ಪುರುಷನ ಶಕ್ತಿಯ ಅನಾವರಣವೇ ‘ವೇದ’.

• ಸೆಂಚುರಿ ಹೊಡೆದು ಮುನ್ನುಗ್ಗುತ್ತಿರುವ ಶಿವರಾಜ್‌ಕುಮಾರ್ ಅವರ ಜೊತೆ ನಟನೆಯ ಅನುಭವ...

ನಿರ್ದೇಶಕ ಒಂದು ಪಾತ್ರವನ್ನು ಸೃಷ್ಟಿಸುತ್ತಾನೆ. ಅದನ್ನು ಒಬ್ಬ ಕಲಾವಿದನ ಮನಸ್ಸಿನೊಳಗೆ ಅಚ್ಚೊತ್ತುತ್ತಾನೆ. ಈ ಸಾಮರ್ಥ್ಯ ಹರ್ಷ ಅವರಲ್ಲಿ ಅದ್ಭುತವಾಗಿದೆ. ನನಗೆ ಆ ಪಾತ್ರದೊಳಗೆ ಇಳಿದು ನಟಿಸುವ ಆಸಕ್ತಿ ಇದೆ. ಅಷ್ಟೇ ಅಲ್ಲದೆ, ‘I want to be in an unlearn space’. ಹೀಗಾಗಿ ಪಾತ್ರಕ್ಕಿಳಿದ ಬಳಿಕ ನನಗೆ ಯಾರೂ ಕಾಣಿಸಲಿಲ್ಲ. ಶಿವರಾಜ್‌ಕುಮಾರ್ ಅವರ ಜೊತೆ ನಟನೆ, ಸುಂದರವಾದ ಅನುಭವ. ನಮಗೆಲ್ಲ ಬೆಂಬಲವಾಗಿ ನಿಂತಿದ್ದರು. ಗೀತಾ ಶಿವರಾಜ್‌ಕುಮಾರ್ ಅವರ ಪ್ರೊಡಕ್ಷನ್, ಎ.ಹರ್ಷ ಅವರ ನಿರ್ದೇಶನ. ಇಂತಹ ಚಿತ್ರತಂಡ ಸೇರಿಕೊಳ್ಳುವುದು ಒಂದು ಆಶೀರ್ವಾದವೇ ಸರಿ.

• ‘ವೇದ’ದಲ್ಲಿನ ‘ಪುಷ್ಪ’...

(ನಗುತ್ತಾ...) ‘ಪುಷ್ಪ’ ಫ್ಲವರ್ ಅಲ್ಲ! ಇತ್ತೀಚೆಗಷ್ಟೇ ಬಿಡುಗಡೆಯಾದ ‘ಪುಷ್ಪ..ಪುಷ್ಪ’ ಹಾಡಿನಲ್ಲಿ ನನ್ನ ಪಾತ್ರವನ್ನು ನೋಡಿರುತ್ತೀರಿ. ಗಂಭೀರ ವದನೆ ನಾನಿಲ್ಲಿ. ಇದು ನಿಮಗೆ ಇಷ್ಟವಾಗಿದ್ದರೆ, ನಾನು ಪಾತ್ರದಲ್ಲಿ ಗೆದ್ದಿದ್ದೇನೆ ಎಂದರ್ಥ. ಈ ಹಾಡಿನ ಚಿತ್ರೀಕರಣದ ಸಂದರ್ಭದಲ್ಲಿ ಹೊಟ್ಟೆಹುಣ್ಣಾಗುವಷ್ಟು ನಗು ಉಕ್ಕಿಬಂದಿತ್ತು. ಉಮಾಶ್ರೀ ಹಾಗೂ ಶಿವರಾಜ್‌ಕುಮಾರ್ ಅವರ ಜೋಡಿ ಮಾಡುತ್ತಿದ್ದ ಆ ನಟನೆ, ಆ ಎನರ್ಜಿ ಅದ್ಭುತ.

• ಗಾನವಿ ಅವರ ಹೊಸ ಪ್ರಾಜೆಕ್ಟ್‌ಗಳು..

ನನ್ನ ತೆಲುಗಿನ ಮೊದಲ ಚಿತ್ರ, ಅಜಯ್ ಸಾಮ್ರಾಟ್ ನಿರ್ದೇಶನದ ಜಗಪತಿ ಬಾಬು, ಆಶಿಶ್ ಗಾಂಧಿ ಅವರು ನಟಿಸಿರುವ ‘ರುದ್ರಾಂಗಿ’ ಚಿತ್ರೀಕರಣ ಪೂರ್ಣಗೊಂಡಿದ್ದು, ಮುಂದಿನ ವರ್ಷ ಬಿಡುಗಡೆಯಾಗಲಿದೆ. ಸದ್ಯ ‘ವೇದ’ದ ಪ್ರಚಾರ ಕಾರ್ಯದಲ್ಲೇ ತೊಡಗಿದ್ದೇನೆ. ಈ ಗಳಿಗೆಯನ್ನು ಆನಂದಿಸುತ್ತಿದ್ದೇನೆ. ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿಲ್ಲ. ❖

‘ಬಘೀರ’ನಿಗೆ ಜೋಡಿಯಾದ ರುಕ್ಮಿಣಿ

‘ಉಗ್ರಂ’ ಸಿನಿಮಾ ಬಳಿಕ ಪ್ರಶಾಂತ್ ನೀಲ್ ಹಾಗೂ ರೋರಿಂಗ್ ಸ್ಟಾರ್ ಶ್ರೀಮುರಳಿ ಕಾಂಬಿನೇಷನ್‌ನಲ್ಲಿ ಸೆಟ್ಟೇರಿರುವ ‘ಬಘೀರ’ ಸಿನಿಮಾತಂಡದಿಂದ ಹೊಸ ಸುದ್ದಿಯೊಂದು ಸಿಕ್ಕಿದೆ.

‘ಬಘೀರ’ನಿಗೆ ನಟಿ ರುಕ್ಮಿಣಿ ವಸಂತ್ ಜೋಡಿಯಾಗಲಿದ್ದಾರೆ. ಗೋಲ್ಡನ್ ಸ್ಟಾರ್ ಗಣೇಶ್ ಜೊತೆ ‘ಬಾನದಾರಿಯಲ್ಲಿ’ ಸುತ್ತಿ ಬಂದಿರುವ ರುಕ್ಮಿಣಿ ವಸಂತ್, ಸದ್ಯ ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ಅವರ ಜೊತೆ ‘ಸಪ್ತ ಸಾಗರದಾಚೆ ಎಲ್ಲೋ’ ಹೊರಟಿದ್ದಾರೆ. ಈ ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದೆ. ಇದಾದ ಬಳಿಕ ಬಘೀರನ ಸಾಮ್ರಾಜ್ಯಕ್ಕೆ ಅವರು ಇಳಿಯಲಿದ್ದಾರೆ.

ಡಾ. ಸೂರಿ ಆ್ಯಕ್ಷನ್ ಕಟ್ ಹೇಳುತ್ತಿರುವ ‘ಬಘೀರ’ ಚಿತ್ರವನ್ನು ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡುತ್ತಿದೆ. ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಶ್ರೀಮುರಳಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ಪ್ರಶಾಂತ್ ನೀಲ್ ‘ಬಘೀರ’ ಚಿತ್ರಕ್ಕೆ ಕಥೆ ಬರೆದಿದ್ದು, ಡಾ. ಸೂರಿ ಅವರ ಚಿತ್ರಕಥೆ ಈ ಸಿನಿಮಾಕ್ಕಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಎ.ಜೆ. ಶೆಟ್ಟಿ ಛಾಯಾಗ್ರಹಣ ಹಾಗೂ ಶಿವಕುಮಾರ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ರಂಗಾಯಣ ರಘು, ಅಚ್ಯುತ್ ಕುಮಾರ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಗ್ಯಾಂಗ್‌ಸ್ಟರ್ ಆದ ಕ್ರೇಜಿಸ್ಟಾರ್ ಪುತ್ರ!

‘ತ್ರಿವಿಕ್ರಮ’ ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ಕ್ರೇಜಿ ಸ್ಟಾರ್ ವಿ.ರವಿಚಂದ್ರ ಅವರ ಪುತ್ರ ವಿಕ್ರಮ್ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ.

ಸಹನಾಮೂರ್ತಿ ಆ್ಯಕ್ಷನ್ ಕಟ್ ಹೇಳಿದ್ದ ‘ತ್ರಿವಿಕ್ರಮ’ ಗಾಂಧಿನಗರದಲ್ಲಿ ಸದ್ದು ಮಾಡಿತ್ತು. ವಿಕ್ರಮ್ ತಮ್ಮ ನಟನೆ, ಆ್ಯಕ್ಷನ್ ಸೀಕ್ವೆನ್ಸ್ ಮೂಲಕ ಪ್ರೇಕ್ಷಕರನ್ನು ಸೆಳೆದಿದ್ದರು. ಇದಾದ ಬಳಿಕ ವಿಕ್ರಮ್ ಯಾರ ಜೊತೆ ಸಿನಿಮಾ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಇದೀಗ ಉತ್ತರ ಸಿಕ್ಕಿದೆ. ಮೊದಲ ಸಿನಿಮಾದಲ್ಲಿ ಮಧ್ಯಮ ವರ್ಗದ ಮನೆಯ ಹುಡುಗನಾಗಿ ತೆರೆ ಮೇಲೆ ಬಂದಿದ್ದ ವಿಕ್ರಮ್ ಇದೀಗ ಗ್ಯಾಂಗ್‌ಸ್ಟರ್ ಅವತಾರ ತಾಳಲಿದ್ದಾರೆ ಎಂದಿದೆ ಹೊಸ ಚಿತ್ರತಂಡ.

ತಮಿಳು, ತೆಲುಗು ಚಿತ್ರರಂಗದಲ್ಲಿ ಸಹ ನಿರ್ದೇಶಕನಾಗಿ, ಸಿನಿಮಾ ಬರಹಗಾರನಾಗಿ ಗುರುತಿಸಿಕೊಂಡಿರುವ ಕಾರ್ತಿಕ್ ರಾಜನ್, ತಮ್ಮ ಚೊಚ್ಚಲ ಚಿತ್ರದಲ್ಲಿ ವಿಕ್ರಮ್‌ಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ. ಎರಡನೇ ಸಿನಿಮಾದಲ್ಲಿ ಮಾಸ್ ಹೀರೊ ಆಗಿ ತೆರೆ ಮೇಲೆ ಮಿಂಚಲು ವಿಕ್ರಮ್ ಸಕಲ ರೀತಿಯಲ್ಲೂ ಸಜ್ಜಾಗುತ್ತಿದ್ದಾರೆ ಎಂದಿದೆ ಚಿತ್ರತಂಡ. ಇತ್ತೀಚೆಗಷ್ಟೇ ತೆರೆಕಂಡಿದ್ದ ‘ಹೆಡ್ ಬುಷ್’ ಸಿನಿಮಾದಲ್ಲೂ ಸಹ ನಿರ್ದೇಶಕನಾಗಿ ಕೆಲಸ ಮಾಡಿರುವ ಕಾರ್ತಿಕ್, ಇದೇ ಮೊದಲ ಬಾರಿಗೆ ಡೈರೆಕ್ಟರ್ ಕ್ಯಾಪ್ ತೊಡುತ್ತಿದ್ದಾರೆ. ಚಿತ್ರದ ಮುಹೂರ್ತ ಇತ್ತೀಚೆಗಷ್ಟೇ ಸರಳವಾಗಿ ನಡೆದಿದೆ.



ಕಾರ್ತಿಕ್ ರಾಜನ್ ಹಾಗೂ ವಿಕ್ರಮ್

ಚಿತ್ರದ ಪ್ರಿ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು ಸದ್ಯದಲ್ಲೇ ಶೀರ್ಷಿಕೆ, ತಾರಾಬಳಗ, ತಂತ್ರಜ್ಞರ ಬಗ್ಗೆ ಹೆಚ್ಚಿನ ಮಾಹಿತಿ ಹಂಚಿಕೊಳ್ಳುವುದಾಗಿ ಕಾರ್ತಿಕ್ ರಾಜನ್ ತಿಳಿಸಿದ್ದಾರೆ. ಜನವರಿಯಲ್ಲಿ ಚಿತ್ರೀಕರಣ ಆರಂಭವಾಗಲಿದ್ದು, ಎಸ್.ಥಮನ್ ಜೊತೆ ಕೆಲಸ ಮಾಡಿ ಅನುಭವ ಇರುವ ಯುವರಾಜ್ ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಲಿದ್ದಾರೆ. ❖

ಗೀತೆಗಳಿಗೆ ಕಥೆ ಹೊಸೆದ ‘ಮಾವು–ಬೇವು’



‘ಮಾವು ಬೇವು’ ಚಿತ್ರದ ಒಂದು ನೋಟ

ಖ್ಯಾತ ಗಾಯಕರು, ಸಾಹಿತಿಗಳು, ಆಡಿಯೋ ಸಂಸ್ಥೆಯ ಆಯ್ದ ಗೀತೆಗಳನ್ನು ಆಧರಿಸಿ ಮೂಡಿಬಂದಿದೆ ‘ಮಾವು ಬೇವು’ ಚಿತ್ರ.

ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಿ.ಅಶ್ವಥ್ ಗಾಯನದ, ಡಾ.ದೊಡ್ಡರಂಗೇಗೌಡ ಅವರ ಸಾಹಿತ್ಯದ ಗೀತೆಗಳಿಗೆ ನಿರ್ದೇಶಕ ಸುಚ್ಚೇಂದ್ರ ಪ್ರಸಾದ್ ಕಥೆ ಹೊಸೆದು ನಿರ್ದೇಶಿಸಿದ್ದಾರೆ. ಸುಚ್ಚೇಂದ್ರ ಅವರ ನಿರ್ದೇಶನದ ಐದನೇ ಚಿತ್ರವಿದು. ಹಾಡುಗಳ ಅರ್ಥ, ತಿರುಳಿಗೆ ತಕ್ಕಂತೆ ದೃಶ್ಯಗಳು ಮೂಡಿ ಬಂದಿವೆ. ಲಹರಿ ಸಂಸ್ಥೆಯ ನಿರ್ಮಾಣದ ಗೀತೆಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಈಗಾಗಲೇ ಆಲ್ಬಂ, ಚಲನಚಿತ್ರಗಳಲ್ಲಿ ಮೂಡಿಬಂದ 10 ಗೀತೆಗಳನ್ನು ಚಿತ್ರಕ್ಕೆ ಅಳವಡಿಸಲಾಗಿದೆ.

ಕನ್ನಡದ ಮೇರು ಕೃತಿ ‘ಸಿರಿಭೂವಲಯ’ದ ಬಗ್ಗೆ ಚಿತ್ರ ಚರ್ಚಿಸಿದೆ. ಬದುಕು, ಅಹಂ, ಜಂಜಾಟಗಳು, ಶಿಥಿಲ ಸಂಬಂಧಗಳು, ಜೀವನಪ್ರೀತಿ, ಭಾವನಾತ್ಮಕತೆ ಇತ್ಯಾದಿ ಎಲ್ಲ ವಿಷಯಗಳನ್ನು ಒಟ್ಟಾಗಿಸಿ ಈ ಚಿತ್ರದ ಕಥೆಯಿದೆ. ರಂಗಭೂಮಿ, ಚಿತ್ರರಂಗದ ಕಲಾವಿದರು ನಟಿಸಿದ್ದಾರೆ.

ದೊಡ್ಡರಂಗೇಗೌಡ ಅವರು ಹೇಳುವಂತೆ, ‘1982ರಲ್ಲಿ ಹುಟ್ಟಿದ ಸಾಲುಗಳು 40 ವರ್ಷಗಳ ಬಳಿಕ ಬೆಳ್ಳಿತೆರೆಯಲ್ಲಿ ಚಿತ್ರದ ರೂಪದಲ್ಲಿ ಬರುತ್ತಿವೆ. ಸಾಯಿಗಗನ್ ಪ್ರೊಡಕ್ಷನ್ ಮೂಲಕ ರಾಜಶೇಖರ್ ಅವರು ಬಂಡವಾಳ ಹೂಡಿದರು. ಈ ಚಿತ್ರ ನಿರ್ಮಾಣದ ಹಂತಗಳೇ ರೋಚಕ. ಅವೆಲ್ಲವನ್ನೂ ಹತ್ತಿರದಲ್ಲಿ ನೋಡಿದ್ದೇನೆ’ ಎಂದರು.

ನಿರ್ದೇಶಕ ಸುಚ್ಚೇಂದ್ರ ಪ್ರಸಾದ್ ಪ್ರಕಾರ, ‘ಈ ಚಿತ್ರ ಹಲವು ಪ್ರಥಮಗಳ ಆಗರ. ‘ಸಿರಿಭೂವಲಯ’ ಕೃತಿ ಕನ್ನಡದ ಅಸ್ಮಿತೆ. ಅದನ್ನು ವಿಸ್ತಾರವಾಗಿ ಚರ್ಚಿಸಿದ್ದೇವೆ. ಕನ್ನಡ ಹಿಂದಿ, ಇಂಗ್ಲಿಷ್, ಸಂಸ್ಕೃತ ಹೀಗೆ ಎಲ್ಲ ಭಾಷೆಗಳನ್ನೂ ಮಾತನಾಡಿದ್ದೇವೆ. ಕಥೆಗೆ ಹಾಡು ಬರೆಯುವ ಬದಲು ಹಾಡಿಗೆ ತಕ್ಕಂತೆ ಕಥೆ ಬರೆದಿದ್ದೇವೆ. ಒಟ್ಟಿನಲ್ಲಿ ಇದು ಗೀತಗುಚ್ಛ ದೃಶ್ಯ ರೂಪಕ’ ಎಂದರು.

ಗಾಯಕಿ ಚೈತ್ರಾ, ರಂಜಿತಾ, ಸುಪ್ರಿಯಾ ರಾವ್, ಡಾ.ದೀಪಕ್, ಡ್ಯಾನಿ ಕುಟ್ಟಪ್ಪ ಸೇರಿದಂತೆ ಹಲವು ಕಲಾವಿದರು ತಾರಾಗಣದಲ್ಲಿ ಇದ್ದಾರೆ. ಡಾ.ದೀಪಕ್ ಅವರು ಹಿನ್ನೆಲೆ ಸಂಗೀತ ನೀಡಿದ್ದಾರೆ. ❖

ಸೆಮಿಫೈನಲ್ ಹಂತಕ್ಕೆ ‘ತಾಯಿ ಕಸ್ತೂರ್ ಗಾಂಧಿ’

ಕಸ್ತೂರ್ ಬಾ ಗಾಂಧಿಯವರ ಜೀವನವನ್ನು ಆಧರಿಸಿ ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿರುವ ‘ತಾಯಿ ಕಸ್ತೂರ್ ಗಾಂಧಿ’ ಸಿನಿಮಾ, ಇದೀಗ ಮೆಲ್ಬರ್ನ್ ಇಂಡಿಪೆಂಡೆಂಟ್ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗದಲ್ಲಿ ಸೆಮಿಫೈನಲ್ ಹಂತಕ್ಕೆ ಆಯ್ಕೆಯಾಗಿದೆ.

ಇತ್ತೀಚೆಗೆ ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಸಿನಿಮಾ ಪ್ರದರ್ಶನ ಕಂಡಿತ್ತು. 12ನೇ ದಾದಾ ಸಾಹೇಬ್ ಫಾಲ್ಕೆ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೂ ಈ ಚಿತ್ರ ಆಯ್ಕೆಯಾಗಿತ್ತು. ಅಮೆರಿಕದ ಡಲ್ಲಾಸ್ ಚಿತ್ರೋತ್ಸವದಲ್ಲಿ ಈ ಚಿತ್ರಕ್ಕೆ ಅತ್ಯುತ್ತಮ ಸಂಕಲನಕ್ಕಾಗಿ ಪ್ರಶಸ್ತಿ ಲಭಿಸಿತ್ತು. ಸುರೇಶ್ ಅರಸು ಈ ಚಿತ್ರದ ಸಂಕಲನಕಾರರು.

ಬರಗೂರು ಅವರು ಬರೆದ ‘ಕಸ್ತೂರ್ ಬಾ Vs ಗಾಂಧಿ’ ಕಾದಂಬರಿಯನ್ನು ಈ ಚಿತ್ರವು ಆಧರಿಸಿದೆ. ಈ ಕಾದಂಬರಿ ‘ಸುಧಾ’ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು.

‘ಕಸ್ತೂರ್‌ಬಾ ತಾಯಿಯಾಗಿ ಮತ್ತು ಪತ್ನಿಯಾಗಿ ಎದುರಿಸಿದ ಬಿಕ್ಕಟ್ಟುಗಳು, ಅಪರೂಪದ ದಾಂಪತ್ಯ ಮತ್ತು ಸಾಮಾಜಿಕ ಕಾಳಜಿಗಳು ಸಿನಿಮಾದ ಮುಖ್ಯ ಕಥಾವಸ್ತು’ ಎಂದಿದ್ದಾರೆ ನಿರ್ದೇಶಕರು.

ಕಸ್ತೂರ್ ಬಾ ಪಾತ್ರದಲ್ಲಿ ನಟಿ ಹರಿಪ್ರಿಯಾ ಹಾಗೂ ಗಾಂಧಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಿದ್ದಾರೆ. ಜನಮಿತ್ರ ಮೂವೀಸ್ ಬ್ಯಾನರ್ ಅಡಿ ಬಿ.ಜಿ. ಗೀತಾ ಅವರು ಈ ಚಿತ್ರ ನಿರ್ಮಿಸಿದ್ದಾರೆ. ❖



ಹರಿಪ್ರಿಯಾ

ಲೂಸ್ ಮಾದನ ... ಸರೋಜ

ಲೂಸ್ ಮಾದ ಯೋಗಿ ನಾಯಕ ನಟನೆಯ ‘ನಾನು, ಅದು ಮತ್ತು ಸರೋಜ’ ಚಿತ್ರ ಡಿಸೆಂಬರ್ 30ರಂದು ತೆರೆ ಕಾಣಲಿದೆ.

ನಾನು ಈ ಹಿಂದೆ ‘ಮಡಮಕ್ಕಿ’ ಚಿತ್ರ ನಿರ್ದೇಶಿಸಿದ್ದೆ. ಇದು ಎರಡನೇ ಚಿತ್ರ. ‘ನಾನು, ಅದು ಮತ್ತು ಸರೋಜ’ ಚಿತ್ರದ ಕಥೆ ಮೂರು ಪ್ರಮುಖ ಪಾತ್ರಗಳ ಸುತ್ತ ಸಾಗುತ್ತದೆ. ಲೂಸ್ ಮಾದ ಯೋಗಿ, ಹಿರಿಯ ನಟ ದತ್ತಣ್ಣ ಹಾಗೂ ಅಪೂರ್ವಾ ಭಾರದ್ವಾಜ್ ಮುಖ್ಯ ಪಾತ್ರಗಳಲ್ಲಿದ್ದಾರೆ. ಅದು ಎಂಬುದು ಕೂಡ ಚಿತ್ರದಲ್ಲಿ ಮುಖ್ಯಪಾತ್ರ. ಅದನ್ನು ಚಿತ್ರದಲ್ಲೇ ನೋಡಬೇಕು ಎಂದರು ನಿರ್ದೇಶಕ ವಿನಯ್ ಪ್ರೀತಮ್.

‘ನಾನು ವಿಭಿನ್ನ ಕಥೆಯ ಸಿನಿಮಾಗಳಲ್ಲಿ ನಟಿಸಲು ಇಷ್ಟಪಡುತ್ತೇನೆ. ಹಾಗಾಗಿ ಪ್ರೋತ್ಸಾಹಿಸಿ’ ಎಂದರು ನಾಯಕ ಯೋಗಿ.

‘ನನ್ನದು ಈ ಚಿತ್ರದಲ್ಲಿ ಲೈಂಗಿಕ ಕಾರ್ಯಕರ್ತೆಯ ಪಾತ್ರ. ಸಾಮಾನ್ಯವಾಗಿ ಬೇರೆ ನಟಿಯರು ಈ ಪಾತ್ರ ಮಾಡಲು ಮುಜುಗರಪಡುತ್ತಾರೆ. ನನಗೂ ಮೊದಲು ಸ್ವಲ್ಪ ಮುಜಗರವಾಯಿತು. ಆದರೆ ಪಾತ್ರವನ್ನು ಪಾತ್ರ ಎಂದು ತಿಳಿದು, ನಟಿಸಿದ್ದೆ’ ಎಂದರು ನಟಿ ಅಪೂರ್ವ ಭಾರದ್ವಾಜ್.

ಸಂದೀಪ್, ಕುರಿ ಬಾಂಡ್ ರಂಗ, ಪ್ರವೀಣ್ ಶೆಟ್ಟಿ ತಾರಾಗಣದಲ್ಲಿದ್ದಾರೆ. ಸಂಗೀತ ನಿರ್ದೇಶನ ಪ್ರಸಾದ್ ಶೆಟ್ಟಿ ಅವರದ್ದು. ಪೂಜಾ ವಸಂತಕುಮಾರ್ ಚಿತ್ರದ ನಿರ್ಮಾಪಕಿ. ❖



ಅಪೂರ್ವಾ ಭಾರಾದ್ವಾಜ್, ಯೋಗೇಶ್

ರಾಜಕಾರಣಿ ಆಗಲಿದ್ದಾರೆ ಪ್ರಿಯಾಂಕ...



ಪ್ರಿಯಾಂಕಾ ಉಪೇಂದ್ರ

ಪ್ರಿಯಾಂಕ ಉಪೇಂದ್ರ ‘ಪಿ ಪಿ’ ಎನ್ನುವ ಚಿತ್ರಕ್ಕೆ ಸಹಿ ಹಾಕಿದ್ದಾರೆ. ಸಿನಿಮಾ ಕ್ಷೇತ್ರದಲ್ಲಿ ಕಲಾ ವಿಭಾಗದಲ್ಲಿ ದುಡಿದಿರುವ ಸಾಯಿಲಕ್ಷಣ್ ಈ ಚಿತ್ರಕ್ಕೆ ನಿರ್ದೇಶನ ಮಾಡುತ್ತಿದ್ದಾರೆ.

ಸೌಭಾಗ್ಯ ಸಿನಿಮಾಸ್ ಅಡಿಯಲ್ಲಿ ಮೂವರು ಉದ್ಯಮಿಗಳು ಈ ಚಿತ್ರ ನಿರ್ಮಿಸುತ್ತಿದ್ದಾರೆ. ರಾಜಕೀಯ ವಿಷಯ ಒಳಗೊಂಡ ಮಹಿಳಾ ಪ್ರಧಾನ ಕಥೆಯನ್ನು ಈ ಚಿತ್ರ ಹೊಂದಿದೆ. ‘ಪ್ರಜೆಯೇ ಪ್ರಭುಗಳು’ ಎಂಬ ಅಡಿಬರಹ ಇರಲಿದೆ.

ಭಾರತವನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗಬೇಕೆನ್ನುವ ನಾಯಕಿ, ಮಾನವ ಜೀವ ಒಂದೇ ಅಲ್ಲ, ಸರ್ವ ಜೀವಿಗಳು ಸುಖವಾಗಿರಬೇಕು ಎಂದು ಆಶಿಸುತ್ತಾಳೆ. ಇದಕ್ಕೋಸ್ಕರ ತನ್ನ ಜೀವವನ್ನೆ ತ್ಯಾಗ ಮಾಡಿ, ಜನ ಸೇವೆ ಜನಾರ್ದನ ಸೇವೆ ಅಂದುಕೊಂಡಿರುತ್ತಾಳೆ. ಜನರಿಗೆ ವಿಶ್ವಾಸದಿಂದ ಸೇವೆ ಮಾಡಿ ಎಂದು ಹೇಳುತ್ತಾಳೆ. ಹೀಗೆ ನೀತಿ ಸಂದೇಶವಿದೆ ಎಂದಿದೆ ಚಿತ್ರತಂಡ.

ರವಿಶಂಕರ್, ಉಳಿದಂತೆ ರವಿಕಾಳೆ, ರಾಹುಲ್‌ದೇವ್, ಗಿರಿಜಾಲೋಕೇಶ್, ಯಶ್‌ಶೆಟ್ಟಿ, ಚೆಲುವರಾಜು ತಾರಾಗಣದಲ್ಲಿ ಇದ್ದಾರೆ. ಡಾ.ವಿ.ನಾಗೇಂದ್ರಪ್ರಸಾದ್ ಸಾಹಿತ್ಯಕ್ಕೆ ಕೆ.ಎಂ.ಇಂದ್ರ ಅವರ ಸಂಗೀತ ಸಂಯೋಜನೆಯಿದೆ. ಛಾಯಾಗ್ರಹಣ ಮತ್ತು ಸಂಕಲನ ಋಷಿಕೇಶ್, ಸಾಹಸ ರಂಜಿತ್ ಅವರದ್ದು. ಬಾದಾಮಿ, ಐಹೊಳೆ, ಪಟ್ಟದಕಲ್ಲು ಇನ್ನು ಮುಂತಾದ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಯಲಿದೆ ಎಂದಿದೆ ಚಿತ್ರತಂಡ. ❖

ಇವರು ‘ಮೂಲತಃ ನಮ್ಮವರೇ’



ನವೀನ್ ಶಂಕರ್

‘ಗುಲ್ಟು’ ಚಿತ್ರದ ಮೂಲಕ ತೆರೆಯಲ್ಲಿ ಕಾಣಿಸಿಕೊಂಡ ನವೀನ್ ಶಂಕರ್ ನಾಯಕನಾಗಿ ನಟಿಸಿರುವ ಚಿತ್ರ ‘ಮೂಲತಃ ನಮ್ಮವರೇ’.

ಕಿರಣ್ ಗೋವಿಂದರಾಜ್ ನಿರ್ಮಿಸಿ, ಚೇತನ್ ಭಾಸ್ಕರಯ್ಯ ನಟಿಸಿ ನಿರ್ದೇಶಿಸಿರುವ ಈ ಚಿತ್ರದ ಶೀರ್ಷಿಕೆ ಅನಾವರಣ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು.

ರಂಗಭೂಮಿ ನಂಟಿರುವ ನನಗೆ ಸಿನಿಮಾ ನಿರ್ದೇಶನದಲ್ಲಿ ಆಸಕ್ತಿ. ಹಿಂದೆ ಕೆಲವು ಕಿರುಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಹಿರಿತೆರೆಯಲ್ಲಿ ಇದು ಮೊದಲ ಚಿತ್ರ. ‘ಮೂಲತ: ನಮ್ಮವರೇ’ ಇದೊಂದು ಕೌಟುಂಬಿಕ ಚಿತ್ರ. ಅಪ್ಪ - ಮಗನ ಬಾಂಧವ್ಯದ ಸನ್ನಿವೇಶಗಳೇ ಚಿತ್ರದ ಹೈಲೆಟ್. ಬೆಂಗಳೂರು ಹಾಗೂ ಕರಾವಳಿಯಲ್ಲಿ ಚಿತ್ರೀಕರಣ ಮಾಡಿದ್ದೇವೆ. ನವೀನ್ ಶಂಕರ್ ಬಿಟ್ಟರೆ ಬಹುತೇಕರಿಗೆ ಇದು ಮೊದಲ ಸಿನಿಮಾ ಎಂದಿದ್ದಾರೆ ನಿರ್ದೇಶಕರು.

‘ಇದು ನಾನು ಇಲ್ಲಿಯವರೆಗೂ ಮಾಡಿರದ ಕಥೆ. ಅಪ್ಪ - ಮಗನ ಸೆಂಟಿಮೆಂಟ್ ಸನ್ನಿವೇಶಗಳು ಎಲ್ಲರ ಮನಸ್ಸಿಗೆ ಹತ್ತಿರವಾಗಲಿದೆ. ಶೋಭ್ ರಾಜ್ ನನ್ನ ತಂದೆಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಮುಂಬೈನ ತಾನ್ಯಾ ಈ ಚಿತ್ರದ ನಾಯಕಿ. ಅವಿನಾಶ್, ಮಾಳವಿಕಾ ಅವಿನಾಶ್, ತೆಲುಗಿನ ಸತ್ಯಪ್ರಕಾಶ್ ನಟಿಸಿದ್ದಾರೆ’ ಎಂದರು ನಟ ನವೀನ್ ಶಂಕರ್.

ಕೇರಳದ ಚಂತು ಛಾಯಾಗ್ರಹಣ, ಏಕ್ ಕ್ಯಾಬ್ ದಿ ಬ್ಯಾಂಡ್ ಸಂಗೀತ ನಿರ್ದೇಶನ ಹಾಗೂ ಜುವೀನ್ ಸಿಂಗ್ ಅವರ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ. ❖


‘ನಾಡಗೀತೆ ಮೊದಲ, ಕೊನೆ ಚರಣ ಸಾಕು’

ತುಮಕೂರು: ನಾಡಗೀತೆಯಲ್ಲಿ ಹಲವು ಚರಣಗಳಿದ್ದು, ಮೊದಲ ಹಾಗೂ ಕೊನೆಯ ಚರಣ ಹಾಡಿದರೆ ಸಾಕು ಎಂದು ಸಾಹಿತಿ ಡಾ.ಹು.ಕ.ನಾಗರಾಜಯ್ಯ ಗುರುವಾರ ಸಲಹೆ ಮಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ‘ನಾಡಗೀತೆ ಎರಡೂವರೆ ನಿಮಿಷ ಬೇಕು. ಅದರ ಬದಲು ಮೊದಲ ಹಾಗೂ ಕೊನೆ ಚರಣಗಳನ್ನು 50 ಸೆಕೆಂಡುಗಳಲ್ಲಿ ಹಾಡಿ ಸಮಯ ಉಳಿಸಬಹುದು. ರಾಷ್ಟ್ರಗೀತೆಯನ್ನು 52 ಸೆಕೆಂಡುಗಳಲ್ಲಿ ಹಾಡಲಾಗುತ್ತಿದೆ’ ಎಂದರು.

ಪೂರ್ಣಕಾಮಾನಂದಜಿ ಮಹಾರಾಜ್ ನಿಧನ

ಮಂಗಳೂರು: ಇಲ್ಲಿನ ರಾಮಕೃಷ್ಣ ಮಠದ ನಿಕಟಪೂರ್ವ ಅಧ್ಯಕ್ಷ ಸ್ವಾಮಿ ಪೂರ್ಣಕಾಮಾನಂದಜಿ ಮಹಾರಾಜ್ (81) ಗುರುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.



1969ರಲ್ಲಿ ಭಾರತೀಯ ನೌಕಾ ಪಡೆಯಿಂದ ನಿವೃತ್ತಿ ಪಡೆದು, ಮುಂಬೈ ರಾಮಕೃಷ್ಣ ಮಠಕ್ಕೆ ಬ್ರಹ್ಮಚಾರಿಯಾಗಿ ಸೇರಿದ್ದ ಅವರು, ರಾಮಕೃಷ್ಣ ಮಹಾಸಂಘದ 10ನೇ ಅಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದಜಿ ಅವರಿಂದ ಮಂತ್ರದೀಕ್ಷೆ ಪಡೆದರು. 1978ರಲ್ಲಿ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ಮುಂಬೈ, ಅರುಣಾಚಲ ಪ್ರದೇಶ, ಮಾರಿಷಸ್ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ್ದರು.

1980ರಲ್ಲಿ ಮಂಗಳೂರಿಗೆ ಬಂದಿದ್ದ ಸ್ವಾಮೀಜಿ, 1998ರಲ್ಲಿ ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿ ನಿಯುಕ್ತರಾದರು. 2010ರಲ್ಲಿ ಅಧ್ಯಕ್ಷ ಸ್ಥಾನವನ್ನು ಸ್ವಾಮಿ ಜಿತಕಾಮಾನಂಜಿ ಅವರಿಗೆ ಹಸ್ತಾಂತರಿಸಿದ್ದರು.

ಮಂಗಳೂರು ರಾಮಕೃಷ್ಣ ಮಠದಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತು.

ನೋಟಿಸ್‌ಗೆ ಉತ್ತರಿಸಿದ ಹತ್ತು ಗ್ರಾಮ ಪಂಚಾಯಿತಿಗಳು ● ‘ಮಹಾ’ ಸರ್ಕಾರದ ಬೆದರಿಕೆ ಆರೋಪ

‘ಕರ್ನಾಟಕ ಸೇರುವ ಠರಾವು ಮಾಡಿಲ್ಲ’

ಪ್ರಜಾವಾಣಿ ವಾರ್ತೆ

ಸೋಲಾಪುರ: ‘ರಸ್ತೆ, ನೀರು, ಸಾರಿಗೆ, ರಸ್ತೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸದೇ ಇದ್ದರೆ ಕರ್ನಾಟಕ ಸೇರುತ್ತೇವೆ’ ಎಂದು ಠರಾವು ಪಾಸು ಮಾಡಿದ್ದ ಅಕ್ಕಲಕೋಟ ತಾಲ್ಲೂಕಿನ 11 ಗ್ರಾಮಗಳ ಪಂಚಾಯಿತಿಗಳನ್ನು ವಿಸರ್ಜಿಸಿ, ನೌಕರರನ್ನು ಸೇವೆಯಿಂದ ವಜಾಗೊಳಿಸುವುದಾಗಿ ಮಹಾರಾಷ್ಟ್ರ ಸರ್ಕಾರ ಎಚ್ಚರಿಕೆ ನೀಡಿದ ಕಾರಣಕ್ಕೆ ಅವುಗಳಲ್ಲಿ 10 ಗ್ರಾಮ ಪಂಚಾಯಿತಿಗಳು, ‘ನಾವು ಆ ರೀತಿ ಠರಾವು ಪಾಸು ಮಾಡಿಲ್ಲ’ ಎಂದು ಸ್ಪಷ್ಟನೆ ನೀಡಿವೆ.

‘ಮೂಲಸೌಕರ್ಯ ಒದಗಿಸದೆ ಹೋದರೆ ನಾವು ಕರ್ನಾಟಕಕ್ಕೆ ಸೇರುತ್ತೇವೆ ಎಂದು ಹೇಳಿದ್ದೇವೆಯೇ ಹೊರತು, ಯಾವುದೇ ಠರಾವು ಪಾಸ್ ಮಾಡಿಲ್ಲ’ ಎಂದು ನೋಟಿಸ್‌ಗೆ ಉತ್ತರಿಸಿವೆ.

‘11 ಗ್ರಾಮ ಪಂಚಾಯ್ತಿಗಳಲ್ಲಿ ಒಂಬತ್ತು ಗ್ರಾಮ ಪಂಚಾಯಿತಿಗಳು ಕರ್ನಾಟಕ ಸೇರುವುದಾಗಿ ಠರಾವು ಪಾಸ್ ಮಾಡಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುವುದು ಸತ್ಯ. ಆದರೆ, ಮಹಾರಾಷ್ಟ್ರ ಸರ್ಕಾರದ ಬೆದರಿಕೆಗೆ ಅಂಜಿ ಈಗ ಠರಾವು ಮಾಡಿಲ್ಲ ಎಂದು ಗ್ರಾ.ಪಂಗಳು ಹೇಳುತ್ತಿವೆ’ ಎಂದು ಸ್ಥಳೀಯರು ತಿಳಿಸಿದ್ದಾರೆ.

‘ಕರ್ನಾಟಕ ಸೇರುತ್ತೇವೆ ಎಂದು ನಾವು ಠರಾವು ಪಾಸು ಮಾಡಿದ್ದು ಸತ್ಯ. ಏನಾಗಲು ಅದರಿಂದ ನಾವು ಹಿಂದೆ ಸರಿಯುವುದಿಲ್ಲ’ ಎಂದು ಅಳಗಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಸದಸ್ಯರು ಹೇಳಿದ್ದಾರೆ.

ಮಹಾರಾಷ್ಟ್ರ ಸರ್ಕಾರ ಎಂಇಎಸ್ ಬೆಂಬಲಿಸದಿರಲಿ: ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ

ಬೆಳಗಾವಿ: ‘ಸುಪ್ರೀಂ ಕೋರ್ಟ್‌ನಲ್ಲಿ ನಿರ್ಧಾರ ಆಗುವವರೆಗೆ ಗಡಿ ವಿಚಾರದಲ್ಲಿ ಕರ್ನಾಟಕ–ಮಹಾರಾಷ್ಟ್ರ ಯಾವುದೇ ಬೇಡಿಕೆ ಇಡಬಾರದು ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈ ನಿರ್ಣಯದಂತೆ ಎಂಇಎಸ್ ಬೆಳಗಾವಿಯಲ್ಲಿ ನಡೆಸುವ ಯಾವುದೇ ಕರ್ನಾಟಕ ವಿರೋಧಿ ಚಟುವಟಿಕೆಗಳನ್ನು ಮಹಾರಾಷ್ಟ್ರ ಸರ್ಕಾರ ಅಥವಾ ಅಲ್ಲಿಯ ನಾಯಕರು ಬೆಂಬಲಿಸಬಾರದು. ಮಹಾ ಮೇಳಾವ್‌ನಲ್ಲಿಯೂ ಭಾಗವಹಿಸಬಾರದು’ ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಹೇಳಿದ್ದಾರೆ.

‘ಎರಡೂ ರಾಜ್ಯಗಳ ತಲಾ ಮೂವರು ಸಚಿವರ ಸಮಿತಿ ರಚಿಸಲು ಶಾ ತೀರ್ಮಾನಿಸಿದ್ದು ಒಳ್ಳೆಯ ಹೆಜ್ಜೆ. ಕರ್ನಾಟಕದಲ್ಲಿ 2018ರಿಂದಲೂ ಗಡಿ ಉಸ್ತುವಾರಿ ಸಚಿವರೇ ಇಲ್ಲ. ಈಗಲಾದರೂ ಬೊಮ್ಮಾಯಿ ಸರ್ಕಾರ ಅಮಿತ್ ಶಾ ಅವರ ಸೂಚನೆಯ ಮೇರೆಗೆ ಈ ದಿಸೆಯತ್ತ ನೇಮಕ ಮಾಡಬೇಕು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಿರಿಯ ಐಪಿಎಸ್ ಅಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವ ಬದಲಾಗಿ, ಉಭಯ ರಾಜ್ಯಗಳ ತಲಾ ಒಬ್ಬ ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ಇಂಥ ಸಮಿತಿ ರಚನೆಯಾಗಬೇಕು’ ಎಂದಿದ್ದಾರೆ.



‘1956ರ ರಾಜ್ಯ ಪುನರ್ ವಿಂಗಡಣಾ ಕಾನೂನನ್ನು 50 ವರ್ಷಗಳ ನಂತರ ಮಹಾರಾಷ್ಟ್ರವು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಕಾಲಬಾಹ್ಯ ಹಾಗೂ ಅಸಂಬದ್ಧವಾದದ್ದು ಎಂದೂ ವಾದಿಸಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

ಆರೋಪಿ ಸುಳಿವು: ಮಾಹಿತಿದಾರರಿಗೆ ₹ 5 ಲಕ್ಷದವರೆಗೂ ಬಹುಮಾನ

ಪ್ರಜಾವಾಣಿ ವಾರ್ತೆ

> ಮಾಹಿತಿದಾರ ಬಹುಮಾನದ ಮೊತ್ತವನ್ನು 2017ರ ಬಳಿಕ ಹೆಚ್ಚಳ ಮಾಡಿರಲಿಲ್ಲ. ಈಗ ಹೆಚ್ಚಿಸಿರುವುದು ಆರೋಪಿಗಳ ತ್ವರಿತ ಪತ್ತೆಗೆ ಸಹಕಾರಿಯಾಗಲಿದೆ.
> **ಆರಗ ಜ್ಞಾನೇಂದ್ರ,** ಗೃಹ ಸಚಿವ

ಬೆಂಗಳೂರು: ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಲ್ಲಿ ತಲೆಮರೆಸಿಕೊಂಡ ಆರೋಪಿಗಳ ಪತ್ತೆಗೆ ನೆರವಾಗುವ ಮಾಹಿತಿದಾರರಿಗೆ ನೀಡುವ ಬಹುಮಾನದ ಮೊತ್ತವನ್ನು ₹ 5 ಲಕ್ಷದವರೆಗೂ ಹೆಚ್ಚಿಸಿ ಗೃಹ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ರಾಷ್ಟ್ರೀಯ ಸುರಕ್ಷತೆ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವುದು, ಮಾದಕ ವಸ್ತು ಹಾಗೂ ಆಯುಧ ಕಳ್ಳಸಾಗಣೆ, ಮಕ್ಕಳು ಮತ್ತು ಮಹಿಳೆಯ ಮೇಲಿನ ದೌರ್ಜನ್ಯಕ್ಕೆ ಸಂಬಂಧಿತ ಪ್ರಕರಣಗಳಲ್ಲಿ ಘೋಷಿತ ಆರೋಪಿಗಳ ಪತ್ತೆಗೆ ಮಾಹಿತಿ ನೀಡಿದವರಿಗೆ ₹ 20,000 ನಗದು ಬಹುಮಾನ ನೀಡಲು ಅವಕಾಶವಿತ್ತು. ಬಹುಮಾನ ಹೆಚ್ಚಿಸಲು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಅಧಿಕಾರ ನೀಡುವಂತೆ ಗೃಹ ಇಲಾಖೆಯ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು.

‘ಬಹುಮಾನ ಕಡಿಮೆ ಇರುವುದರಿಂದ ಹೆಚ್ಚಿನ ಜನರು ಪೊಲೀಸ್ ಇಲಾಖೆಗೆ ಮನವಿಗೆ ಸ್ಪಂದಿಸುತ್ತಿಲ್ಲ. ₹ 5 ಲಕ್ಷದವರೆಗೂ ಬಹುಮಾನ ನೀಡಲು ಅವಕಾಶ ಕಲ್ಪಿಸಬೇಕು. ಈ ಬಗ್ಗೆ ತುರಿತವಾಗಿ ಆರೋಪಿಗಳ ಬಂಧನಕ್ಕೆ ಸಹಕಾರಿಯಾಗುತ್ತದೆ’ ಎಂದು ಪೊಲೀಸ್ ಮಹಾನಿರ್ದೇಶಕರು 2021ರಲ್ಲಿ ಪ್ರಸ್ತಾವ ಸಲ್ಲಿಸಿದ್ದರು. ಈ ಸಂಬಂಧ ಗುರುವಾರ ಆದೇಶ ಹೊರಡಿಸಲಾಗಿದೆ.

274 ಸಹ ಪ್ರಾಧ್ಯಾಪಕರಿಗೆ ಬಡ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 274 ಸಹ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕ (ಪ್ರೊಫೆಸರ್) ಹುದ್ದೆಗೆ ಬಡ್ತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ಉನ್ನತ ಶಿಕ್ಷಣದ ಇತಿಹಾಸದಲ್ಲಿ ಇದೇ ಮೊದಲ ಬಾರಿ ಪ್ರಥಮದರ್ಜೆ ಕಾಲೇಜುಗಳ ಬೋಧಕ ಸಿಬ್ಬಂದಿಗೆ ಪ್ರೊಫೆಸರ್‌ಗಳಾಗುವ ಅವಕಾಶ ದೊರೆತಿದೆ. ₹1,44,200–₹2,18,200 ವೇತನ ಶ್ರೇಣಿ ನಿಗದಿ ಮಾಡಲಾಗಿದೆ.

ಯುಜಿಸಿ ನಿಯಮಗಳಿಗೆ ಒಳಪಟ್ಟು ಅರ್ಹ ಸಹ ಪ್ರಾಧ್ಯಾಪಕರಿಗೆ ಬಡ್ತಿ ನೀಡಲು 2018ರಲ್ಲೇ ಸರ್ಕಾರ ಪ್ರಕ್ರಿಯೆ ಆರಂಭಿಸಿತ್ತು. ತಾಂತ್ರಿಕ ಕಾರಣಗಳನ್ನು ನೀಡಿ ಎರಡು ಬಾರಿ ಸಂದರ್ಶನ ನಡೆಸಿದರೂ, ಬಡ್ತಿ ಆದೇಶ ಹೊರಡಿಸಿರಲಿಲ್ಲ. ಈ ಕುರಿತು ‘ಪ್ರಜಾವಾಣಿ’ ಡಿ.15ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ಮೊದಲ ಆದೇಶದಲ್ಲಿ 179 ಹಾಗೂ ನಂತರದ ಆದೇಶದಲ್ಲಿ 95 ಸಹ ಪ್ರಾಧ್ಯಾಪಕರಿಗೆ ಬಡ್ತಿ ನೀಡಲಾಗಿದೆ. ನಕಲಿ ದಾಖಲೆ ಸಲ್ಲಿಸಿದ್ದ ಬಡ್ತಿ ಹಿಂಪಡೆಯಲಾಗುವುದು. ತಪ್ಪು ಮಾಹಿತಿ ಒದಗಿಸಿದ್ದಲ್ಲಿ ಅನುಮೋದಿಸಿದ ಪ್ರಾಂಶುಪಾಲರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮರುಪರಿಶೀಲನೆ ನಂತರವೇ ವೇತನ ನಿಗದಿೀಕರಣದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಆದೇಶದಲ್ಲಿ ಆಯುಕ್ತರು ಎಚ್ಚರಿಸಿದ್ದಾರೆ.

‘ದಶಕಗಳ ಕನಸು ನನಸಾಗಿದೆ. ಯುಜಿಸಿ ನಿಯಮಗಳ ಅನ್ವಯ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆದ ದೇಶದ ಮೊದಲ ರಾಜ್ಯ ಕರ್ನಾಟಕ’ ಎಂದು ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಟಿ.ಎಂ.ಮಂಜುನಾಥ ಪ್ರತಿಕ್ರಿಯಿಸಿದ್ದಾರೆ.

ಜ.24ರಿಂದ ಜೆಇಇ–ಮೇನ್

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿನ ಜೆಇಇ–ಮೇನ್‌ನ ಮೊದಲ ಅವಧಿಯ ಪರೀಕ್ಷೆಯನ್ನು ಜನವರಿ 24ರಿಂದ 31ರ ವರೆಗೆ ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಗುರುವಾರ ತಿಳಿಸಿದೆ.

ಗಣರಾಜ್ಯೋತ್ಸವ ದಿನದಂದು ಪರೀಕ್ಷೆ ಇರುವುದಿಲ್ಲ. ಕನ್ನಡ, ಇಂಗ್ಲಿಷ್ ಸೇರಿದಂತೆ 13 ಭಾಷೆಗಳಲ್ಲಿ ಈ ಪರೀಕ್ಷೆಯನ್ನು ನಡೆಸಲಾಗುವುದು ಎಂದು ಎನ್‌ಟಿಎ ಹಿರಿಯ ನಿರ್ದೇಶಕಿ (ಪರೀಕ್ಷೆಗಳು) ಸಾಧನಾ ಪರಾಶರ ತಿಳಿಸಿದ್ದಾರೆ.

ಗುರುವಾರದಿಂದ (ಡಿ.15) ಅರ್ಜಿ ಸ್ವೀಕಾರ ಆರಂಭವಾಗಿದ್ದು, ಜ.12ರ ವರೆಗೆ ಸ್ವೀಕರಿಸಲಾಗುವುದು. ಎರಡನೇ ಅವಧಿಯ ಪರೀಕ್ಷೆಯು ಏಪ್ರಿಲ್‌ನಲ್ಲಿ ನಡೆಯುವುದು ಎಂದು ತಿಳಿಸಿದ್ದಾರೆ.

ತೆಲಂಗಾಣ: ಬಂಡೆಗಳ ಮಧ್ಯೆ 3 ದಿನ ಸಿಲುಕಿದ್ದ ವ್ಯಕ್ತಿಯ ರಕ್ಷಣೆ

ಹೈದರಾಬಾದ್ (ಪಿಟಿಐ): ಇಲ್ಲಿನ ಕಾಮಾರೆಡ್ಡಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಬಂಡೆಗಳ ಮಧ್ಯೆ ಕಿರಿದಾದ ಪ್ರದೇಶದಲ್ಲಿ ಸಿಲುಕಿದ್ದ 36 ವರ್ಷದ ವ್ಯಕ್ತಿಯನ್ನು ಮೂರು ದಿನಗಳ ಬಳಿಕ ಗುರುವಾರ ಸುರಕ್ಷಿತವಾಗಿ ರಕ್ಷಣೆ ಮಾಡಲಾಗಿದೆ.

ರೆಡ್ಡಿಪೇಟ್ ಗ್ರಾಮದ ಸಿ.ರಾಜು ಅವರು ಮಂಗಳವಾರ ಸ್ನೇಹಿತರೊಂದಿಗೆ ಅರಣ್ಯ ಪ್ರದೇಶಕ್ಕೆ ತೆರಳಿದ್ದರು. ಈ ವೇಳೆ ಬಂಡೆಗಳ ನಡುವಿನ ಕಿರಿದಾದ ಜಾಗದಲ್ಲಿ ಬಿದ್ದ ಮೊಬೈಲ್ ತೆಗೆದುಕೊಳ್ಳಲು ಹೋಗಿ ತಾವೇ ಸಿಲುಕಿದ್ದರು.

‘ವಿಷಯ ತಿಳಿದ ಪೊಲೀಸ್ ಅಧಿಕಾರಿಗಳು ಇತರ ಇಲಾಖೆಗಳ ನೆರವಿನೊಂದಿಗೆ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಗುರುವಾರ ನಿಯಂತ್ರಿತ ಸ್ಫೋಟಕಗಳನ್ನು ಬಳಸಿ ಬಂಡೆಗಳನ್ನು ಒಡೆದು ರಾಜು ಅವರನ್ನು ರಕ್ಷಣೆ ಮಾಡಲಾಯಿತು. ಕಾರ್ಯಾಚರಣೆ ಸಂದರ್ಭದಲ್ಲಿ ರಾಜು ಅವರಿಗೆ ಆಮ್ಲಜನಕ ಮತ್ತು ದ್ರವ ರೂಪದ ಆಹಾರವನ್ನು ನೀಡಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ನಿತ್ಯ ಲವ್ ಜಿಹಾದ್’

ಕೋಲಾರ: ‘ರಾಜ್ಯದಲ್ಲಿ ನಿತ್ಯ ಲವ್ ಜಿಹಾದ್ ನಡೆಯುತ್ತಿದ್ದು, ಒಬ್ಬ ಯುವತಿಯನ್ನು ಮತಾಂತರ ಮಾಡಿದರೆ ₹5 ಲಕ್ಷದವರೆಗೆ ಹಣ ಸಂದಾಯವಾಗುತ್ತಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

‘ಅಮಾಯಕ ಹೆಣ್ಣು ಮಕ್ಕಳು ಈ ಕೃತ್ಯಕ್ಕೆ ಬಲಿಯಾಗುತ್ತಿದ್ದಾರೆ. ಈ ಹಿಂದೆ ನಾವು ಎಷ್ಟೇ ಹೇಳಿದರೂ ಕಾಂಗ್ರೆಸ್‌ನವರು ತಲೆಕೆಡಿಸಿಕೊಂಡಿರಲಿಲ್ಲ. ನಾನು ಗೃಹ ಸಚಿವನಾಗಿದ್ದಾಗ ಲವ್ ಜಿಹಾದ್ ವಿರುದ್ಧ ಕ್ರಮ ಕೈಗೊಂಡಿದ್ದೆ’ ಎಂದು ಗುರುವಾರ ಹೇಳಿದರು.

‘ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹೆಣ್ಣು ಮಕ್ಕಳನ್ನು ಲವ್ ಜಿಹಾದ್‌ಗೆ ತಳ್ಳಲು ಯುವಕರಿಗೆ ಮೊದಲು ತರಬೇತಿ ನೀಡುತ್ತಾರೆ. ದ್ವಿಚಕ್ರವಾಹನ ಕೊಡಿಸುತ್ತಾರೆ. ಖರ್ಚಿಗೆ ಹಣ ಕೊಡುತ್ತಾರೆ’ ಎಂದರು.

ದೇವಾಲಯಗಳಲ್ಲಿ ಮೊಬೈಲ್ ನಿಷೇಧ?: ತಮಿಳುನಾಡು ಮಾದರಿಯಲ್ಲಿ ಕರ್ನಾಟಕ ದೇವಾಲಯಗಳಲ್ಲಿಯೂ ಮೊಬೈಲ್ ನಿಷೇಧ ಮಾಡುವುದು ಒಳ್ಳೆಯದು. ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರ ಬಳಿ ಈ ಕುರಿತು ಮಾತನಾಡುತ್ತೇನೆ. ಮೊಬೈಲ್ ಕಿರಿಕಿರಿಯಿಂದ ಪೂಜಾರಿಗಳು ಮಂತ್ರ ಹೇಳುವುದಕ್ಕೂ ಕಷ್ಟವಾಗುತ್ತಿದೆ ಎಂದು ಸಚಿವ ಅಶೋಕ್ ತಿಳಿಸಿದರು.



❦ ಸುಭಾಷಿತ ❦

ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ,
ಅಲ್ಲದ್ದನ್ನು ಕಂಡಾಗ ಮಾತು ಕೊಂಚಾಗಲಿ.

-ಬಿ.ಎಂ.ಶ್ರೀ

ಪಾವತಿ ನಿಲುಗಡೆ ವ್ಯವಸ್ಥೆ ಸಾರ್ವಜನಿಕರ ಶೋಷಣೆ ನಿಲ್ಲಲಿ

‘ಸ್ಮಾರ್ಟ್’ ಅಥವಾ ‘ಸ್ವಯಂಚಾಲಿತ’ ವಾಹನ ನಿಲುಗಡೆ ವ್ಯವಸ್ಥೆ ಹೆಸರಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 85 ರಸ್ತೆಗಳಲ್ಲಿ ಎರಡು ವರ್ಷಗಳ ಹಿಂದೆ ಜಾರಿಗೊಳಿಸಿದ ‘ಪಾವತಿ ನಿಲುಗಡೆ’ ವ್ಯವಸ್ಥೆಯು ಸಾರ್ವಜನಿಕರ ಶೋಷಣೆಗೆ ದಾರಿಯಾಗಿದೆ. ಇದರ ನಿರ್ವಹಣೆಯ ಗುತ್ತಿಗೆ ಪಡೆದಿರುವ ಖಾಸಗಿ ವ್ಯಕ್ತಿಗಳು ವಾಹನ ಸವಾರರಿಂದ ದುಬಾರಿ ದಂಡ ವಸೂಲಿ ಮಾಡುತ್ತಿದ್ದಾರೆ. ಅತಿಯಾದ ದಂಡ ವಸೂಲಿ ಮಾಡುತ್ತಿರುವ ಕುರಿತ ಸಾರ್ವಜನಿಕರ ದೂರುಗಳಿಗೆ ಬಿಬಿಎಂಪಿ ಆಡಳಿತದಿಂದ ಸ್ಪಂದನವೇ ದೊರೆತಿಲ್ಲ. ಆರ್ಥಿಕವಾಗಿ ತೀವ್ರ ಮುಗ್ಗಟ್ಟಿನಲ್ಲಿರುವ ಪಾಲಿಕೆಯು ಪಾವತಿ ನಿಲುಗಡೆ ವ್ಯವಸ್ಥೆಯನ್ನು ವರಮಾನ ಸಂಗ್ರಹದ ಮೂಲವಾಗಿಯೂ ಅವಲಂಬಿಸಿಕೊಂಡಿದೆ. ಪ್ರಮುಖ ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲುಗಡೆ ಮಾಡುವುದನ್ನು ತಪ್ಪಿಸಲು ಜಾರಿಗೊಳಿಸಿದ ಈ ಯೋಜನೆಯಿಂದ ವಾಹನ ನಿಲುಗಡೆಯಲ್ಲಿ ಕೊಂಚ ಶಿಸ್ತು ಬಂದಿದೆ. ಆದರೆ, ಅದೇ ಉದ್ದೇಶವನ್ನು ಅತಿಯಾದ ದಂಡ ಹೇರಿಕೆಗೆ ಬಳಸಿಕೊಂಡು ವಾಹನ ಸವಾರರನ್ನು ಶೋಷಣೆ ಮಾಡುತ್ತಿರುವ ಕ್ರಮದ ಬಗ್ಗೆ ತೀವ್ರವಾದ ಟೀಕೆಗಳಿವೆ. ಪಾವತಿ ನಿಲುಗಡೆ ವ್ಯವಸ್ಥೆ ಇರುವ ರಸ್ತೆಗಳಲ್ಲಿ ವಾಹನ ಸವಾರರು ತಾವು ವಾಹನವನ್ನು ನಿಲುಗಡೆ ಮಾಡುವ ಸಮಯಕ್ಕೆ ತಕ್ಕಂತೆ ಮುಂಗಡವಾಗಿ ಶುಲ್ಕ ಪಾವತಿಸಬೇಕಿದೆ. ಆದರೆ, ಪಾವತಿಸಿದ ಅವಧಿಯನ್ನು ಮೀರಿ ವಾಹನವನ್ನು ಹೊರ ತೆಗೆಯುವುದು ಒಂದು ನಿಮಿಷ ವಿಳಂಬವಾದರೂ ದ್ವಿಚಕ್ರ ವಾಹನಗಳಿಗೆ ₹ 250 ಮತ್ತು ನಾಲ್ಕು ಚಕ್ರದ ವಾಹನಗಳಿಗೆ ₹ 500 ದಂಡ ವಿಧಿಸಲಾಗುತ್ತಿದೆ. ವಾಹನ ನಿಲುಗಡೆಯ ಹೆಚ್ಚುವರಿ ಅವಧಿಗೆ ಸಮನಾದ ಶುಲ್ಕ ಪಡೆಯುವುದು ಜನಸ್ನೇಹಿಯಾದ ವ್ಯವಸ್ಥೆ. ಶುಲ್ಕದ ಐದರಿಂದ ಹತ್ತು ಪಟ್ಟು ಹಣವನ್ನು ದಂಡದ ಹೆಸರಿನಲ್ಲಿ ವಸೂಲಿ ಮಾಡುವುದು ಶೋಷಣೆ. ಪಾವತಿ ನಿಲುಗಡೆ ಕುರಿತು ಮಾಹಿತಿ ಇಲ್ಲದೆ ಅಂತಹ ಸ್ಥಳಗಳಲ್ಲಿ ನಿಲುಗಡೆ ಮಾಡಿದ ಅಥವಾ ಶುಲ್ಕ ಪಾವತಿಸಿದ ಅವಧಿಗಿಂತ ಹೆಚ್ಚು ಸಮಯ ನಿಲ್ಲಿಸಿದ ವಾಹನಗಳ ಚಕ್ರಗಳಿಗೆ ಕ್ಲ್ಯಾಂಪ್ ಹಾಕಿ ಜನರನ್ನು ಶೋಷಿಸುತ್ತಿರುವುದು ಅಮಾನವೀಯ ನಡೆ. ದಂಡದ ಹೆಸರಿನಲ್ಲಿ ಸಾರ್ವಜನಿಕರ ಸುಲಿಗೆ ಮಾಡುವುದನ್ನು ತಡೆಯಲು ವಾಹನ ನಿಲುಗಡೆಗೂ ಮುನ್ನ ಶುಲ್ಕ ಸಂಗ್ರಹಿಸುವ ಬದಲಿಗೆ ವಾಹನವನ್ನು ಹೊರ ತೆಗೆಯುವ ಸಮಯದಲ್ಲಿ ನಿಲುಗಡೆಯ ಅವಧಿಯನ್ನು ಲೆಕ್ಕಹಾಕಿ ಶುಲ್ಕ ಪಡೆಯುವ ಕ್ರಮ ಜಾರಿಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಬೇಕು.



ದಂಡದ ಹೆಸರಿನಲ್ಲಿ ಶೋಷಣೆಗೆ ಅವಕಾಶ ಇಲ್ಲದಂತೆ ಮಾರ್ಗಸೂಚಿಗಳನ್ನು ಹೊರಡಿಸಬೇಕು

ಈ ರೀತಿ ವಾಹನ ನಿಲುಗಡೆ ಮಾಡುವವರಿಗೆ ದುಬಾರಿ ದಂಡ ವಿಧಿಸಲು ಬಿಬಿಎಂಪಿ ನಡೆಸಿದ ಟೆಂಡರ್ ಪ್ರಕ್ರಿಯೆಯಲ್ಲೇ ಅನುಮತಿ ನೀಡಲಾಗಿತ್ತೇ ಅಥವಾ ಗುತ್ತಿಗೆದಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ಗುತ್ತಿಗೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಯೇ? ಈ ಕುರಿತು ಪರಿಶೀಲನೆ ನಡೆಯಬೇಕಿದೆ. ದಂಡದ ಹೆಸರಿನಲ್ಲಿ ಈ ರೀತಿ ವರ್ಷಗಳಿಂದ ಸಾರ್ವಜನಿಕರ ಶೋಷಣೆ ನಡೆಯುತ್ತಿದ್ದರೂ ಅದು ಬಿಬಿಎಂಪಿ ಅಧಿಕಾರಿಗಳ ಗಮನಕ್ಕೇ ಬಂದಿಲ್ಲವೆ, ಗಮನಕ್ಕೆ ಬಂದಿದ್ದಲ್ಲಿ ಗುತ್ತಿಗೆಯನ್ನೇ ಬದಲಿಸುವ ಅಥವಾ ಗುತ್ತಿಗೆಯ ಷರತ್ತುಗಳನ್ನು ಪರಿಷ್ಕರಿಸುವ ಕ್ರಮವನ್ನು ಏಕೆ ಈವರೆಗೂ ಕೈಗೊಂಡಿಲ್ಲ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಗುತ್ತಿಗೆದಾರರೊಂದಿಗೆ ಬಿಬಿಎಂಪಿ ಅಧಿಕಾರಿಗಳು ಶಾಮೀಲಾಗಿರುವ ಕಾರಣಕ್ಕಾಗಿಯೇ ಪಾವತಿ ನಿಲುಗಡೆಯಲ್ಲಿನ ಶೋಷಣೆ ಕುರಿತ ದೂರುಗಳನ್ನು ನಿರ್ಲಕ್ಷಿಸಿರಬಹುದು ಎಂಬ ಅನುಮಾನವೂ ಇದೆ. ಪಾವತಿ ನಿಲುಗಡೆ ಗುತ್ತಿಗೆಯನ್ನು ರದ್ದು ಮಾಡುವುದಾಗಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪ್ರಕಟಿಸಿದ್ದಾರೆ. ಆದರೆ, ಈ ಕ್ರಮವಷ್ಟೇ ಸಾಲದು. ಇಂತಹ ಜನವಿರೋಧಿ ವ್ಯವಸ್ಥೆ ಹೇಗೆ ಜಾರಿಗೆ ಬಂತು, ದಂಡದ ಹೆಸರಿನಲ್ಲಿ ನಡೆಯುತ್ತಿರುವ ಸುಲಿಗೆ ಕುರಿತು ಸಾರ್ವಜನಿಕರ ದೂರುಗಳನ್ನು ದೀರ್ಘ ಅವಧಿಯವರೆಗೆ ಏಕೆ ನಿರ್ಲಕ್ಷಿಸಿಕೊಂಡು ಬರಲಾಗಿದೆ ಎಂಬುದರ ಕುರಿತು ತನಿಖೆಗೆ ಆದೇಶಿಸಬೇಕು. ಆರಂಭದಿಂದ ಈವರೆಗೆ ದಂಡದ ಹೆಸರಿನಲ್ಲಿ ಸಂಗ್ರಹಿಸಿರುವ ಮೊತ್ತವನ್ನು ಬಿಬಿಎಂಪಿಯು ಗುತ್ತಿಗೆದಾರರಿಂದ ವಸೂಲಿ ಮಾಡಬೇಕು. ಈ ವಿಷಯದಲ್ಲಿ ತಪ್ಪೆಸಗಿರುವ ಮತ್ತು ನಿರ್ಲಕ್ಷ್ಯ ಮಾಡಿರುವ ಅಧಿಕಾರಿಗಳನ್ನು ಪತ್ತೆಹಚ್ಚಿ ಕಾನೂನಿನ ವ್ಯಾಪ್ತಿಯಲ್ಲಿ ಕ್ರಮ ಜರುಗಿಸಬೇಕು. ಪಾವತಿ ನಿಲುಗಡೆ ವ್ಯವಸ್ಥೆಯಲ್ಲಿ ನಗದು ಪಾವತಿಸುವವರಿಗೆ ಕಡಿಮೆ ಅವಧಿ ಮತ್ತು ನಗದುರಹಿತ ಪಾವತಿಗೆ ಹೆಚ್ಚು ಅವಧಿ ನಿಗದಿಗೊಳಿಸಲಾಗಿದೆ. ನಗದುರಹಿತ ಆರ್ಥಿಕತೆಯನ್ನು ಪ್ರೋತ್ಸಾಹಿಸುವ ಕ್ರಮ ಎಂಬ ವಾದ ಮುಂದಿಟ್ಟರೂ, ವಾಹನ ನಿಲುಗಡೆಯಂತಹ ಸ್ಥಳಗಳಲ್ಲಿ ಶುಲ್ಕ ವಿಧಿಸುವಾಗ ಈ ರೀತಿ ತಾರತಮ್ಯ ಮಾಡುವುದು ಜನವಿರೋಧಿಯಾದ ಕ್ರಮ. ಪಾಲಿಕೆಯ ಎಂಟೂ ವಲಯಗಳ ವ್ಯಾಪ್ತಿಯಲ್ಲಿ ಬಿಬಿಎಂಪಿಯಿಂದಲೇ ಪಾವತಿ ನಿಲುಗಡೆ ವ್ಯವಸ್ಥೆ ಜಾರಿಗೆ ಸಿದ್ಧತೆ ನಡೆಯುತ್ತಿದೆ. ಆ ಸಂದರ್ಭದಲ್ಲಿ ದಂಡದ ಹೆಸರಿನಲ್ಲಿ ಈ ರೀತಿ ಶೋಷಣೆಗೆ ಅವಕಾಶ ಇಲ್ಲದಂತೆ ಮಾರ್ಗಸೂಚಿಗಳನ್ನು ಹೊರಡಿಸಬೇಕು. ವಾಹನ ನಿಲುಗಡೆಯಲ್ಲಿ ಶಿಸ್ತು ತರುವುದೇ ಈ ವ್ಯವಸ್ಥೆಯ ಪ್ರಮುಖ ಗುರಿಯಾಗಿರುವಂತೆ ಎಚ್ಚರಿಕೆ ವಹಿಸಬೇಕು.

ದಿನದ ಟ್ವೀಟ್

ಅರ್ಥ ಏನಿರಬಹುದು?



ಇದು ವಾಸ್ತವ: ಚೀನಾದೊಂದಿಗೆ ಭಾರತದ ವ್ಯಾಪಾರ ವಹಿವಾಟು 2021-22ರಲ್ಲಿ 115 ಶತಕೋಟಿ ಡಾಲರ್‌ಗಳಿಗೆ ಏರಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. 2020-21ರ ವಹಿವಾಟು ಮೊತ್ತ 86 ಶತಕೋಟಿ ಡಾಲರ್‌ಗಳಷ್ಟಿತ್ತು. ಎರಡೂ ದೇಶಗಳ ನಡುವೆ ವಾಣಿಜ್ಯ ವಹಿವಾಟು ಏರುಗತಿ ಕಂಡಿದೆ, ಹಾಗೆಯೇ ಗಡಿ ಉದ್ವಿಗ್ನತೆಯೂ ಹೆಚ್ಚಾಗಿದೆ. ಈಗ ಇದರ ಅರ್ಥ ಏನೆಂಬುದನ್ನು ಅರಿಯಲು ಪ್ರಯತ್ನಿಸಿ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಅಪರಾಧಿಗಳು ಸಚಿವ ಸಂಪುಟ ಸೇರುವುದು ಈಗ ಸುದ್ದಿಯೇ ಅಲ್ಲ. ಅರ್ಥಶಾಸ್ತ್ರಜ್ಞರು ಯಾತ್ರೆಯಲ್ಲಿ ಪಾಲ್ಗೊಳ್ಳುವುದು ಈಗ ಸುದ್ದಿಯಾಗುತ್ತದೆ.



ಉರ್ವಿಶ್ ಕೊಠಾರಿ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 16-12-1997

• ಹೆಗಡೆಗೆ ಮುಖ್ಯಮಂತ್ರಿ ಪಟೇಲ್ ಸವಾಲು

ಬೆಂಗಳೂರು, ಡಿಸೆಂಬರ್ 15– ಜನತಾದಳ ಬಿಟ್ಟು ತಮ್ಮ ಪಕ್ಷಕ್ಕೆ ಸೇರುವಂತೆ ಶಾಸಕರಿಗೆ ಕರೆ ನೀಡಿರುವ ಲೋಕಶಕ್ತಿಯ ರಾಮಕೃಷ್ಣ ಹೆಗಡೆ ಅವರ ವಿರುದ್ಧ ತಿರುಗಿಬಿದ್ದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು, ‘ತಮ್ಮ ಜತೆ ಬರುವ ಒಬ್ಬರೇ ಒಬ್ಬ ಸಚಿವರ ಹೆಸರು ಬಹಿರಂಗಪಡಿಸಲಿ’ ಎಂದು ಹೆಗಡೆ ಅವರಿಗೆ ಇಂದು ಇಲ್ಲಿ ಸವಾಲು ಎಸೆದರು.

ಜನತಾದಳ ನೇತೃತ್ವದ ಸರ್ಕಾರದ ಮೂರು ವರ್ಷಗಳ ಸಾಧನೆಯನ್ನು ವಿವರಿಸಿ ಸುದ್ದಿಗಾರರ ಜತೆಗೆ ಮಾತನಾಡುತ್ತಿದ್ದ ಅವರು, ‘ದಳ ಸರ್ಕಾರವನ್ನು ಅಸ್ಥಿರಗೊಳಿಸುವುದು ಸಾಧ್ಯವಿಲ್ಲ; ಬೇಕಿದ್ದರೆ ಪ್ರಯತ್ನಿಸಿ ನೋಡಲಿ. ಒಂದು ತಿಂಗಳ ಕಾಲಾವಕಾಶ ನೀಡುತ್ತೇನೆ; ತಮ್ಮ ಜತೆಗೆ ಬರುವ ಒಬ್ಬ ಸಚಿವರ ಹೆಸರು ಹೇಳಲಿ’ ಎಂದು ಗುಡುಗಿದರು.

• ಒರಿಸ್ಸಾ: ದಳ ಇಬ್ಭಾಗ– ಹೊಸ ಪಕ್ಷ ಉದಯ

ಭುವನೇಶ್ವರ, ಡಿಸೆಂಬರ್ 15 (ಪಿಟಿಐ, ಯುಎನ್‌ಐ)– ಒರಿಸ್ಸಾ ಜನತಾದಳದ 43 ಶಾಸಕರಲ್ಲಿ 29 ಮಂದಿ ಪ್ರತ್ಯೇಕ ‘ಬಿಜು ಜನತಾದಳ’ ರಚಿಸಿಕೊಳ್ಳುವುದರೊಂದಿಗೆ ರಾಜ್ಯ ಜನತಾದಳ ಇಂದು ವಿಭಜನೆಗೊಂಡಿತು.

ಬಿಜು ಪಟ್ನಾಯಕ್ ಅವರ ಮನೆ ‘ನವೀನ್ ನಿವಾಸ’ದಲ್ಲಿ ಇಂದು ನಡೆದ ತುರ್ತು ಸಭೆಯಲ್ಲಿ ‘ಬಿಜು ಜನತಾದಳ’ ರೂಪುಗೊಂಡಿತು. ಒರಿಸ್ಸಾದ ಮಾಜಿ ಮುಖ್ಯಮಂತ್ರಿ ದಿ. ಬಿಜು ಪಟ್ನಾಯಕ್ ಅವರ ಕಿರಿಯ ಪುತ್ರ ನವೀನ್ ಪಟ್ನಾಯಕ್ ಅವರ ನಾಯಕತ್ವದಲ್ಲಿ ‘ಬಿಜು ಜನತಾದಳ’ವನ್ನು ರಚಿಸಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 16-12-1972

• ಚಂದ್ರನಿಂದ ಅಪೋಲೊ ಯಾತ್ರಿಗಳ ನಿರ್ಗಮನ: ಮಾತೃ ನೌಕೆಯ ಜತೆ ಯಶಸ್ವಿ ಸೇರ್ಪಡೆ

ಬಾಹ್ಯಾಕಾಶ ಕೇಂದ್ರ, ಡಿಸೆಂಬರ್ 15– ಅಪೋಲೊ ಸರಣಿಯ ಕೊನೆಯ ಇಬ್ಬರು ಚಂದ್ರಯಾತ್ರಿಗಳಾದ ಯೂಜಿನ್ ಸೆರ್ನನ್ ಮತ್ತು ಹ್ಯಾರಿಸನ್ ಷ್ಮಿಟ್ ಅವರು ಇಂದು ಚಂದ್ರಮಂಡಲದಿಂದ ಚಂದ್ರನೌಕೆಯಲ್ಲಿ ಕಕ್ಷೆಗೆ ಹಾರಿ, ಅಮೂಲ್ಯ ಚಂದ್ರ ರಹಸ್ಯಗಳನ್ನು ಹೊತ್ತು ಯಶಸ್ವಿಯಾಗಿ ಮಾತೃನೌಕೆಯನ್ನು ಸೇರಿಕೊಂಡರು.

ಚಂದ್ರನೌಕೆ ‘ಚಾಲೆಂಜರ್’ ಮತ್ತು ಮಾತೃನೌಕೆ ‘ಅಮೆರಿಕ’ಗಳೆರಡೂ ಚಂದ್ರ ಮಂಡಲದ ಮೇಲೆ ಕಕ್ಷೆಯಲ್ಲಿ ಕತ್ತಲಭಾಗದಲ್ಲಿ ಒಂದನ್ನೊಂದು ಹಿಂಬಾಲಿಸಿಕೊಂಡು ಬಂದ ನಂತರ ಯಶಸ್ವಿಯಾಗಿ ಸೇರಿಕೊಂಡಾಗ ಯೂಜಿನ್ ಸೆರ್ನನ್ ಅವರು ಹರ್ಷೋದ್ಗಾರ ಮಾಡಿದರು.

• ರಾಜ್ಯ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಸಿಂಹಪಾಲು ದೊರಕಿಸಿಕೊಡಲು ಆಗ್ರಹ

ಬೆಂಗಳೂರು, ಡಿಸೆಂಬರ್ 15– ರಾಜ್ಯದ ಕೈಗಾರಿಕೆಗಳ ನೌಕರಿಗಳಲ್ಲಿ ಕನ್ನಡಿಗರಿಗೆ ಸಿಂಹಪಾಲು ದೊರಕಿಸಿಕೊಡಲು ಸಮಾಜವಾದಿ ಶಾಸಕ ಕೋಣಂದೂರು ಲಿಂಗಪ್ಪ ಅವರು ಇಂದು ವಿಧಾನಸಭೆಯಲ್ಲಿ ಆಗ್ರಹಪಡಿಸಿದರು.

ಪೂರಕ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಅವರು, ‘ನಾವು ಆದಷ್ಟು ಮನೆಮುರುಕು ನೀತಿಯನ್ನು ಕೈಬಿಡಬೇಕು’ ಎಂದರು.

ಕೇಂದ್ರವನ್ನು ಅಂಗಲಾಚುವ ದುಃಸ್ಥಿತಿ ಬೇಡ; ಬೇಕಿದೆ ನಾಡು–ನುಡಿ ಉಳಿಸುವ ಕಾಯಕ

ಡಬಲ್ ಎಂಜಿನ್: ನಾಡಿಗೆ ಸಿಕ್ಕಿದ್ದೇನು?



ಗತಿಬಿಂಬ

ವೈ.ಗ. ಜಗದೀಶ್

ಸರ್ಕಾರ ಬೆಳಗಾವಿಯಲ್ಲಿ ವರ್ಷಕ್ಕೊಮ್ಮೆ ನಡೆಸುವ ವಿಧಾನಮಂಡಲ ಅಧಿವೇಶನಕ್ಕೆ ದಿನಗಣನೆ ಶುರುವಾಗಿದೆ. ‘ಕಡೆಗಣಿಸಲ್ಪಟ್ಟಿದ್ದೇವೆ’ ಎಂಬ ನಿಲುವಿಗೆ ಬಂದು ನಿಂತಂತಿರುವ ಉತ್ತರ ಕರ್ನಾಟಕದ ಜನರ ಅಪೇಕ್ಷೆ ಈಡೇರಿಸಿ, ನೀವು ಕೂಡ ಕನ್ನಡ ಮಣ್ಣಿನ ಮಕ್ಕಳು ಎಂದು ವಿಶ್ವಾಸ ಮೂಡಿಸುವ ಕೆಲಸ ಇಷ್ಟು ವರ್ಷಗಳಲ್ಲಿ ಆಗಬೇಕಿತ್ತು. ಕರ್ನಾಟಕ ಏಕೀಕರಣಗೊಂಡು 66 ವರ್ಷ ಗತಿಸಿದರೂ ಉತ್ತರ–ದಕ್ಷಿಣ ಭೇದ ಹೋಗಿಲ್ಲ.

ಅಧಿಕಾರ ನಡೆಸಿದ ಎಲ್ಲ ಪಕ್ಷಗಳ ನಾಯಕರು ಕರ್ನಾಟಕದ ಎಲ್ಲ ಪ್ರದೇಶವನ್ನೂ ಸಮನಾಗಿ ನೋಡುವುದಾಗಿ ಹೇಳುತ್ತಾರೆಯೇ ವಿನಾ ಅನುದಾನ, ಅನುಷ್ಠಾನದ ವಿಷಯಕ್ಕೆ ಬಂದರೆ ನೈಜ ಆಸಕ್ತಿಯನ್ನು ತೋರಿದ್ದು ಕಡಿಮೆ. ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗವೆಂದು ಪ್ರತಿಪಾದಿಸಲು, ತಂಟೆಕೋರರಾದ ಕೆಲವು ಮರಾಠಿಗರಿಗೆ ಸಡ್ಡು ಹೊಡೆಯಲು, ಈ ಪ್ರದೇಶದಲ್ಲಿ ಅಭಿವೃದ್ಧಿಯ ಚಹರೆಗಳು ಕಾಣಿಸುವಂತೆ ಮಾಡಬೇಕೆಂಬ ಸದಿಚ್ಛೆಯಿಂದ ಸುವರ್ಣಸೌಧ ಕಟ್ಟಲಾಯಿತು. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ ಪ್ರಧಾನ ಕಚೇರಿಗಳನ್ನು ಸುವರ್ಣಸೌಧಕ್ಕೆ ಸ್ಥಳಾಂತರಿಸಿ ಬೆಳಗಾವಿಯನ್ನು ಎರಡನೇ ರಾಜಧಾನಿಯನ್ನಾಗಿ ಕಟ್ಟುವ ಸಂಕಲ್ಪ ಮಾತಿನಲ್ಲೇ ಉಳಿಯಿತು.


ಬೆಳಗಾವಿ ಸೇರಿದಂತೆ ಕರ್ನಾಟಕದ ಹಲವು ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಅಧಿವೇಶನದ ಹೊತ್ತಿನಲ್ಲಿ ಅಲ್ಲಿನ ಬಿಜೆಪಿ ಪಾಲುದಾರಿಕೆಯ ಮೈತ್ರಿ ಸರ್ಕಾರವೇ ತಕರಾರು ತೆಗೆದಿದೆ. ಮರಾಠಿಗರನ್ನು ಎತ್ತಿಕಟ್ಟುವುದಕ್ಕಾಗಿ ಮುಖ್ಯಮಂತ್ರಿ ಏಕನಾಥ ಶಿಂದೆಯವರು ಇಬ್ಬರು ಸಚಿವರನ್ನು ನಿಯೋಜಿಸಿದ್ದಾರೆ. ಶಿವಸೇನಾ ಮತ್ತು ಎನ್‌ಸಿಪಿ ಕೂಡ ಇದರ ಪರವಾಗಿ ಧ್ವನಿ ಎತ್ತಿವೆ. ಗಡಿ ವಿವಾದ ಎಂದೋ ಮುಗಿದ ಅಧ್ಯಾಯ. ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗ.

ಬೆಳಗಾವಿ ಗಡಿ ವಿವಾದ ಕೆದಕುವುದಕ್ಕೂ ಕರ್ನಾಟಕದ ವಿಧಾನಸಭೆ ಚುನಾವಣೆಗೂ ಒಳನಂಟಿರುವುದು ರಹಸ್ಯವಲ್ಲ. ಮರಾಠಿ ಅಸ್ಮಿತೆಯ ರಕ್ಷಕ ಎಂದು ಬಿಂಬಿಸಿಕೊಳ್ಳುವ ಶಿವಸೇನಾ ನಾಯಕ ಉದ್ಧವ್ ಠಾಕ್ರೆ ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿದ್ದರು. ಶಿವಸೇನಾ, ಕಾಂಗ್ರೆಸ್, ಎನ್‌ಸಿಪಿ ಮೈತ್ರಿಕೂಟದ ಸರ್ಕಾರ ಅಲ್ಲಿತ್ತು. ಆಗ ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವೇ ಇತ್ತು. ರಾಜಕೀಯಕ್ಕಾಗಿಯೇ ವಿವಾದ ಎಬ್ಬಿಸುವುದೇ ಆದಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರದಲ್ಲಿರುವಾಗ ಬೆಳಗಾವಿ ತಕರಾರನ್ನು ಮುನ್ನೆಲೆಗೆ ತಂದು, ರಾಡಿ ಎಬ್ಬಿಸಬಹುದಾಗಿತ್ತು. ಅಂತಹ ಕೆಲಸ ಆಗ ನಡೆಯಲಿಲ್ಲ. ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಅಲ್ಪಕಾಲದಲ್ಲಿ ಈ ವಿವಾದ ಮುನ್ನೆಲೆಗೆ ಬಂದಿದೆ.

ಮಹಾರಾಷ್ಟ್ರ, ಕರ್ನಾಟಕ ಹಾಗೂ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಗಳಿವೆ. ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದರೂ ‘ಟ್ರಿಪಲ್ ಎಂಜಿನ್’ ಸರ್ಕಾರಗಳ ‘ಒಡೆಯ’ರಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಬಾಯನ್ನೇ ತೆರೆಯಲಿಲ್ಲ. ಕನ್ನಡ ಸಂಘಟನೆಗಳು, ವಿರೋಧ ಪಕ್ಷಗಳು ಧ್ವನಿ ಎತ್ತಿದ ಮೇಲಷ್ಟೇ ಗೃಹ ಸಚಿವ ಶಾ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಿದ್ದಾರೆ. 10 ನಿಮಿಷದಲ್ಲೇ ಮುಗಿಸಿದ ಸಭೆಯಲ್ಲಿ, ‘ಕಾನೂನು ಚೌಕಟ್ಟಿನಲ್ಲಿ ಬಗೆಹರಿಸಿಕೊಳ್ಳಬೇಕು, ಪ್ರಚೋದನಕಾರಿ ಮಾತುಗಳನ್ನು ಆಡಬಾರದು’ ಎಂದು ತಾಕೀತು ಮಾಡಿದ್ದಾರೆ. ಇದನ್ನೆಲ್ಲ ಗಮನಿಸಿದರೆ, ಮೇಲ್ನೋಟಕ್ಕೆ ಇದು ಬಿಜೆಪಿ ಪೋಷಿತ ‘ತಕರಾರು’ ಇದ್ದಂತಿದೆ.

ಬೆಳಗಾವಿ ಜಿಲ್ಲೆಯ ಬಹುಪಾಲು ಕ್ಷೇತ್ರಗಳ ಗೆಲುವಿಗೆ ಯಡಿಯೂರಪ್ಪನವರ ಶಕ್ತಿ ಪ್ರಮುಖವಾಗಿತ್ತು. ಈ ಬಾರಿ ಅವರು ಸಾರಥಿಯಾಗಿರುವುದಿಲ್ಲ. ಬೆಳಗಾವಿ ರಾಜಕಾರಣದಲ್ಲಿ ತನ್ನದೇ ಪ್ರಭಾವ ಹೊಂದಿದ್ದ ಉಮೇಶ ಕತ್ತಿ ನಿಧನರಾಗಿದ್ದರಿಂದ ಅವರ ಬಲವೂ ಇಲ್ಲ. ಸಚಿವ ಸಂಪುಟದಿಂದ ಹೊರಗಿರುವ ರಮೇಶ ಜಾರಕಿಹೊಳಿ ನಿಷ್ಕ್ರಿಯರಾಗಿದ್ದಾರೆ. ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಲಕ್ಷ್ಮಣ ಸವದಿ ಅವರನ್ನು ಬೊಮ್ಮಾಯಿ ನೇತೃತ್ವದ ಸರ್ಕಾರ ಬರುತ್ತಿದ್ದಂತೆ ಕೈಬಿಡಲಾಯಿತು. ಹೀಗಾಗಿ, ಬೆಳಗಾವಿಯ 18 ಕ್ಷೇತ್ರಗಳಲ್ಲಿ ಅರ್ಧದಷ್ಟಲ್ಲಾದರೂ ಬಿಜೆಪಿಯನ್ನು ಗೆಲುವಿನ ದಡಕ್ಕೆ ಮುಟ್ಟಿಸುವವರಿಲ್ಲ. ಆದ್ದರಿಂದ ಗಡಿ ವಿವಾದ ಸೃಷ್ಟಿಸಲಾಯಿತೇ ಎಂಬ ಅನುಮಾನವೂ ರಾಜಕೀಯ ವಲಯದಲ್ಲಿ ದಟ್ಟವಾಗಿದೆ.

2018ರ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ 24 ಗಂಟೆಯೊಳಗೆ ಮಹದಾಯಿ ಯೋಜನೆ ಜಾರಿ ಮಾಡಲಾಗುವುದು ಎಂದು ಯಡಿಯೂರಪ್ಪ ಘೋಷಿಸಿದ್ದರು. 2019ರ ಲೋಕಸಭೆ ಚುನಾವಣೆ ವೇಳೆ ‘ಬಿಜೆಪಿಯನ್ನು ಗೆಲ್ಲಿಸಿದರೆ, ಕರ್ನಾಟಕದಲ್ಲಿ ಕೂಡ ಬಿಜೆಪಿ ಅಧಿಕಾರ ಹಿಡಿಯಲಿದೆ. ಡಬಲ್ ಎಂಜಿನ್ ಸರ್ಕಾರದಿಂದ ಸಕಲವೂ ಕರ್ನಾಟಕಕ್ಕೆ ಹರಿದುಬರಲಿವೆ’ ಎಂದು ಮೋದಿ–ಶಾ ವಾಗ್ದಾನ ಮಾಡಿದ್ದರು. ‘ಮಹದಾಯಿ ಯೋಜನೆಗೆ ಇದ್ದ ಅಡೆತಡೆ ನಿವಾರಣೆಯಾಗಿದೆ, ಚುನಾವಣೆ ಮುಗಿಯುತ್ತಲೇ ಯೋಜನೆ ಜಾರಿಯಾಗಲಿದೆ’ ಎಂದು ಹುಬ್ಬಳ್ಳಿಯಲ್ಲಿ ನಡೆದ ಸಮಾವೇಶದಲ್ಲಿ ಯಡಿಯೂರಪ್ಪ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ‘ಪತ್ರ’ವೊಂದನ್ನು ಪ್ರದರ್ಶಿಸಿದ್ದರು. ಅಧಿಕಾರ ಹಿಡಿದು ಮೂರೂವರೆ ವರ್ಷವಾಗಿದ್ದು, ಮಹಾರಾಷ್ಟ್ರ ಸೇರಿದಂತೆ ಟ್ರಿಪಲ್ ಎಂಜಿನ್‌ಗಳಿದ್ದರೂ ಮಹದಾಯಿ ಯೋಜನೆ ಎಲ್ಲಿತ್ತೋ ಅಲ್ಲೇ ನಿಂತಿದೆ.




ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವುದಾಗಿ ಹೇಳಿ ಆರು ತಿಂಗಳು ಕಳೆದರೂ ಕೇಂದ್ರ ಸಚಿವ ಸಂಪುಟದ ಮುಂದೆ ಕಡತವೇ ಮಂಡನೆಯಾಗಿಲ್ಲ. ಮೇಕೆದಾಟು ಯೋಜನೆಯನ್ನು ಪ್ರಶ್ನಿಸಿರುವ ತಮಿಳುನಾಡು ಸರ್ಕಾರದ ತಕರಾರು ಅರ್ಜಿಯ ವಿಚಾರಣೆ ಶುರುವಾಗಿಯೇ ಇಲ್ಲ. ಇದೆಲ್ಲದರ ಮಧ್ಯೆಯೇ, ಕರ್ನಾಟಕ–ತಮಿಳುನಾಡು ಮಧ್ಯದ ದಕ್ಷಿಣ ಪಿನಾಕಿನಿ ಜಲವ್ಯಾಜ್ಯದ ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸದ ಬಗ್ಗೆ ಸುಪ್ರೀಂ ಕೋರ್ಟ್ ನವೆಂಬರ್‌ನಲ್ಲೇ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು. ಮತ್ತೆ ವಿಚಾರಣೆಗೆ ಬಂದ ವೇಳೆ, ಮೂರು ತಿಂಗಳಿನಲ್ಲಿ ನ್ಯಾಯಮಂಡಳಿ ರಚಿಸುವಂತೆ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಕರ್ನಾಟಕಕ್ಕೆ ನ್ಯಾಯವೆಂಬುದು ಮರೀಚಿಕೆಯೇ ಸೈ.

ಡಬಲ್ ಎಂಜಿನ್ ಸರ್ಕಾರದ ಭ್ರಮೆಗೆ ಬಿದ್ದ ಕನ್ನಡಿಗರು 2019ರಲ್ಲಿ 25 ಸಂಸದರನ್ನು ಗೆಲ್ಲಿಸಿದರು. ನಾಡಿನ ಹಿತಕ್ಕೆ ಹಕ್ಕೊತ್ತಾಯ ಮಂಡಿಸಬೇಕಾದ ಸಂಸದರು ಚೇಷ್ಟೆಯಲ್ಲಿ ನಿರತರಾಗಿದ್ದಾರೆ. ತಮ್ಮದೇ ಪಕ್ಷದ ಶಾಸಕ ಬಸ್ ನಿಲ್ದಾಣಕ್ಕೆ ಅರಮನೆ ಆಕಾರ ಕೊಟ್ಟರೆ, ಸಂಸದ ಪ್ರತಾಪ ಸಿಂಹ ಗುಂಬಜ್ ಒಡೆಯುವ ಹೋರಾಟಕ್ಕೆ ಧುಮುಕುತ್ತಾರೆ. ‘ದರ್ಗಾದೊಳಗೆ ಶಿವಲಿಂಗ ಇದೆ; ಪೂಜೆ ಮಾಡಬೇಕು’ ಎಂದು ಪೊಲೀಸರಿಗೆ ಧಮಕಿ ಹಾಕಿದ ಕೇಂದ್ರ ಸಚಿವ ಭಗವಂತ್ ಖೂಬಾ ದರ್ಗಾಕ್ಕೆ ನುಗ್ಗಲು ಯತ್ನಿಸುತ್ತಾರೆ. ಹಳೆಯ ವೈಷಮ್ಯದಿಂದ ನಡೆದ ಕೊಲೆಯನ್ನು ಧರ್ಮಯುದ್ಧವನ್ನಾಗಿ ಪರಿವರ್ತಿಸಿದ ಬಿ.ವೈ.ರಾಘವೇಂದ್ರ, ಒಂದು ಸಮುದಾಯದ ಮೇಲೆ ದಾಳಿ ನಡೆವಾಗ ಸುಮ್ಮನೆ ನಿಲ್ಲುತ್ತಾರೆ.

ಹಳದಿ ಎಲೆ ರೋಗದಿಂದ ಅಡಿಕೆ ಬೆಳೆ ಸರ್ವನಾಶವಾಗಿದೆ, ತೊಗರಿ ಕೂಡ ರೋಗಬಾಧೆಗೆ ಸಿಲುಕಿದೆ. ಕಾಫಿ ಬೆಳೆಗಾರರ ಸಂಕಷ್ಟ ಹೇಳತೀರದು. ಕೃಷಿ ಖಾತೆ ಹೊಂದಿರುವ ಸಚಿವೆ ಶೋಭಾ ಕರಂದ್ಲಾಜೆ, ಮತ ಹಾಕಿದವರು ಬದುಕಿದ್ದಾರೆಯೇ ಎಂದು ನೋಡಲು ಇತ್ತ ಸುಳಿಯುವುದಿಲ್ಲ. ಇಂತಹ ಸಂಸದರು–ಸಚಿವರು ಇರುವುದು ಕನ್ನಡಿಗರ ಭಾಗ್ಯ! ಕರ್ನಾಟಕಕ್ಕೆ ಡಬಲ್ ಎಂಜಿನ್ ಸದಾ ಚುಚ್ಚುವ ‘ಗುಂಡುಪಿನ್’.

ಭಯದಿಂದ ವಿನೀತರಾಗಿ ಶಾಲಾ ಮಕ್ಕಳು ಮೇಷ್ಟ್ರ ಮುಂದೆ ನಿಲ್ಲುವಂತೆ ಮೋದಿ–ಶಾ ಎದುರು ನಮ್ಮ ಸಂಸದರು, ಸಚಿವರು ನಿಲ್ಲುತ್ತಾರೆ. ಕರ್ನಾಟಕಕ್ಕೆ ನ್ಯಾಯ ಕೇಳಿ ಸೊಲ್ಲೆತ್ತುವ ಧೈರ್ಯವಾದರೂ ಹೇಗೆ ಬಂದೀತು? ರಾಜ್ಯ ಸರ್ಕಾರ ಗ್ರಾಮ ಪಂಚಾಯಿತಿಯಾಗಿಬಿಟ್ಟಿದೆ. ಕೋಟಿಗಟ್ಟಲೆ ತೆರಿಗೆ ಸಂಗ್ರಹಿಸಿ ಕೊಟ್ಟರೂ, ಭಿಕ್ಷಾಪಾತ್ರೆಯೇ ಗತಿಯಾಗಿದೆ. ಹೀಗಿರುವಾಗ, ‘ವಿಶ್ವ ಗುರು’ವಿನ ಮುಂದೆ ಗುಲಾಮಿತನವೇ ಕಾಯಂ ಆಗುವುದಾದರೆ ಡಬಲ್ ಎಂಜಿನ್ ಏಕೆ ಬೇಕು? ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಯಾವುದೇ ಪಕ್ಷವಾದರೂ ಆಡಳಿತ ನಡೆಸಲಿ; ನಮ್ಮ ಪಾಲು ಕೊಡುವ, ಯೋಜನೆಗಳಲ್ಲಿ ಕರ್ನಾಟಕದ ಪರವಾಗಿ ನಿಂತು ಬಡಿದಾಡುವ ಸರ್ಕಾರ ಬೇಕೆ ವಿನಾ ಡಬಲ್ ಎಂಜಿನ್‌ನ ಅಡಿ ಸಿಲುಕಿ ಕನ್ನಡ ನಾಡು ನಜ್ಜುಗುಜ್ಜಾಗುವ ಪರಿಸ್ಥಿತಿ ಬೇಡ. ವಿಶ್ವಗುರುವಿನ ಊಳಿಗದ ಬದಲು, ಗಾಂಧೀಜಿ ಕನಸಿನ ರಾಮರಾಜ್ಯವೇ ನಮಗೆ ಬೇಕಾಗಿರುವುದು.

ಚುರುಮುರಿ



ಜಿ20- ಟಿ20!

• ಬಿ.ಎನ್.ಮಲ್ಲೇಶ್

‘ಸುದ್ದಿ ಗೊತ್ತಾತ?’ ಎಂದ ದುಬ್ಬೀರ.

‘ಗೊತ್ತಾತು, ಅದೇ ಡಿಕೆಶಿ- ಸಿದ್ರಾಮಣ್ಣರ ಬಸ್ ಯಾತ್ರೆ, ಚೀನಾ ಗಡಿ ಗಲಾಟೆ, ಜಿ20 ಶೃಂಗಸಭೆ... ಇವೇ ತಾನೆ?’ ಎಂದ ಗುಡ್ಡೆ.

‘ಅದಲ್ಲ, ನಾನೇಳಿದ್ದು ನಮ್ ಟೀವಿ ರಿಪೋಟ್ರು ತೆಪರೇಸಿ ಸುದ್ದಿ ಗೊತ್ತಾತ ಅಂತ...’

‘ಅವುಂದು ಮಹಾರಾಷ್ಟ್ರ ಗಡಿ ತಂಟೆ ಥರ ಏನಾದ್ರೂ ಒಂದು ಇದ್ದೇ ಇರ್ತತಿ ಬಿಡಲೆ, ಸರಿ, ಈಗೇನು?’

‘ಅವನೆಂಡ್ತಿ ಅವನನ್ನ ಮತ್ತೆ ಮನಿಯಿಂದ ಹೊರಗಾಕ್ಯಾಳಂತೆ...’

‘ಹೌದಾ? ಹೊಡಿ ಹಲಿಗಿ’ ಎಂದ ಗುಡ್ಡೆ.

‘ಆಹಾ, ಎಷ್ಟು ಖುಷಿಪಡ್ತೀರಲೆ, ಪಾಪ ತೆಪರೇಸಿ’ ಎಂದ ಕೊಟ್ರೇಶಿ, ‘ಅದಿರ್ಲಿ ಯಾಕಂತೆ?’ ಎಂದ.

‘ತೆಪರ ನಿನ್ನಿ ರಾತ್ರಿ ಸಕತ್ ಗುಂಡು ಹಾಕಿ ಮನೇಲಿ ಯದ್ವಾತದ್ವಾ ಹಾರಾಡಿದ್ನಂತೆ. ಬೆಳಿಗ್ಗೆ ಎದ್ದು, ಜಿ20 ಸಭೆ ವರದಿ ಮಾಡೋದಿದೆ, ಬೇಗ ತಿಂಡಿ ಮಾಡು ಅಂತ ಅವಸರ ಮಾಡಿದ್ನಂತೆ. ಅದ್ಕೆ ಅವನೆಂಡ್ತಿ, ನಿಮ್ ಜಿ20 ಹಂಗಿರ್ಲಿ, ಮೊದ್ಲು ನನ್ 2 ಪ್ರಶ್ನೆಗಳಿಗೆ ಉತ್ತರ ಕೊಟ್ಟು ಹೊರಗೆ ಕಾಲಿಡಿ ಅಂದ್ಲಂತೆ’.

‘ಹೌದಾ? ಏನವು ಪ್ರಶ್ನೆ?’

‘ಒಂದು, ನೀವು ಕುಡಿಯೋದು ಯಾವಾಗ ಬಿಡ್ತೀರ? ಎರಡು, ಒತ್ತೆ ಇಟ್ಟಿರೋ ನನ್ನ ಚಿನ್ನದ ಬಳೆ ಯಾವಾಗ ಬಿಡಿಸ್ಕಂಡು ಬರ್ತೀರ ಹೇಳಿ ಅಂತ ಪಟ್ಟು ಹಿಡಿದ್ಲಂತೆ. ಸದ್ಯ ಅವೆರಡೂ ಆಗಲ್ಲ ಅಂತ ತೆಪರ ಹೇಳಿದ್ದಕ್ಕೆ ಅವನನ್ನೂ ಅವನ ಸೂಟ್‌ಕೇಸ್‌ನೂ ಹೊರಗಾಕಿ ಬಾಗಿಲು ಹಾಕ್ಕಂಡ್ಲಂತೆ’ ದುಬ್ಬೀರ ನಕ್ಕ.

‘ಓ... ಹಂಗಾರೆ ಇದು ಜಿ20 ಅಲ್ಲ, ಟಿ20’ ಎಂದ ಗುಡ್ಡೆ.

‘ಅಂದ್ರೆ?’

‘ತೆಪರೇಸಿಗೆ ಪ್ರಶ್ನೆ ಎರಡು, ಉತ್ತರ ಸೊನ್ನೆ!’ ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳೆಂದು ನಕ್ಕರು.

ಸಂಗತ

ಸಾಧನೆಯ ಕಂಬವೇರಿದ ವನಿತೆಯರು

ದೇಶದಲ್ಲೇ ಮೊದಲ ಬಾರಿಗೆ ಲೈನ್‌ವುಮನ್‌ಗಳಾಗಿ ಕೆಲಸ ಮಾಡುತ್ತಿರುವ ತೆಲಂಗಾಣದ ಭಾರತಿ, ಶಿರೀಷಾ ಸಿನಿಮಾ ತಾರೆಯರಷ್ಟೇ ಜನಪ್ರಿಯತೆ ಗಳಿಸುತ್ತಿದ್ದಾರೆ

• ಶ್ರೀಗುರು


ಶಾಲೆಗೆ ಹೋಗಿ ಬರುವ ಹೆಣ್ಣುಮಕ್ಕಳೆಲ್ಲ ಇವರಿಬ್ಬರನ್ನೂ ನೋಡಿದ ತಕ್ಷಣ ಹತ್ತಿರ ಹೋಗಿ ಮಾತನಾಡಿಸುತ್ತಾರೆ. ನೋಟ್ ಪುಸ್ತಕದಲ್ಲಿ ಸಹಿ ತೆಗೆದುಕೊಳ್ಳುತ್ತಾರೆ. ‘ನಮಗೂ ನಿಮ್ಮಂತಾಗುವ ಆಸೆ’ ಎನ್ನುತ್ತಾರೆ. ದಾರಿಹೋಕರು ಈ ದೃಶ್ಯವನ್ನು ಮೊಬೈಲ್ ಕ್ಯಾಮೆರಾಗಳಲ್ಲಿ ಚಿತ್ರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಾರೆ. ಆ ಇಬ್ಬರ ಹೆಸರು ಭಾರತಿ ಮತ್ತು ಶಿರೀಷಾ.

ತೆಲಂಗಾಣ ರಾಜ್ಯದ ವಿದ್ಯುತ್ ವಿತರಣಾ ನಿಗಮವೊಂದರಲ್ಲಿ ‘ಲೈನ್‌ವುಮನ್’ಗಳಾಗಿ ಕೆಲಸ ಮಾಡುತ್ತಿರುವ ಇವರಿಬ್ಬರೂ ದೇಶದಲ್ಲಿ ಇದುವರೆಗೂ ಮಹಿಳೆಯರು ಮಾಡದೇ ಇದ್ದ ಕೆಲಸ ಮಾಡಿ ಸೈ ಎನಿಸಿಕೊಂಡಿದ್ದಾರೆ. ರಾಜ್ಯದಾದ್ಯಂತ ಅಭಿಮಾನಿಗಳನ್ನು ಸಂಪಾದಿಸಿರುವ ಇವರು ಹೆಣ್ಣುಮಕ್ಕಳಿಗೆ ಸ್ಫೂರ್ತಿಯ ಸಂಕೇತವೆನಿಸಿದ್ದಾರೆ. ಧಾರಾವಾಹಿ, ಸಿನಿಮಾ ತಾರೆಯರಷ್ಟೇ ಜನಪ್ರಿಯತೆ ಗಳಿಸುತ್ತಾ ‘ಈ ಕೆಲಸ ಮಾಡುತ್ತಿರುವ ನಮಗೆ ನಮ್ಮ ಬಗ್ಗೆ ತುಂಬಾ ಹೆಮ್ಮೆ ಇದೆ, ಆದರೆ ಇದು ನಮಗೆ ಸುಲಭವಾಗೇನೂ ದಕ್ಕಿಲ್ಲ, ಅದಕ್ಕೂ ಕಾನೂನು ಹೋರಾಟ ಮಾಡುವಂತಾದದ್ದು ದುರದೃಷ್ಟಕರ’ ಎನ್ನುತ್ತಾರೆ.

ತಮ್ಮ ಜಿಲ್ಲೆಯ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಎಲೆಕ್ಟ್ರಿಕಲ್ ಟ್ರೇಡ್‌ನಲ್ಲಿ ತರಬೇತಿ ಪಡೆದಿರುವ ವಿ.ಭಾರತಿ ಮತ್ತು ಬಬ್ಬೂರಿ ಶಿರೀಷಾ, 2019ರಲ್ಲಿ ತೆಲಂಗಾಣ ರಾಜ್ಯ ವಿದ್ಯುತ್ ನಿಗಮಕ್ಕೆ ಲೈನ್‌ಮನ್ ನೇಮಕಾತಿ ಆದೇಶ ಹೊರಬಿದ್ದಾಗ ಅರ್ಜಿ ಸಲ್ಲಿಸಿದ್ದರು. ಮೊದಲ ಬಾರಿಗೆ ಈ ಕೆಲಸಕ್ಕೆ ಮಹಿಳೆಯರಿಂದ ಅರ್ಜಿ ಬಂದದ್ದನ್ನು ಕಂಡ ನಿಗಮದ ಅಧಿಕಾರಿಗಳು ಅಚ್ಚರಿಗೊಂಡಿದ್ದರು. ಮಹಿಳೆಯರಿಗೆ ಇಪ್ಪತ್ತಾರು ಅಡಿ ವಿದ್ಯುತ್ ಕಂಬವನ್ನು ಹತ್ತಲು ಆಗುವುದಿಲ್ಲ ಎಂಬ ಕಾರಣ ನೀಡಿ ನಿಗಮವು ಅರ್ಜಿಗಳನ್ನು ತಿರಸ್ಕರಿಸಿತ್ತು. ಇದನ್ನು ಭಾರತಿ ಮತ್ತು ಶಿರೀಷಾ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಲೈನ್‌ಮನ್ ಹುದ್ದೆಗೆ ಕಂಬ ಹತ್ತಲು ಬರಬೇಕು ಎಂಬ ನಿಯಮವಿದೆ. ಅದರಂತೆ ಕಂಬ ಹತ್ತಲು ಆಗುತ್ತದೆಯೋ ಇಲ್ಲವೋ ಎಂದು ‘ಪೋಲ್ ಟೆಸ್ಟ್’ ನಡೆಸುವಂತೆ ಹೈಕೋರ್ಟ್ ಆದೇಶ ನೀಡಿತ್ತು. 2020ರ ಡಿಸೆಂಬರ್ 23ರಂದು ಒಂದೊಂದೇ ನಿಮಿಷದಲ್ಲಿ ಕಂಬ ಹತ್ತಿಳಿದ ಇಬ್ಬರೂ ಪೋಲ್ ಟೆಸ್ಟ್ ಪಾಸ್ ಆದರು. ಈ ಪ್ರಕರಣದ ವಿಚಾರಣೆಯು ಎಂಟು ತಿಂಗಳವರೆಗೆ ನಡೆಯಿತು. ಅದರಲ್ಲಿ ಗೆದ್ದುಬಿಟ್ಟರು. ಈ ಸಂಬಂಧದ ಪ್ರವೇಶ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದರು. ಅದಾದ ಒಂದು ತಿಂಗಳ ಒಳಗಾಗಿ ಇಬ್ಬರಿಗೂ ನೇಮಕಾತಿ ಆದೇಶ ನೀಡಬೇಕೆಂದು ನ್ಯಾಯಾಲಯ ತಾಕೀತು ಮಾಡಿತು. ಸಿದ್ದಿಪೇಟ ಜಿಲ್ಲೆಯ ಗಣೇಶಪಲ್ಲಿ ಗ್ರಾಮದ ಶಿರೀಷಾಗೆ ರಾಜ್ಯದ ಇಂಧನ ಸಚಿವ ಜಗದೀಶ್ ರೆಡ್ಡಿ ಅವರೇ ಖುದ್ದಾಗಿ ನೇಮಕಾತಿ ಪತ್ರ ನೀಡಿದರು.

ನ್ಯಾಯಾಲಯದ ಆದೇಶದಂತೆ ಇಬ್ಬರೂ ಲೈನ್‌ಮನ್ ಹುದ್ದೆಗೆ ನೇಮಕಗೊಂಡು ವಿದ್ಯುತ್ ವಿತರಣಾ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ‘ಪುರುಷರೊಂದಿಗೆ ಅವರಷ್ಟೇ ಕ್ಷಮತೆಯಿಂದ ಕೆಲಸ ಮಾಡುತ್ತಿದ್ದೇವೆ. ಎತ್ತೆತ್ತರದ ಕಂಬ, ವಿದ್ಯುತ್ ಗೋಪುರ ಏರಿ ಲೈನ್ ಸರಿಮಾಡಿ ವಿದ್ಯುತ್ ಹರಿಯುವಂತೆ ನೋಡಿಕೊಳ್ಳುತ್ತೇವೆ’ ಎನ್ನುವ ಭಾರತಿ, ‘ಲೈನ್‌ವುಮನ್ ಆಗಿ ಕೆಲಸ ಮಾಡುತ್ತಿರುವ ಮೊದಲ ಮಹಿಳೆಯರು ನಾವು ಎಂಬ ಗೌರವ ನಮ್ಮಲ್ಲಿ ಹೆಚ್ಚಿನ ಆತ್ಮವಿಶ್ವಾಸ ತುಂಬಿದೆ’ ಎಂದು ಸಂತಸಪಡುತ್ತಾರೆ.

‘ಕಂಬದ ಮೇಲೇರಿ ಕೆಲಸ ಮಾಡುವುದನ್ನೇ ಗಮನಿಸುತ್ತಾ ವಿಡಿಯೊ, ಫೋಟೊ ತೆಗೆಯುವ ನಾಗರಿಕರು, ನಾವು ಕೆಳಗಿಳಿದು ಬಂದ ಮೇಲೆ ‘ಶಹಬ್ಬಾಸ್, ಹೆಣ್ಣುಮಕ್ಕಳೆಂದರೆ ಹೀಗಿರಬೇಕು’ ಎನ್ನುತ್ತಾರೆ. ಅದೇ ನಮ್ಮ ಕೆಲಸಕ್ಕೆ ಸಿಗುತ್ತಿರುವ ದೊಡ್ಡ ಮರ್ಯಾದೆ’ ಎನ್ನುವ ಶಿರೀಷಾ, ‘ಹೆಣ್ಣಿಗೊಂದು, ಗಂಡಿಗೊಂದು ಕೆಲಸ ಎಂದು ಮಾಡಿದವರು ಯಾರೋ? ನನಗಂತೂ ಅಂಥ ವ್ಯತ್ಯಾಸ ಕಾಣುತ್ತಿಲ್ಲ’ ಎನ್ನುತ್ತಾರೆ.



ಇಬ್ಬರು ಮಕ್ಕಳ ತಾಯಿ, 32ರ ಹರೆಯದ ಭಾರತಿ ಮತ್ತು 22 ವರ್ಷದ ಶಿರೀಷಾ, ಅತ್ಯಂತ ಸಾಮಾನ್ಯ ಹಿನ್ನೆಲೆಯಿಂದ ಬಂದವರು. ‘ಸಂಬಂಧಿಕರು, ನೆರೆಹೊರೆಯವರೆಲ್ಲ, ಅದು ಗಂಡಸರ ಕೆಲಸ, ನಿಮ್ಮ ಕೈಲಿ ಆಗುತ್ತದಾ ಎನ್ನುತ್ತಿದ್ದಾಗಲೆಲ್ಲ ಅವರಿಗೆ ಉತ್ತರ ನೀಡುವುದೇ ವ್ಯರ್ಥವೆನಿಸುವಷ್ಟು ಕಿರಿಕಿರಿಯಾಗುತ್ತಿತ್ತು, ಈಗ ಅವರ ದೃಷ್ಟಿ ಬದಲಾಗಿದೆ, ಅವರು ತೋರಿಸುವ ವಿಶ್ವಾಸದಿಂದ ನಮಗೆ ಇನ್ನಷ್ಟು ಸ್ಥೈರ್ಯ ಲಭಿಸಿದೆ’ ಎನ್ನುವ ಭಾರತಿ, ಗಾಢ ಬಣ್ಣದ ಹಳದಿ ಹೆಲ್ಮೆಟ್, ಶಾಕ್‌ಪ್ರೂಫ್ ಬೂಟು, ಗ್ಲೌಸ್ ಧರಿಸಿ ಕೈಯಲ್ಲಿ ಕಟಿಂಗ್ ಪ್ಲೈಯರ್ ಹಿಡಿದು ಕಂಬವೇರುತ್ತ, ‘ನೇಮಕಾತಿ ಆದೇಶದಲ್ಲಿ ‘ಲೈನ್‌ಮನ್’ ಎಂದೇ ಬರೆದಿದ್ದಾರೆ. ಅದು ‘ಲೈನ್‌ವುಮನ್’ ಎಂದಾಗಬೇಕು, ಆ ದಿನವೂ ದೂರವಿಲ್ಲ’ ಎಂದು ಕಣ್ಣರಳಿಸುತ್ತಾರೆ.

ವಿಮಾನ, ಮೆಟ್ರೊ ರೈಲು, ಫೈಟರ್ ಜೆಟ್, ಕ್ರೂಸ್, ಬಸ್ ಓಡಿಸಿದ್ದಲ್ಲದೆ ಬಾಹ್ಯಾಕಾಶಕ್ಕೂ ಮಹಿಳೆಯರು ಕಾಲಿಟ್ಟು ವಿನೂತನ ಸಾಧನೆ ಮಾಡಿದ್ದಾರೆ. ವಿಶ್ವದ ಎತ್ತರದ ಪರ್ವತ ಏರಿ ಪತಾಕೆ ಹಾರಿಸಿದ್ದಾರೆ, ಈಗ ಲೈನ್‌ಮನ್ ನೇಮಕಾತಿ ಆದೇಶದಲ್ಲಿ ಪುರುಷ–ಮಹಿಳೆ ಇಬ್ಬರೂ ಅರ್ಜಿ ಸಲ್ಲಿಸಬಹುದು ಎಂದಾಗಿದೆ. ಮಹಿಳೆ ‘ಬಹುಕಾರ್ಯಕ್ಷಮತಾಮಯಿ’ ಎಂಬುದನ್ನು ಭಾರತಿ- ಶಿರೀಷಾ ಜಂಟಿಯಾಗಿ ನಿರೂಪಿಸುತ್ತಿದ್ದಾರೆ.

ವಾಚಕರ ವಾಣಿ

ಗಾಂಧೀಜಿಯನ್ನು ಅರ್ಥಪೂರ್ಣವಾಗಿ ಹಸ್ತಾಂತರಿಸೋಣ

ನಟರಾಜ್ ಹುಳಿಯಾರ್ ಅವರು ಸಂಪಾದಿಸಿರುವ ‘ಎಲ್ಲರ ಗಾಂಧೀಜಿ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಲೇಖಕ ರಾಮಚಂದ್ರ ಗುಹಾ ಅವರು ‘ಗಾಂಧಿ ಬಗ್ಗೆ ಕೇಂದ್ರದ ಈಗಿನ ಸರ್ಕಾರದಿಂದ ಏನನ್ನೂ ನಿರೀಕ್ಷಿಸಲಾಗದು’ ಎಂದಿದ್ದಾರೆ (ಪ್ರ.ವಾ., ಡಿ. 15). ಹಾಗೆ ನೋಡಿದರೆ ಗಾಂಧೀಜಿಗೆ ರಾಜಕಾರಣಿಗಳಿಂದ ಅಂದಿನಿಂದ ಇಂದಿನವರೆಗೆ ಯಾವ ಉಪಕಾರವೂ ಆಗಿಲ್ಲ. ಬದಲಾಗಿ ಅಪಚಾರವೇ ಆಗುತ್ತ ಬಂದಿದೆ. ರಾಜಕಾರಣಿಗಳು ಗಾಂಧಿ ಹೆಸರಿನಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡು ಬಂದಿರುವರೆಂಬ ಮಾತನ್ನು ಬಿ.ಆರ್. ಅಂಬೇಡ್ಕರ್ ಅವರು ನೆಹರೂ ಕಾಲದಲ್ಲೇ ಹೇಳಿದ್ದರು.

ಅಲ್ಲದೆ, ಗಾಂಧಿಯವರ ಸಾರ್ವಕಾಲಿಕವಾದ ವಿಚಾರಗಳಿಗೆ ರಾಜಕಾರಣಿಗಳ ಪೋಷಣೆ, ಪ್ರಚಾರಗಳ ಅವಶ್ಯಕತೆಯೂ ಇಲ್ಲ. ರಾಜಕಾರಣಿಗಳು ಧರ್ಮವನ್ನು ಉದ್ಧಾರ ಮಾಡುವುದಾಗಿ ಹೇಳಿಕೊಂಡು ಧರ್ಮವನ್ನು ಭ್ರಷ್ಟಗೊಳಿಸಿದ್ದಾಯಿತು. ರಾಜಕಾರಣಿಗಳ ಹಸ್ತಕ್ಷೇಪದಿಂದ ಧರ್ಮ, ವಿಜ್ಞಾನ, ತಂತ್ರಜ್ಞಾನ, ಚರಿತ್ರೆ, ಆಡಳಿತ ಎಲ್ಲವೂ ಅಪಾಯಕಾರಿಯಾಗಿ ಪರಿಣಮಿಸುತ್ತವೆಂಬ ಪಾಠವನ್ನು ಈಗಾಗಲೇ ಇತಿಹಾಸದಿಂದ ಕಂಡರಿತಿದ್ದೇವೆ. ಗಾಂಧಿಯನ್ನಾದರೂ ಮುಂದಿನ ತಲೆಮಾರಿಗೆ ಜೀವಂತವಾಗಿ, ಯಥಾರ್ಥವಾಗಿ ಹಸ್ತಾಂತರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಬುದ್ಧಿಜೀವಿಗಳು ಗಾಂಧಿಯನ್ನು ಉದ್ಧಾರ ಮಾಡಬೇಕೆಂಬ ತರಹದ ಸಲಹೆಗಳನ್ನು ರಾಜಕಾರಣಿಗಳಿಗೆ ನೀಡುವುದನ್ನು ನಿಲ್ಲಿಸಿದರೆ ಮಹದುಪಕಾರವಾಗುತ್ತದೆ.

ಡಾ. ಟಿ.ಎನ್.ವಾಸುದೇವಮೂರ್ತಿ, ಬೆಂಗಳೂರು

ಪ್ರಜಾಸತ್ತೆಯ ಕ್ರೂರ ಅಣಕ

ಇದೇ 19ರಿಂದ ಬೆಳಗಾವಿಯಲ್ಲಿ ಆರಂಭವಾಗಲಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನವು ಧರಣಿ-ಪ್ರತಿಭಟನೆ, ಬಹಿಷ್ಕಾರಗಳಿಗೆ ತುತ್ತಾಗಿ, ಕಾಟಾಚಾರಕ್ಕೆ ನಡೆಯದಿರಲಿ. ಜನರ ಕೋಟ್ಯಂತರ ರೂಪಾಯಿ ತೆರಿಗೆ ಹಣ ಮತ್ತು ಮಾನವಶಕ್ತಿ ವ್ಯಯಿಸಿ ತಯಾರಾಗಿರುವ ಅನೇಕ ಪ್ರಮುಖ ಅಧ್ಯಯನ ವರದಿಗಳು, ತನಿಖಾ ವರದಿಗಳು ರಾಜಕೀಯ ಕಾರಣಗಳಿಗಾಗಿ ಮತ್ತು ಹೊಂದಾಣಿಕೆ ರಾಜಕಾರಣದಿಂದಾಗಿ ಈವರೆಗೂ ಅಧಿವೇಶನದಲ್ಲಿ ಮಂಡನೆಯಾಗಿ ಚರ್ಚಿತವಾಗದೆ ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿವೆ. ಈ ಅಧಿವೇಶನದಲ್ಲಾದರೂ ಅವು ಮಂಡಿತವಾಗಿ, ಅವುಗಳ ಕುರಿತು ಗಂಭೀರ, ವ್ಯಾಪಕ ಮತ್ತು ಅರ್ಥಪೂರ್ಣ ಚರ್ಚೆಯಾಗಬೇಕಾದ ಅವಶ್ಯಕತೆಯಿದೆ.

ಆದರೆ, ಈ ವರದಿಗಳನ್ನು ಸದನದಲ್ಲಿ ಚರ್ಚಿಸದ ಆಡಳಿತ ಮತ್ತು ವಿರೋಧ ಪಕ್ಷಗಳ ನೇತಾರರು, ಜನರನ್ನು ಮರುಳುಗೊಳಿಸಿ, ಅವರ ಮೆಚ್ಚುಗೆ ಗಳಿಸುವುದಕ್ಕಾಗಿ ಅವನ್ನು ವೇದಿಕೆಗಳಲ್ಲಿ ಮಾತ್ರ ಪ್ರಸ್ತಾಪಿಸಿ, ಪರಸ್ಪರ ನಿಂದನೆಗೆ ಅವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಪ್ರಜಾಸತ್ತೆಯ ಕ್ರೂರ ಅಣಕ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಹೊಸ ಯೋಜನೆಯ ಅಗತ್ಯವಿತ್ತೇ?

ಸರ್ಕಾರದ ಮಹತ್ವಾಕಾಂಕ್ಷಿ ಆರೋಗ್ಯ ಯೋಜನೆ ‘ನಮ್ಮ ಕ್ಲಿನಿಕ್’ ಅನ್ನು ಸ್ವಾಗತಿಸಬೇಕೋ ಬೇಡವೋ ಎಂಬುದು ಗೊತ್ತಾಗುತ್ತಿಲ್ಲ. ಏಕೆಂದರೆ ಈಗ ಇರುವ ಸರ್ಕಾರಿ ಪ್ರಾಥಮಿಕ ಆಸ್ಪತ್ರೆಗಳ ಪಾಡು ಮುಂದೇನು ಎಂಬ ಪ್ರಶ್ನೆ ಕಾಡತೊಡಗಿದೆ. ರಾಜ್ಯದಾದ್ಯಂತ ಹೋಬಳಿಗೆ ಒಂದು, ಎರಡು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ವೈದ್ಯರ ಕೊರತೆ, ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದಿರುವುದು, ಔಷಧಿಗಳ ಕೊರತೆ, ವೈದ್ಯಕೀಯ ಪರಿಕರಗಳ ಕೊರತೆ, ಆಂಬುಲೆನ್ಸ್ ಸೇವೆಯಲ್ಲಿ ತೊಡಕು ಹೀಗೆ ನಾನಾ ಸಮಸ್ಯೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ತಾಂಡವವಾಡುತ್ತಿವೆ. ಅಂತಹುದರಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ, ಹೊಸದಾಗಿ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿಕೊಂಡು ಮತ್ತೊಂದು ಸರ್ಕಾರಿ ಆಸ್ಪತ್ರೆ ‘ನಮ್ಮ ಕ್ಲಿನಿಕ್’ ಆರಂಭಿಸುವ ಅಗತ್ಯವಿತ್ತೇ? ಇರುವ ಆಸ್ಪತ್ರೆಗಳನ್ನೇ ಅಭಿವೃದ್ಧಿಪಡಿಸಿ ಮೇಲ್ದರ್ಜೆಗೆ ಏರಿಸಬಹುದಿತ್ತು.

ಸಿದ್ದರಾಮಯ್ಯ ಅವರ ಆಡಳಿತ ಅವಧಿಯಲ್ಲಿ ಶುರುವಾದ ‘ಇಂದಿರಾ ಕ್ಯಾಂಟೀನ್’ಗಳು ಸರ್ಕಾರದ ನಿರ್ಲಕ್ಷ್ಯಕ್ಕೆ ತುತ್ತಾಗಿ ಈಗ ಸದ್ದಿಲ್ಲದೆ ಬಾಗಿಲು ಮುಚ್ಚುತ್ತಿವೆ. ಇದೇ ರೀತಿ, ಮುಂದೆ ಬೇರೊಂದು ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದು, ಬಿಜೆಪಿ ಆಡಳಿತಾವಧಿಯಲ್ಲಿ ಜಾರಿಗೆ ತಂದ ಯೋಜನೆಗಳನ್ನು ನಿರ್ಲಕ್ಷ್ಯ ಮಾಡಿ, ಶಾಶ್ವತವಾಗಿ ಸ್ಥಗಿತಗೊಳಿಸಬಹುದಲ್ಲವೇ? ಯಾವುದೇ ಪಕ್ಷದ ನೇತೃತ್ವದ ಸರ್ಕಾರವಿರಲಿ, ಶಾಶ್ವತವಾಗಿ ಉಳಿಯುವಂತಹ ಹಾಗೂ ಜನರಿಗೆ ನೆರವಾಗುವಂತಹ ಯೋಜನೆಗಳನ್ನು ಜಾರಿಗೆ ತರುವುದು ಉತ್ತಮ.

ಶಿವಶಂಕರ ಎಸ್., ಮುತ್ತರಾಯನಹಳ್ಳಿ, ಮಧುಗಿರಿ

ಕೊನೆಗೂ ನ್ಯಾಯಾಲಯವೇ ಎಚ್ಚರಿಸಬೇಕಾಯಿತು!

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸಲು ವಿಳಂಬ ಧೋರಣೆ ಅನುಸರಿಸುತ್ತಿರುವ ಕಾರಣಕ್ಕೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಐದು ಲಕ್ಷ ರೂಪಾಯಿ ದಂಡ ಹಾಕಿರುವುದು ವರದಿಯಾಗಿದೆ (ಪ್ರ.ವಾ., ಡಿ. 15). ಸಮಾಜವಾದಿ ಚಿಂತಕ ಎಸ್.ಕೆ.ಡೇ ಅವರು ಮೂವತ್ತೈದು ವರ್ಷಗಳ ಹಿಂದೆ, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹೆಚ್ಚು ಜನರ ಪಾಲ್ಗೊಳ್ಳುವಿಕೆ ಮತ್ತು ಪ್ರಾತಿನಿಧ್ಯ ಬಹಳ ಮುಖ್ಯವೆಂಬ ಆಶಯದಿಂದ ರೂಪಿಸಿದ ರಾಜಕೀಯ ತತ್ವವನ್ನು, ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ನಜೀರ್ ಸಾಬ್ ಅವರು ತುಂಬ ಮುತುವರ್ಜಿಯಿಂದ ಪಾಲಿಸಿ, ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿಗಳನ್ನು ಅಸ್ತಿತ್ವಕ್ಕೆ ತಂದು ಜನರ ಕೈಗೆ ಅಧಿಕಾರ ನೀಡಿದರು. ಅಂದಿನಿಂದ ಚುನಾವಣೆಯ ಮೂಲಕ ಸ್ಥಳೀಯ ಅಭಿವೃದ್ಧಿ, ಆಡಳಿತವು ಜನಪ್ರತಿನಿಧಿಗಳ ಕೈಯಲ್ಲಿ ಇತ್ತು. ಆದರೆ, ಚುನಾವಣೆ ನಡೆಯದ ಕಾರಣ ಒಂದು ವರ್ಷದಿಂದ ಜನಪ್ರತಿನಿಧಿಗಳ ಆಳ್ವಿಕೆ ಇಲ್ಲ. ಈಗ ಮೀಸಲಾತಿ ಗೊಂದಲವನ್ನು ಮುಂದೆ ಮಾಡಿದೆ ರಾಜ್ಯ ಸರ್ಕಾರ. ಒಟ್ಟಿನಲ್ಲಿ ಅಧಿಕಾರವು ಜನಪ್ರತಿನಿಧಿಗಳ ಕೈ ತಪ್ಪಿ ಅಧಿಕಾರಿಗಳ ಕೈಗೆ ಸೇರಿದೆ.

ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾದ್ದರಿಂದ ಅಭಿವೃದ್ಧಿ, ಆಡಳಿತ ಎಂತಿದ್ದರೂ ಜನಪ್ರತಿನಿಧಿಗಳ ಕೈಯಲ್ಲಿ ಇರಬೇಕೆಂದು ನ್ಯಾಯಾಲಯವೇ ಎಚ್ಚರಿಸಬೇಕಾಯಿತಲ್ಲ! ನಮ್ಮದು ಅಭಿವೃದ್ಧಿ ಪರ ಸರ್ಕಾರವೆಂದು ಹೇಳಿಕೊಳ್ಳುವ ನಾಯಕರು ಈಗಲಾದರೂ ಕಣ್ತೆರೆಯುವರೇ?!

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಕೀಲರ ರಕ್ಷಣಾ ಕಾಯ್ದೆಗೆ ಆಗ್ರಹ
ಸರಿಯೆಷ್ಟು, ತಪ್ಪೆಷ್ಟು?

● ಬಿ.ಎಸ್.ಷಣ್ಮುಖಪ್ಪ

ವಕೀಲ ವೃತ್ತಿಯು ವರ್ಷದ 365 ದಿನವೂ ದೈಹಿಕ ಹಾಗೂ ಮಾನಸಿಕ ಶ್ರಮವನ್ನು ಬೇಡುವ ವೃತ್ತಿ. ವಕೀಲನಾದವನು ಕೆಲವೊಮ್ಮೆ ಬಿಡಿಗಾಸೂ ಇಲ್ಲದ ಬಡವನಿಂದ ಹಿಡಿದು, ಅವನಂತಹ 100 ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಸಾಮರ್ಥ್ಯವುಳ್ಳ ಧನಿಕನನ್ನೂ ಹಾಗೂ ಸಮಾಜವು ಅಪರಾಧಿ ಎಂದು ನೋಡುವ ವ್ಯಕ್ತಿಯನ್ನೂ ರಕ್ಷಿಸಲು ಸೆಣಸಾಡುವ ಒಂದು ಪವಿತ್ರ ವೃತ್ತಿ. ಕೆಲವೊಮ್ಮೆ ತನ್ನ ಕಕ್ಷಿದಾರನನ್ನು ರಕ್ಷಿಸುವ ಭರದಲ್ಲಿ ತಾನೇ ಇತರರ ಕೋಪಕ್ಕೆ ಗುರಿಯಾಗುವ ಪ್ರಸಂಗಗಳೂ ಉಂಟು. ವಕೀಲರಾದವರು ತಮ್ಮ ವೃತ್ತಿಯ ಮೂಲಕ ದೇಶದಲ್ಲಿ ನ್ಯಾಯದಾನದ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಇಂತಹ ವಕೀಲರ ಮೇಲೆ ಇತ್ತೀಚೆಗೆ ದೌರ್ಜನ್ಯದ ಪ್ರಕರಣಗಳು ಹೆಚ್ಚಾಗುತ್ತಿದ್ದು, ವಕೀಲರು ತಮ್ಮ ರಕ್ಷಣೆಗಾಗಿ ಕಾನೂನಿನ ಕದ ತಟ್ಟುವಂತಹ ಪರಿಸ್ಥಿತಿ ಎದುರಾಗಿದೆ.

ವಕೀಲರ ಮೇಲೆ ನಡೆಯುವ ಯಾವುದೇ ದೌರ್ಜನ್ಯ ಅವರಿಗೆ ಮಾತ್ರ ಸೀಮಿತಗೊಳ್ಳದೇ, ಅವರ ಕುಟುಂಬ ಹಾಗೂ ಸಹೋದ್ಯೋಗಿಗಳಿಗೂ ತಟ್ಟುತ್ತದೆ. ಇಂತಹ ಬೆಳವಣಿಗೆಗಳ ಅಡಿಯಲ್ಲಿ ಹೊಸದಾಗಿ ಕಾನೂನು ಪದವಿಯನ್ನು ಪಡೆದು ವೃತ್ತಿಗೆ ಪದಾರ್ಪಣೆ ಮಾಡುವ ಯುವ ವಕೀಲರಿಗೆ ವೃತ್ತಿಯ ಬಗ್ಗೆ ಭಯ ಹಾಗೂ ಅಭದ್ರತೆ ಕಾಡುವ ಜೊತೆಗೆ, ವೃತ್ತಿಯಿಂದ ಹಿಂದೆ ಸರಿಯುವಂತಹ ವಾತಾವರಣ ಸೃಷ್ಟಿಯಾಗುವ ಸಂಭವವೂ ಉಂಟು. ಪರಿಣಾಮವಾಗಿ ನಮ್ಮ ನ್ಯಾಯದಾನದ ವ್ಯವಸ್ಥೆ ಪ್ರತಿಭಾವಂತ ವಕೀಲರನ್ನು ಪಡೆಯುವುದರಿಂದ ವಂಚಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ವಕೀಲರ ಸಂಘ ಮತ್ತು ರಾಜ್ಯ ವಕೀಲರ ಪರಿಷತ್ ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಜೋರು ದನಿ ಎತ್ತಿವೆ.

ಕ್ಯೂಬಾದ ಹವಾನಾದಲ್ಲಿ 1990ರ ಆಗಸ್ಟ್ 27ರಿಂದ ಸೆಪ್ಟೆಂಬರ್ 7ರವರೆಗೆ ನಡೆದ ವಿಶ್ವಸಂಸ್ಥೆಯ 8ನೇ ಮಹಾ ಅಧಿವೇಶನ, 'ಅಪರಾಧ ತಡೆಗಟ್ಟುವಿಕೆ ಮತ್ತು ಅಪರಾಧಿಗಳನ್ನು ಹೇಗೆ ನಡೆಸಿಕೊಳ್ಳಬೇಕು' ಎಂಬ ವಿಷಯದ ಕುರಿತು ವಿಸ್ತೃತ ಚರ್ಚೆ ನಡೆಸಿತ್ತು. ಭಾರತವೂ ಪಾಲ್ಗೊಂಡಿದ್ದ ಈ ಕಾಂಗ್ರೆಸ್‌ನಲ್ಲಿ 'ವಕೀಲರ ಪಾತ್ರದ ಮೂಲಭೂತ ತತ್ವಗಳು' ಅಂಗೀಕರಿಸಲ್ಪಟ್ಟವು. ಸಾರ್ವಜನಿಕರಿಗೆ ನ್ಯಾಯಯುತ ರಕ್ಷಣೆ ನೀಡಬೇಕಾದ ಮತ್ತು ಅಂತಹ ರಕ್ಷಣೆಗಳ ಕ್ರಮವನ್ನು ಖಾತ್ರಿಪಡಿಸುವಲ್ಲಿ ಪೊಲೀಸರು ಮತ್ತು ವಕೀಲರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ಹಾಗಾಗಿ, ಇವರ ರಕ್ಷಣೆಯೂ ಅಷ್ಟೇ ಮುಖ್ಯ ಎಂಬ ಹಿನ್ನೆಲೆಯಲ್ಲಿ ವಕೀಲರ ರಕ್ಷಣಾ ಕಾಯ್ದೆಯ ಆಶಯ ಆವಿರ್ಭವಿಸಿತು. ವಕೀಲರ ರಕ್ಷಣಾ ಕಾಯ್ದೆಯ ಮುಖ್ಯ ಗುರಿ ವಕೀಲರ ಸುರಕ್ಷತೆ ಮತ್ತು ಅವರ ಕರ್ತವ್ಯಗಳನ್ನು ನಿರ್ವಹಿಸುವ ವೇಳೆಯಲ್ಲಿ ಅವರ ಸಾಮರ್ಥ್ಯಕ್ಕೆ ಎದುರಾಗುವ ಅಡೆತಡೆಗಳನ್ನು ನಿವಾರಿಸುವುದು.

2021ರ ಜುಲೈ 2ರಂದು, ಭಾರತೀಯ ವಕೀಲರ ಪರಿಷತ್, ವಕೀಲರ ರಕ್ಷಣಾ ಮಸೂದೆಯ ಕರಡು ಪ್ರತಿಯನ್ನು ಬಿಡುಗಡೆ ಮಾಡಿದೆ. ವಕೀಲರು ಮತ್ತು ಅವರ ಕುಟುಂಬಗಳು ಎದುರಿಸುತ್ತಿರುವ ಸಮಸ್ಯೆ ಮತ್ತು ಪ್ರತಿಕೂಲತೆಯನ್ನು ಗಮನದಲ್ಲಿಟ್ಟುಕೊಂಡು ಮಸೂದೆಯನ್ನು ರೂಪಿಸಲು ಏಳು ಸದಸ್ಯರ ಸಮಿತಿಯನ್ನು ರಚಿಸಲಾಗಿತ್ತು. ಈ ನಿಟ್ಟಿನಲ್ಲಿ ರಾಜ್ಯದಲ್ಲೂ ಹಿರಿಯ ವಕೀಲ ಉದಯ ಹೊಳ್ಳ, ಸಿ.ಎಚ್.ಹನುಮಂತರಾಯ, ಎ.ಎಸ್.ಪೊನ್ನಣ್ಣ ಮತ್ತು ಡಿ.ಆರ್.ರವಿಶಂಕರ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ವಕೀಲರ ರಕ್ಷಣಾ ಕಾಯ್ದೆಯ ಕರಡು ಪ್ರತಿ ಸಿದ್ಧಪಡಿಸಲಾಗಿದೆ.

ಮಸೂದೆಯ ಬಗ್ಗೆ ಎಷ್ಟೇ ಆಳವಾಗಿ ಚಿಂತಿಸಿದರೂ ಬಹಳಷ್ಟು ಜನ ವಕೀಲರ ನೈತಿಕ ಮೌಲ್ಯಗಳು ದುರ್ಬಲವಾಗುತ್ತಿರುವ ಬಗ್ಗೆಯೂ ಅಷ್ಟೇ ಕಳವಳಕಾರಿ ಸಂಗತಿಗಳಿವೆ. ಈ ಕುರಿತು ಹೆಸರು ಹೇಳಲು ಬಯಸದ ವಕೀಲರೊಬ್ಬರು; 'ಇಂದು ವಕೀಲರ ಸಂಖ್ಯೆ ಸಹಜವಾಗಿಯೇ ಜಾಸ್ತಿಯಾಗಿದೆ. ಪ್ರಕರಣಗಳ ವೈವಿಧ್ಯತೆ, ಅಪರಾಧಗಳ ಪರಿಧಿಯೂ ಊಹೆಗೆ ನಿಲುಕಲಾರದಷ್ಟು ವಿಸ್ತರಣೆಗೊಂಡಿದೆ. ವಕೀಲರು ತಮ್ಮ ನೈತಿಕ ಬದ್ಧತೆ ಉಳಿಸಿಕೊಳ್ಳುವಲ್ಲಿ ಸೋಲುತ್ತಿದ್ದಾರೆ. ಬೇಗನೇ ಶ್ರೀಮಂತರಾಗುವ ಉಮ್ಮೇದಿನಲ್ಲಿ ಅಡ್ಡಹಾದಿ ಹಿಡಿಯುತ್ತಿದ್ದಾರೆ. ದಾಖಲೆಗಳನ್ನು ತಿದ್ದುವ, ತಮ್ಮ ಬಳಿ ಬಂದ ಕಕ್ಷಿದಾರರಿಗೆ ಮೋಸ ಮಾಡುವ, ಕೌಟುಂಬಿಕ ಪ್ರಕರಣಗಳಲ್ಲಿ ನೊಂದ ಮಹಿಳೆಯರಿಂದ ಶುಲ್ಕ ಪಡೆಯದೇ ಅವರ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳುವ ಇಲ್ಲವೇ ಕಾನೂನು ಬಾಹಿರವಾಗಿ ಅವರನ್ನು ಶೋಷಿಸುವ ಪ್ರವೃತ್ತಿ ಹೆಚ್ಚುತ್ತಿವೆ. ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಎಷ್ಟೋ ವಕೀಲರು ಪೊಲೀಸರ ಜೊತೆ ಶಾಮೀಲಾಗಿ ಇವರೇ ಡೀಲ್ ಮಾಸ್ಟರ್‌ಗಳಾಗುತ್ತಿದ್ದಾರೆ. ನ್ಯಾಯಾಲಯದ ಕಣ್ಣಿಗೆ ಮಣ್ಣೆರಚಿ ಸತ್ಯವಂತರಿಗೆ ಮೋಸ ಮಾಡುವ ದುಷ್ಕೃತ್ಯಗಳು ನಡೆಯುತ್ತಿವೆ. ಪರಿಣಾಮವಾಗಿಯೇ ಅವರ ಮೇಲೆ ಹಲ್ಲೆ, ದಾಳಿಯಂತಹ ಘಟನೆಗಳು ನಡೆಯುತ್ತಿವೆ. ರಕ್ಷಣೆ ಕೇಳುವ ಮೊದಲು ನೈತಿಕವಾಗಿ ಸತ್ಯದ ಮಾರ್ಗದಲ್ಲಿ ನಡೆದರೆ ಯಾರಿಗೆ ಯಾರೂ ಹೆದರಬೇಕಿಲ್ಲ' ಎಂಬ ಅವರ ಮಾತಿನಲ್ಲಿ ಸತ್ಯವಿಲ್ಲದೇ ಇಲ್ಲ.

'ವಕೀಲರಿಗೂ ಕುಟುಂಬಗಳಿವೆ'



ವಕೀಲರು ತಮ್ಮನ್ನು ನಂಬಿಕೊಂಡು ಬಂದ ಕಕ್ಷಿದಾರರನ್ನು ರಕ್ಷಿಸುವ ಪ್ರಯತ್ನದಲ್ಲಿ ತಿಳಿದೊ ತಿಳಿಯದೆಯೊ ಕೆಟ್ಟ ಮತ್ತು ದುರುದ್ದೇಶಪೂರಿತ ದಾಳಿಗಳಿಗೆ ತುತ್ತಾಗುವುದು ಹೊಸದೇನಲ್ಲ. ಕಕ್ಷಿದಾರರ ಹಿತರಕ್ಷಣೆ ಮಾಡುವಾಗ ಎದುರಾಗುವ ಸಂಕಟಗಳಲ್ಲಿ ಅವರು ತಮ್ಮನ್ನೂ ರಕ್ಷಿಸಿಕೊಳ್ಳುವ ಅಗತ್ಯವನ್ನು ಮನಗಾಣುವುದೇ ಇಲ್ಲ. ನ್ಯಾಯಾಂಗದ ಪ್ರಾಣವಾಯು ಎಂದೇ ಪರಿಗಣಿಸಲಾಗುವ ವಕೀಲರ ರಕ್ಷಣೆಗೆ ಕಾಯ್ದೆ ಜಾರಿಗೆ ತರಬೇಕೆಂದು ಕೇಳುತ್ತಿರುವುದು ನಿಜವಾಗಿಯೂ ದುಃಖಕರ. ಆದರೆ, ಅದು ಅತ್ಯಂತ ಅನಿವಾರ್ಯ. ವಕೀಲರು ನ್ಯಾಯಾಂಗ ವ್ಯವಸ್ಥೆಯ ಬುನಾದಿಯಾಗಿದ್ದು, ಅವರಿಗೂ ಸಮಾಜದ ಇತರೆ ಸ್ತರದ ವ್ಯಕಿಗಳಂತೆ ಕುಟುಂಬವಿದ್ದು, ಅಪ್ರಸ್ತುತ ದಾಳಿಗಳಿಗೆ ತುತ್ತಾದರೆ ಅಂತಹ ಕುಟುಂಬದ ಸಾಮಾಜಿಕ ಭದ್ರತೆಯನ್ನು ಕಾಪಾಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.

ಲಕ್ಷ್ಮಿ ಅಯ್ಯಂಗಾರ್
ಹಿರಿಯ ವಕೀಲರು, ಹೈಕೋರ್ಟ್

'ಹೋರಾಟಕ್ಕೆ ಹಿಂಜರಿಯುವುದಿಲ್ಲ'



ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಈಗಾಗಲೇ ಭರವಸೆಯನ್ನೇನೋ ನೀಡಿದ್ದಾರೆ ನಿಜ. ಆದರೆ, ಈ ನಿಟ್ಟಿನಲ್ಲಿ ಅವರು ಹಿಂದೆ ಸರಿಯಬಾರದು. ಇದೇ 19ರಿಂದ ಬೆಳಗಾವಿಯಲ್ಲಿ ಆರಂಭವಾಗಲಿರುವ ವಿಧಾನಮಂಡಲದ ಅಧಿವೇಶದಲ್ಲಿ ವಕೀಲರ ಸುರಕ್ಷತಾ ಕಾಯ್ದೆಯ ಮಸೂದೆ ಮಂಡನೆಯಾಗಿ ಅಂಗೀಕಾರವಾಗಬೇಕು. ಇಲ್ಲವಾದಲ್ಲಿ ವಕೀಲರು ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಲಿದ್ದಾರೆ.

ವಿವೇಕ ರೆಡ್ಡಿ, ಅಧ್ಯಕ್ಷರು, ಬೆಂಗಳೂರು ವಕೀಲರ ಸಂಘ

'ನ್ಯಾಯಾಧೀಶರನ್ನೂ ಬಿಟ್ಟಿಲ್ಲ...!'



ವಕೀಲರು ಕರ್ತವ್ಯ ನಿರ್ವಹಣೆಯ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡ ಸಂದರ್ಭದಲ್ಲಿ ಪ್ರತಿ ಕಕ್ಷಿದಾರರಿಂದಲ್ಲದೆ ಅವರಿಂದ ದುಷ್ಪ್ರೇರಣೆ ಪಡೆದ ಕೇಡಿಗಳಿಂದಲೂ ಪ್ರಾಣ ಹಾನಿಗೆ ಒಳಗಾಗಿರುವುದುಂಟು. ಇದು ನ್ಯಾಯಾಧೀಶರನ್ನೂ ತಟ್ಟಿರುವುದಿದೆ.

ಬೆಂಗಳೂರಿಗೆ ಸೀಮಿತಗೊಳಿಸಿಕೊಂಡಾಗ ಕ್ರಿಮಿನಲ್ ವಕೀಲ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಮತ್ತು ಅವರ ಕುಟುಂಬದ ಇತರೆ ಆರು ಮಂದಿ ಹತರಾದದ್ದು, ಚೀಫ್ ಜಸ್ಟೀಸ್ ರಾವ್ ಬಹದ್ದೂರ್ ಮೇದಪ್ಪನವರ ಮೇಲೆ ಕ್ರಿಮಿನಲ್ ವಕೀಲ ಎಲ್.ಎಸ್. ರಾಜು ನಡೆಸಿದ ಕೊಲೆ ಯತ್ನ, ಸರ್. ಎಂ. ವಿಶ್ವೇಶ್ವರಯ್ಯನವರ ವಕೀಲ ಸಹೋದರ ಕೃಷ್ಣಮೂರ್ತಿಯವರ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ವಿಚಾರಣೆ ಎದುರಿಸಿದ ಖ್ಯಾತ ವಕೀಲ ವೆಂಕಟರಂಗ ಐಯ್ಯಂಗಾರ್, ಕೇರಳ ರಾಜ್ಯದಿಂದ ವಕೀಲಿಕಿಗೆ ಬಂದು ಕೊಲೆಯಾದ ರಶೀದ್... ಮುಂತಾದ ಪ್ರಕರಣಗಳ ಒಳಸುಳಿಗಳನ್ನು ಕಂಡಾಗ ವಕೀಲನ ಸುತ್ತ ಅನೇಕ ಗಂಡಾಂತರಕಾರಿ ಸೂಕ್ಷ್ಮಗಳು ಸದಾ ಗಿರಕಿ ಹೊಡೆಯುವುದು ಹೊರಹೊಮ್ಮುತ್ತವೆ.

ಮನುಷ್ಯ-ಸಮಾಜ- ಕಾನೂನು ಇವುಗಳ ಸಂಬಂಧ ನೇರವಾದುದ್ದಲ್ಲ, ಸಂಕೀರ್ಣವಾದದ್ದು. ಅನೇಕ ಒಳನೆಲೆಗಳಿಂದ ಕೂಡಿದ್ದು. ಪ್ರತೀಕಾರಗಳೇ ಮೇಳೈಸುವುವು. ಆದ್ದರಿಂದ, ಇಂತಹ ಕಾನೂನು ಅವಶ್ಯ ಅನಿವಾರ್ಯ.

ಸಿ. ಎಚ್. ಹನುಮಂತರಾಯ, ಕರಡು ಸಮಿತಿ ಸದಸ್ಯ, ವಕೀಲ

'ಕಾನೂನು ಸಚಿವರ ನಿಲುವು ಅಸಾಂವಿಧಾನಿಕ'



ಬಹಳಷ್ಟು ವಕೀಲರು, ಅನೇಕ ಕ್ರಿಮಿನಲ್ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಿರುತ್ತಾರೆ, ದಂಡ ವಿಧಿಸುವಂತೆ ನೋಡಿಕೊಂಡಿರುತ್ತಾರೆ. ಕೌಟುಂಬಿಕ ಸಮಸ್ಯೆಗಳಲ್ಲಂತೂ ವ್ಯಾಜ್ಯಕರ್ತರಲ್ಲಿ ಬಹಳಷ್ಟು ದ್ವೇಷ ಮಡುಗಟ್ಟಿರುತ್ತದೆ. ಇದಕ್ಕೆ ಕೆಲವೊಮ್ಮೆ ವಕೀಲರೂ ಈಡಾಗುವುದುಂಟು. ವಕೀಲರ ವೃತ್ತಿಯು ಬೇರೆಲ್ಲಾ ವೃತ್ತಿಗಳಿಗಿಂತ ಭಿನ್ನವಾದ ಅಪಾಯಗಳನ್ನು ಒಳಗೊಂಡಿರುವ ಕ್ಷೇತ್ರ. ವಕೀಲರು ಅನೂಹ್ಯ ಅಪಾಯಗಳಿಗೆ ತುತ್ತಾಗದೆ ರಕ್ಷಣೆ ಪಡೆಯಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ವಕೀಲರೇ ಎಸಗುವ ಅಪರಾಧಗಳಿಂದ ರಕ್ಷಣೆ ಕೊಡಲು ಆಗುವುದಿಲ್ಲ.

ಉದ್ದೇಶಿತ ಕರಡು ಮಸೂದೆ ಸೂಕ್ತವಾದಂತಹ ರಕ್ಷಣೆಗಳನ್ನು ನೀಡುವಲ್ಲಿ ಅತ್ಯಂತ ಸಮತೂಕದಿಂದ ಕೂಡಿದೆ. ಈ ಮಸೂದೆಯ ಬಗ್ಗೆ ವಿಧಾನಮಂಡಲದ ಅಧಿವೇಶನದಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಗಂಭೀರ ಚರ್ಚೆ ನಡೆಸಬೇಕು. ಇದರ ಸಾಧಕ–ಬಾಧಕಗಳನ್ನು ಪರಾಮರ್ಶಿಸಬೇಕು. ಆದರೆ ಕಾನೂನು ಮಂತ್ರಿ ಜೆ.ಸಿ.ಮಾಧುಸ್ವಾಮಿ ಇಂತಹ ಚರ್ಚೆಗೇ ಅವಕಾಶ ನೀಡುವುದಿಲ್ಲ ಎಂದು ಹೇಳುತ್ತಿರುವುದನ್ನು ಒಪ್ಪಲು ಆಗುವುದಿಲ್ಲ. ಇದು ಅಸಾಂವಿಧಾನಿಕ ನಿಲುವು.

ಕರಡು ಮಸೂದೆ ಶಾಸನಸಭೆಯಲ್ಲಿ ಮಂಡನೆಯಾಗಲಿ. ಅದರಲ್ಲಿ ವಕೀಲರಿಗೆ ಎಷ್ಟರಮಟ್ಟಿಗೆ ರಕ್ಷಣೆ ಕೊಡಬೇಕು ಎಂಬುದನ್ನು ಶಾಸನಕರ್ತರು ಚರ್ಚೆಯ ಮುಖಾಂತರ ತೀರ್ಮಾನಿಸಲಿ.

ಎ.ಎಸ್.ಪೊನ್ನಣ್ಣ, ಕರಡು ಸಮಿತಿ ಸದಸ್ಯ, ಹಿರಿಯ ವಕೀಲ

'ಹೋರಾಟ ಫಲಪ್ರದವಾಗಲಿ'




ಸಿವಿಲ್ ವ್ಯಾಜ್ಯಗಳನ್ನು ನ್ಯಾಯಾಲಯದ ಹೊರಗೆ ಪೊಲೀಸ್ ಠಾಣೆಗಳಲ್ಲೇ ಬಗೆಹರಿಸುವ ಮೂಲಕ ವಕೀಲರಿಗೆ ಪ್ರಕರಣ ನಡೆಸಿದ್ದಕ್ಕೆ ಶುಲ್ಕವನ್ನೇ ನೀಡದೆ ಕಕ್ಷಿದಾರರು ಕಡೆಗಣಿಸುತ್ತಿದ್ದರು. ಇದರಿಂದ ವಕೀಲರಿಗೆ ತಾವು ನಿರ್ವಹಿಸುವ ಕೆಲಸಕ್ಕೆ ತಕ್ಕ ಗೌರವವೂ ಸಿಗದೆ ಎದುರು ಕಕ್ಷಿದಾರರಿಂದಲೂ ಪೊಲೀಸರಿಂದಲೂ ಶೋಷಣೆಗೀಡಾಗುತ್ತಿದ್ದರು. ವಕೀಲರು ಇದನ್ನು ಪ್ರಶ್ನಿಸಿದಾಗ ಅವರ ಮೇಲೆ ಎದುರು ಕಕ್ಷಿದಾರರು ಹಲ್ಲೆ ನಡೆಸಿದ ಕೆಲವೊಮ್ಮೆ ಕೊಲೆಗಳನ್ನೇ ಮಾಡಿದ ಘಟನೆಗಳು ಸಂಘದ ಗಮನಕ್ಕೆ ಬರುತ್ತಿದ್ದವು. ವಕೀಲರು ನಿರ್ಭೀತಿಯಿಂದ ತಮ್ಮ ವೃತ್ತಿ ನಿರ್ವಹಿಸುವುದು ಅಸಾಧ್ಯ ಎಂಬ ವಾತಾವರಣ ನಿರ್ಮಾಣವಾಗಿತ್ತು. ವಕೀಲರ ಮೇಲೆ ನಡೆಯುತ್ತಿದ್ದ ಈ ದೌರ್ಜನ್ಯವನ್ನು ಖಂಡಿಸಿ ರಾಜ್ಯಾದ್ಯಂತ ವಕೀಲರ ಪ್ರತಿಭಟನೆ ಮಾಡಲಾಯಿತು ಮತ್ತು ವಕೀಲರ ಮೇಲಿನ ದೌರ್ಜನ್ಯ ತಡೆಯಲು ಹಿರಿಯ ವಕೀಲರ ನೇತೃತ್ವದಲ್ಲಿ ಸಮಿತಿ ರಚಿಸಿ ವಕೀಲರ ರಕ್ಷಣಾ ಕಾಯ್ದೆ ರಚನೆಗೆ ಚಾಲನೆ ನೀಡಲಾಗಿತ್ತು.

ಅಂದು ಕಾನೂನು ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಸಂಘದ ವತಿಯಿಂದ ನೀಡಲಾದ ಮನವಿಗೆ ಸ್ಪಂದಿಸಿ ಕಾಯ್ದೆ ಜಾರಿಗೆ ತರುವ ಬಗ್ಗೆ ಆಶ್ವಾಸನೆ ನೀಡಿದ್ದರು. ಅಷ್ಟರಲ್ಲಿ ಬೆಂಗಳೂರು ವಕೀಲರ ಸಂಘದ ಚುನಾವಣೆ ಘೋಷಣೆಯಾಯಿತು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾದರು. ಕಾನೂನು ಸಚಿವರು ಬದಲಾವಣೆಯಾದರು. ನಮ್ಮ ಬೇಡಿಕೆ ಹಾಗೆ ನನೆಗುದಿಗೆ ಬಿತ್ತು. ಈಗ ಈ ನಿಟ್ಟಿನಲ್ಲಿ ಪುನಃ ಒತ್ತಡ ಹೆಚ್ಚಾಗಿದೆ. ಈಗಲಾದರೂ ಸರ್ಕಾರ ವಕೀಲರ ರಕ್ಷಣಾ ಕಾಯ್ದೆ ಕರಡನ್ನು ಪರಿಶೀಲಿಸಿ ಜಾರಿಗೊಳಿಸುವ ಇಚ್ಛಾಶಕ್ತಿ ತೋರಲಿ.

ಎ.ಪಿ. ರಂಗನಾಥ, ಮಾಜಿ ಅಧ್ಯಕ್ಷ, ಬೆಂಗಳೂರು ವಕೀಲರ ಸಂಘ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಉತ್ತರಿಸುವ ಆಯ್ಕೆಯು ಗ್ರಾಮೀಣ ವಿದ್ಯಾರ್ಥಿಗಳಿಗೆ ವರದಾನ ಆಗಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಆ್ಯಸಿಡ್‌ಗೆ ಇಲ್ಲ ಕಡಿವಾಣ

ದೆಹಲಿಯಲ್ಲಿ ಈಚೆಗಷ್ಟೇ ಬಾಲಕಿಯೊಬ್ಬಳ ಮೇಲೆ ಆ್ಯಸಿಡ್ ಎರಚಲಾಗಿದೆ. ಆ್ಯಸಿಡ್‌ನಿಂದಾಗಿ ತೀವ್ರವಾಗಿ ಗಾಯಗೊಂಡಿರುವ ಸಂತ್ರಸ್ತೆ, ಜೀವನ್ಮರಣದ ಮಧ್ಯೆ ಹೋರಾಡುತ್ತಿದ್ದಾಳೆ. ದೇಶದಲ್ಲಿ ಎಲ್ಲಾ ಸ್ವರೂಪದ ಆ್ಯಸಿಡ್‌ಗಳ ಮಾರಾಟಕ್ಕೆ ನಿರ್ಬಂಧವಿದೆ. ಆದರೂ ಅಪಾಯಕಾರಿಯಾದ ಆ್ಯಸಿಡ್‌ಗಳು, ಪಾನಕದ ಬಾಟಲ್ ಸಿಗುವಷ್ಟೇ ಸುಲಭವಾಗಿ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಿವೆ. ಆ್ಯಸಿಡ್ ಮಾರಾಟದ ಮೇಲೆ ಇರುವ ನಿರ್ಬಂಧ ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ ಎಂಬುದರತ್ತ ಇದು ಬೊಟ್ಟು ಮಾಡುತ್ತದೆ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಆ್ಯಸಿಡ್ ಮಾರಾಟ ನಿರ್ಬಂಧಕ್ಕೆ ಹಲವು ಕಾನೂನುಗಳಿವೆ. 1919ರಿಂದಲೇ ಜಾರಿಯಲ್ಲಿರುವ 'ವಿಷ ಕಾಯ್ದೆ'ಯು, ಅಪಾಯಕಾರಿಯಾದ ಎಲ್ಲಾ ಸ್ವರೂಪದ ಆ್ಯಸಿಡ್‌ಗಳನ್ನು 'ವಿಷ' ಎಂದು ಪರಿಗಣಿಸುತ್ತದೆ. ಆ್ಯಸಿಡ್ ಸಂಗ್ರಹ, ಮಾರಾಟ ಮತ್ತು ಖರೀದಿ ಮೇಲೆ ಇರುವ ನಿರ್ಬಂಧವನ್ನು ಈ ಕಾಯ್ದೆಯು ವಿವರಿಸುತ್ತದೆ.

1919ರಲ್ಲಿ ಈ ಕಾಯ್ದೆಯನ್ನು ರಚಿಸಲಾಗಿದ್ದರೂ, ಹಲವು ಬಾರಿ ತಿದ್ದುಪಡಿ ತರುವ ಮೂಲಕ ಅದರ ವ್ಯಾಪ್ತಿಯನ್ನು ಹೆಚ್ಚಿಸಲಾಗಿದೆ. ಈ ಕಾಯ್ದೆಯು ಆ್ಯಸಿಡ್ ಅನ್ನು ವಿಷ ಎಂದು ಪರಿಗಣಿಸುವುದರಿಂದ, ವಿಷಕ್ಕೆ ಅನ್ವಯವಾಗುವ ಎಲ್ಲಾ ನಿಯಮಗಳು ಆ್ಯಸಿಡ್‌ಗೂ ಅನ್ವಯವಾಗುತ್ತವೆ.

ದೇಶದಲ್ಲಿ ನಡೆದ ಬಹುತೇಕ ಆ್ಯಸಿಡ್ ದಾಳಿಗಳಲ್ಲಿ, ಶೌಚಾಲಯ ಶುಚಿಗೊಳಿಸಲು ಬಳಸುವ ದ್ರಾವಣಗಳನ್ನು ಆ್ಯಸಿಡ್‌ನಂತೆ ಬಳಸಲಾಗಿದೆ. ದೇಶದಲ್ಲಿ ಮಾರಾಟವಾಗುತ್ತಿರುವ ಇಂತಹ ದ್ರಾವಣದಲ್ಲಿ ಮೂಲವಸ್ತುವಾಗಿ ಹೈಡ್ರೊಕ್ಲೋರಿಕ್ ಆ್ಯಸಿಡ್ ಮತ್ತು ಸಲ್ಫ್ಯೂರಿಕ್ ಆ್ಯಸಿಡ್ ಅನ್ನು ಬಳಸಲಾಗುತ್ತದೆ. ಇವು ಕಿರಾಣಿ ಅಂಗಡಿಗಳಲ್ಲಿ ಮತ್ತು ಆನ್‌ಲೈನ್ ಪ್ಲಾಟ್‌ಫಾರಂಗಳಲ್ಲಿ ಮುಕ್ತವಾಗಿ ಲಭ್ಯವಿವೆ. ಇವುಗಳ ಮಾರಾಟಕ್ಕಿರುವ ಯಾವ ನಿರ್ಬಂಧವೂ ಪಾಲನೆಯಾಗುತ್ತಿಲ್ಲ.

ಕಾಯ್ದೆಯ ನಿರ್ಬಂಧಗಳು

- ಹೆಚ್ಚು ಅಪಾಯಕಾರಿಯಾದ ಹೈಡ್ರೊಕ್ಲೋರಿಕ್ ಆ್ಯಸಿಡ್ ಮತ್ತು ಗಂಧಕದ ಆ್ಯಸಿಡ್‌ಗಳನ್ನು ಈ ಕಾಯ್ದೆಯು 'ವಿಷ' ಎಂದು ವರ್ಗೀಕರಿಸಿದೆ
- ಶೌಚಾಲಯ ಶುಚಿ ದ್ರಾವಣದಲ್ಲಿ ಆ್ಯಸಿಡ್ ಪ್ರಮಾಣ ಶೇ 5ಕ್ಕಿಂತಲೂ ಹೆಚ್ಚು ಇದ್ದರೆ, ಅವನ್ನು ಮುಕ್ತವಾಗಿ ಮಾರುವಂತಿಲ್ಲ
- ಆ್ಯಸಿಡ್ ದ್ರಾವಣದಲ್ಲಿ ಆ್ಯಸಿಡ್‌ಗಳ ಪ್ರಮಾಣ ಶೇ 5ಕ್ಕಿಂತಲೂ ಹೆಚ್ಚು ಇದ್ದರೆ, ಅದನ್ನು ಲೇಬಲ್ ಮೇಲೆ ಮುದ್ರಿಸಬೇಕು. ಇದು ಅಪಾಯಕಾರಿ ಎಂದು ಲೇಬಲ್ ಮೇಲೆ ಘೋಷಿಸಿರಬೇಕು
- ಇಂತಹ ಆ್ಯಸಿಡ್ ಮತ್ತು ದ್ರಾವಣವನ್ನು ಸಂಗ್ರಹಿಸಲು ಮತ್ತು ಮಾರಾಟ ಮಾಡಲು ಪರವಾನಗಿ ಪಡೆಯಬೇಕು. ಇವುಗಳನ್ನು ಖರೀದಿಸುವ ವ್ಯಕ್ತಿಯು ಆ್ಯಸಿಡ್ ಖರೀದಿಯ ಉದ್ದೇಶ, ವೈಯಕ್ತಿಕ ವಿಳಾಸ ಮತ್ತಿತರ ವಿವರಗಳನ್ನು ನೀಡಬೇಕು

ಸುಪ್ರೀಂ ಕೋರ್ಟ್ ಮಾರ್ಗಸೂಚಿ

ಆ್ಯಸಿಡ್ ದಾಳಿ ಸಂತ್ರಸ್ತೆ ಲಕ್ಷ್ಮೀ ಅಗರ್ವಾಲ್ ಮತ್ತು ಕೇಂದ್ರ ಸರ್ಕಾರದ ನಡುವಣ ಪ್ರಕರಣವು, ಆ್ಯಸಿಡ್ ಮಾರಾಟದ ಮೇಲಿನ ನಿರ್ಬಂಧಕ್ಕೆ ಸಂಬಂಧಿಸಿದಂತೆ ಮಹತ್ವದ ಮೈಲುಗಲ್ಲಾಗಿದೆ. ಈ ಪ್ರಕರಣದಲ್ಲಿ ಸಂತ್ರಸ್ತೆಗೆ ಹೆಚ್ಚಿನ ಪರಿಹಾರ ಘೋಷಿಸಿದ್ದ ಸುಪ್ರೀಂ ಕೋರ್ಟ್, ಆ್ಯಸಿಡ್ ಮಾರಾಟಕ್ಕೆ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿತ್ತು. 2014ರಿಂದಲೇ ಈ ಮಾರ್ಗಸೂಚಿಗಳು ಜಾರಿಯಲ್ಲಿವೆ.

- ಯಾವುದೇ ರೀತಿಯ ಆ್ಯಸಿಡ್ ಅನ್ನು ಮುಕ್ತವಾಗಿ ಮಾರಾಟ ಮಾಡುವಂತಿಲ್ಲ. ಮಾರಾಟ ಮಾಡುವ ವ್ಯಕ್ತಿಯು, ಖರೀದಿಸುವವರ ವಿವರವನ್ನು ದಾಖಲಿಸಿಕೊಳ್ಳಬೇಕು
- ಗುರುತಿನ ಚೀಟಿ ತೋರಿಸುವ ಗ್ರಾಹಕರಿಗೆ ಮಾತ್ರ ಆ್ಯಸಿಡ್ ಮಾರಾಟ ಮಾಡಬೇಕು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಆ್ಯಸಿಡ್ ಮಾರಾಟ ಮಾಡಬಾರದು
- ಆ್ಯಸಿಡ್ ಅನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ಎಂಬುದರ ವಿವರವನ್ನು ಮಾರಾಟ ದಾಖಲಾತಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು
- ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳು ತಮ್ಮಲ್ಲಿರುವ ವಿವಿಧ ಆ್ಯಸಿಡ್ ಸಂಗ್ರಹದ ಮೇಲ್ವಿಚಾರಣೆಗೆ ವ್ಯಕ್ತಿಯನ್ನು ನಿಯೋಜಿಸಬೇಕು
- ಮಾನವನ ಚರ್ಮವನ್ನು ಸುಡುವ ಮತ್ತು ದೇಹಕ್ಕೆ ಹಾನಿ ಮಾಡುವ ಎಲ್ಲಾ ಸ್ವರೂಪದ ಆ್ಯಸಿಡ್‌ಗಳನ್ನು ರಾಜ್ಯ ಸರ್ಕಾರಗಳೇ ಗುರುತಿಸಿ, ನಿರ್ಬಂಧಿತ ಆ್ಯಸಿಡ್‌ಗಳ ಪಟ್ಟಿಗೆ ಸೇರಿಸಬೇಕು

ಆಧಾರ: ಲಕ್ಷ್ಮೀ ಅಗರ್ವಾಲ್ ಪ್ರಕರಣದ ಸುಪ್ರೀಂ ಕೋರ್ಟ್ ತೀರ್ಪು, ಕೇಂದ್ರ ಗೃಹ ಸಚಿವಾಲಯದ ಸುತ್ತೋಲೆ, ವಿಷ ಕಾಯ್ದೆ–1919

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256



'**ಖಾಸಗಿ** ಶಾಲೆಯನ್ನೂ ನಾಚಿಸುವಂತಿರುವ ಸರ್ಕಾರಿ ಶಾಲೆ. ಅಚ್ಚುಕಟ್ಟು ಕೊಠಡಿಗಳು, ಅತ್ಯಾಧುನಿಕ ಪೀಠೋಪಕರಣ, ಪ್ರೊಜೆಕ್ಟರ್, ಹವಾನಿಯಂತ್ರಿತ ವ್ಯವಸ್ಥೆ ಸೇರಿದಂತೆ ಎಲ್ಲ ಸವಲತ್ತುಗಳನ್ನೂ ಈ ಶಾಲೆ ಹೊಂದಿದೆ. ಪಂಜಾಬ್‌ನಲ್ಲಿ ಎಎಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ಶಿಕ್ಷಣ ವ್ಯವಸ್ಥೆ ಸುಧಾರಿಸಿದೆ. ದೆಹಲಿಯ ರೀತಿ, ಪಂಜಾಬ್‌ನ ಶಾಲೆಗಳೂ ಹೊಸ ರೂಪ ಪಡೆಯುತ್ತಿವೆ' ಎಂದು ಎಎಪಿ ಹೇಳಿಕೊಂಡಿದೆ. ಪಂಜಾಬ್‌ನ ಶಿಕ್ಷಣ ಸಚಿವ ಹರ್ಜೋತ್ ಸಿಂಗ್ ಬಿಯಾನ್ಸ್, ಎಎಪಿ ಮುಖಂಡ ಅನುರಾಗ್ ದಂಡಾ ಸೇರಿದಂತೆ ಪಕ್ಷದ ಹಲವು ಮುಖಂಡರು ಈ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಆದರೆ ಇದು ತಪ್ಪು ಮಾಹಿತಿ.

ಪಂಜಾಬ್‌ನಲ್ಲಿ ಎಎಪಿ ಸರ್ಕಾರ ರಚನೆಯಾಗಿದ್ದು 2022ರ ಮಾರ್ಚ್‌ನಲ್ಲಿ. ಆದರೆ, 2021ರ ಸೆ.2ರಂದೇ 'ದೈನಿಕ ಜಾಗರಣ್ ಪಂಜಾಬಿ' ಪತ್ರಿಕೆಯಲ್ಲಿ ಈ ಚಿತ್ರ ಪ್ರಕಟವಾಗಿದೆ ಎಂದು 'ಲಾಜಿಕಲ್ ಇಂಡಿಯನ್' ಫ್ಯಾಕ್ಟ್‌ಚೆಕ್ ಜಾಲತಾಣ ವರದಿ ಮಾಡಿದೆ. ಫತೇಗಡ ಸಾಹಿಬ್ ಜಿಲ್ಲೆಯ ಮನೇಲಾ ಎಂಬಲ್ಲಿರುವ ಪ್ರಾಥಮಿಕ ಶಾಲೆಗೆ ಅಲ್ಲಿನ ಶಿಕ್ಷಕ ಜಗತಾರ್ ಸಿಂಗ್ ಅವರು 2015ರಲ್ಲಿ ಹೊಸ ರೂಪ ನೀಡಿದ್ದರು. ಮನೆಮನೆಗೆ ತೆರಳಿ ವಂತಿಗೆ ಸಂಗ್ರಹಿಸಿ, ಶಾಲೆಯನ್ನು ಆಧುನಿಕಗೊಳಿಸಿದ್ದರು ಎಂದು ಪತ್ರಿಕೆ ವರದಿ ಮಾಡಿತ್ತು. ಎಎಪಿ ಸರ್ಕಾರ ರಚನೆಯಾಗುವುದಕ್ಕೂ ಮೊದಲು ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಈ ಶಾಲೆ ಹೊಸ ರೂಪ ಪಡೆದಿದೆ ಎಂಬುದು ಸ್ಪಷ್ಟ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಡಿಸೆಂಬರ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಅಷ್ಟಮಿ ಗಂ. 27-03 ನಕ್ಷತ್ರ: ಪೂರ್ವಫಲ್ಗುನಿ ಗಂ. 07-35 ಯೋಗ: ಪ್ರೀತಿ ಗಂ. 07-46, ಕರಣ: ಬಾಲವ ಗಂ. 14-26, ವೃಶ್ಚಿಕ ಮಾಸದ 29 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 –12-00 ಸೂರ್ಯೋದಯ : 06-49 ಸೂರ್ಯಾಸ್ತ : 06-02
ಮುಸ್ಲಿಂ ದಿನಾಂಕ : 21 ಜುಮಾದುಲ್ಲಾವಲ್
ದಿನ ವಿಶೇಷ : ಕಾಲಭೈರವಾಷ್ಟಮಿ, ಅಷ್ಟಮಿ (ಪೂಪಾಷ್ಟಕ), ವೈಕ್ಕಟಾಷ್ಟಕ (ಕೇರಳ)
ಅದೃಷ್ಟ ಸಂಖ್ಯೆ : 9, 11

ಮೇಷ: ಪಾಕಪ್ರವೀಣರಿಗೆ ವೃತ್ತಿಯಲ್ಲಿ ಹೆಸರು ಸಂಪಾದನೆ ಮಾಡುವ ಕಾಲ ಒದಗಿಬರಲಿದೆ. ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ.

ವೃಷಭ: ಇತ್ತೀಚಿನ ದಿನದಲ್ಲಿ ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸ ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿಯ ಹಾದಿ ಕಾಣಬಹುದು. ಕ್ರೀಡಾಪಟುಗಳಿಗೆ, ಉಪನ್ಯಾಸಕರಿಗೆ, ಕಲಾವಿದರಿಗೆ ಹೆಚ್ಚಿನ ಅವಕಾಶ.

ಮಿಥುನ: ಸರ್ಕಾರಿ ಕಾನೂನುಗಳಿಗೆ ಬೆಲೆ ಕೊಡುವ ಮನೋಭಾವವನ್ನು ಬೆಳೆಸಿಕೊಳ್ಳಿರಿ. ಸಹೋದ್ಯೋಗಿಗಳನ್ನು ಹುರಿದುಂಬಿಸುವ ಕೆಲಸವನ್ನು ಮಾಡಿ. ಬಾಲ್ಯ ಸ್ನೇಹಿತರ ಆಶ್ಚರ್ಯಕರ ಭೇಟಿ ಸಂತೋಷವನ್ನು ಉಂಟುಮಾಡಲಿದೆ.

ಕರ್ಕಾಟಕ: ವ್ಯಾವಹಾರಿಕ ಜೀವನದ ಕೆಲವು ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಇಂದು ಸೂಕ್ತವಾದ ದಿನವಾಗಿದೆ. ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ನಿರಂತರತೆ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳಿ.

ಸಿಂಹ: ಮಾತಿನಿಂದ ಕಾರ್ಯ ಸಾಧಿಸುವ ನಿಮ್ಮ ಗುಣದಿಂದ ಅನುಕೂಲಕರ ವಾತಾವರಣ ಕಾಣುವಿರಿ. ನಿಮ್ಮ ಅಧಿಕಾರಿಗಳ ಮನಸ್ಥಿತಿಯನ್ನು ಅರಿತುಕೊಂಡು ನಿಮ್ಮ ಬೇಡಿಕೆಯನ್ನು ನೆರವೇರಿಸಿಕೊಳ್ಳುವ ಪ್ರಯತ್ನ ಮಾಡಿ.

ಕನ್ಯಾ: ನಿಮ್ಮ ವ್ಯವಹಾರಗಳಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿಯನ್ನು ನೋಡಬಹುದು. ಅವಿವಾಹಿತರಿಗೆ ಮಾತೃ ವರ್ಗದ ಕಡೆಯಿಂದ ಅಪೇಕ್ಷಿಸಿದ ರೀತಿಯಲ್ಲಿಯೇ ಸಂಬಂಧ ಅರಸಿ ಬರುವುದು.

ತುಲಾ: ಒಡಹುಟ್ಟಿದವರಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸೂಕ್ತ ಕಾಲ. ಕಾಫಿ, ಏಲಕ್ಕಿ ಬೆಳೆಗಾರರು ಉತ್ತಮ ಫಸಲನ್ನು ಕಾಣಬಹುದು. ಉಡುಪು ವಿನ್ಯಾಸಗಾರರಿಗೆ ಹೇರಳ ಅವಕಾಶಗಳು ಲಭ್ಯವಾಗುತ್ತದೆ.

ವೃಶ್ಚಿಕ: ಯಾವುದೇ ಮುಜುಗರ ಅಥವಾ ಹೆದರಿಕೆ ಇಲ್ಲದೆ ಸಮಯವನ್ನು ಸತ್ಕಾರ್ಯಗಳಿಗೆ ಬಳಸಿಕೊಳ್ಳಲು ಸಿದ್ಧರಾಗಿರುವ ಪ್ರಯತ್ನ ಮಾಡಿ. ಸೃಜನಶೀಲ ಯೋಜನೆಗಳಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ.

ಧನು: ರಫ್ತು ಮಾರಾಟದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ ಎದುರಾದರೂ, ಆದಾಯಕ್ಕೆ ತೊಂದರೆಯಿಲ್ಲ. ವಿದೇಶಿ ಬಂಡವಾಳದಿಂದ ಲಾಭ ಗಳಿಸುವ ಅವಕಾಶ. ಉತ್ತಮ ಸಂತಾನ ಪ್ರಾಪ್ತಿಯಾಗಲಿದ್ದು ಸಂತೃಪ್ತ ಜೀವನ ನಡೆಸುವಿರಿ.

ಮಕರ: ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯಲಿದೆ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಎಣ್ಣೆ, ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಜೋರಾಗಿರುವುದು. ಬಂಧು ಮಿತ್ರರು ಮನೆಗೆ ಬರಲಿದ್ದಾರೆ.

ಕುಂಭ: ಅಕ್ಕ ಪಕ್ಕದವರಲ್ಲಿ ಸಂಯಮದ ನಡುವಳಿಕೆ ಅಗತ್ಯ. ನಾನಾ ರೀತಿಯಲ್ಲಿ ಹಣ ನಿಮ್ಮ ಕೈ ಸೇರಲಿದೆ. ನಿಮ್ಮ ಅನಿವಾರ್ಯತೆಗೆ ಬಂಧು ಮಿತ್ರರಿಂದ ಸಹಕಾರ ಲಭ್ಯ. ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸಬೇಕಾಗಬಹುದು.

ಮೀನ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವುದು. ಈ ದಿನ ಸಭೆ ಸಮಾರಂಭಗಳಲ್ಲಿ ಮುಂದಾಳತ್ವ ವಹಿಸಿ ಕೀರ್ತಿ ಗೌರವವನ್ನು ಪಡೆದುಕೊಳ್ಳುವಿರಿ ಹಾಗು ಸಭೆಯ ಯಶಸ್ಸಿಗೆ ನಿಮ್ಮ ಪಾತ್ರ ಮುಖ್ಯವಾಗಿರುವುದು.

ಬೆರಗಿನ ಬೆಳಕು
ಗುರುರಾಜ ಕರಜಗಿ

ಬದುಕಿನ ಪುಣ್ಯವಿಶೇಷ

ದೊರೆವ ಜೀತಕೆ ದುಡಿತ, ಮರುದಿನದ ಚಿಂತೆ ಮಿತ |
ಹೊರೆಯ ಹಗುರಾಗಿಸುವ ಕೆಳೆಯರೊಡನಾಟ ||
ಸರಳತೆಯ ಪರಿತುಷ್ಟಿ, ಪರಮಾರ್ಥ ದೃಷ್ಟಿಯಿವು |
ಸರಿಗೂಡೆ ಸುಕೃತವದು – ಮಂಕುತಿಮ್ಮ || ೭೭೯ ||

ಪದ-ಅರ್ಥ: ಕೆಳೆಯರೊಡನಾಟ = ಕೆಳೆಯರ (ಗೆಳೆಯರ) + ಒಟನಾಟ; ಪರಿತುಷ್ಟಿ = ತೃಪ್ತಿ, ದೃಷ್ಟಿಯಿವು = ದೃಷ್ಟಿ + ಇವು.

ವಾಚ್ಯಾರ್ಥ: ದೊರೆತ ಹಣಕ್ಕೆ ಸರಿಯಾದ ಶ್ರಮ, ಮರುದಿನದ ಚಿಂತೆ ಹೆಚ್ಚಿಲ್ಲ, ಭಾರವನ್ನು ಕಡಿಮೆಮಾಡುವ ಗೆಳೆಯರ ಸಹವಾಸ, ಸರಳತೆಯಲ್ಲಿ ತೃಪ್ತಿ, ಪರಮಾರ್ಥ ದೃಷ್ಟಿ, ಇವೆಲ್ಲ ಸರಿಹೊಂದಿದರೆ ಪುಣ್ಯದ ಬದುಕು.

ವಿವರಣೆ: ಅವನೊಬ್ಬ ಝೆನ್ ಸಂತ. ಅವನ ಕೆಲಸ ರಸ್ತೆ ಮಾಡುವುದು. ಅದು ತುಂಬ ಶ್ರಮದ ಕೆಲಸ. ನೆಲವನ್ನು ಅಗಿದು, ಸಮಮಾಡಿ, ಜಲ್ಲಿಕಲ್ಲುಗಳನ್ನು ಹಾಕಿ, ಕುಟ್ಟಿ ನಂತರ ಯಂತ್ರಗಳನ್ನು ಓಡಾಡಲು ಬಿಡುವುದು. ಆತ ಬೆಳಿಗ್ಗೆ ಹೋದರೆ ಸಾಯಂಕಾಲವೇ ತನ್ನ ಗೂಡಿಗೆ ಬರುವುದು. ಮನೆಗೆ ಬಂದು ತಾನೇ ಅಡುಗೆ ಮಾಡಿಕೊಂಡು ಊಟ ಮಾಡಿ, ಊರ ಮುಂದಿದ್ದ ಅರಳಿಕಟ್ಟೆಗೆ ಹೋಗಿ, ಗೆಳೆಯರೊಂದಿಗೆ ಹರಟೆ ಹೊಡೆದು, ರಾತ್ರಿ ಮನೆಗೆ ಬಂದು ಗಾಢನಿದ್ರೆ ತೆಗೆಯುತ್ತಿದ್ದ. ಅವನ ಗೆಳೆಯರಿಗೆಲ್ಲ ಅವನನ್ನು ಕಂಡರೆ ಪ್ರೀತಿ ಮತ್ತು ಆಶ್ಚರ್ಯ. ಅವನು ಒಂದು ದಿನವಾದರೂ ತನ್ನ ಬದುಕಿನ ಬಗ್ಗೆ ಗೋಳಾಡಿದವನಲ್ಲ, ಕೊರಗಿದವನಲ್ಲ.


ಅವನನ್ನು ಒಂದು ದಿನ ಸ್ನೇಹಿತನೊಬ್ಬ ಕೇಳಿದ, 'ಮಿತ್ರಾ, ನಿನ್ನನ್ನು ಅಂದಿನಿಂದ ಗಮನಿಸುತ್ತಿದ್ದೇನೆ. ಯಾವಾಗಲೂ ನಗು ನಗುತ್ತಲೇ ಇರುತ್ತೀಯಾ. ನಿನಗೆ ಯಾವ ಕಷ್ಟಗಳೂ ಇಲ್ಲವೆ? ನಮಗೆ ಒಂದಾದ ಮೇಲೆ ಒಂದು ತೊಂದರೆಗಳು ಬರುತ್ತವೆ. ನೀನು ಹೇಗೆ ಸಂತೋಷವಾಗಿದ್ದೀ?' ಸಂತ ಹೇಳಿದ, 'ನನಗೆ ತೊಂದರೆಗಳು ಬರಲೇ ಇಲ್ಲ. ಕೇವಲ ಸವಾಲುಗಳಿದ್ದವು. ಸವಾಲುಗಳನ್ನು ಎದುರಿಸುವುದು ಸಂತೋಷವೇ ಅಲ್ಲವೆ? ನಾನು ಸಂಜೆಯವರೆಗೆ ಕೇವಲ ಕರ್ತವ್ಯವನ್ನು ನೆನೆಸಿ ದುಡಿಯುತ್ತೇನೆ. ನಾಳೆಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಾಳೆ ಬಂದಾಗ ನೋಡೋಣ. ಸಂಜೆ ನಿಮ್ಮೊಡನೆ ಮಾತನಾಡಿದಾಗ ದೈಹಿಕ ಶ್ರಮ, ಚಿಂತೆ ಮರೆತು ಹೋಗುತ್ತವೆ. ನಾನು ಎಂದೂ ಕೂಡಿ ಇಡದಿದ್ದುದರಿಂದ ಕಳೆದುಕೊಳ್ಳುವ ಭಯವಿಲ್ಲ. ಮೇಲೆ ಭಗವಂತನಿದ್ದಾನಲ್ಲವೇ? ಅವನಿಗೇ ನನ್ನ ಬದುಕಿನ ಜವಾಬ್ದಾರಿ ವಹಿಸಿ ನಿರಾಳವಾಗಿದ್ದೇನೆ'. ಉಳಿದವರಿಗೆ ಒಂದೇ ಚಿಂತೆ, ತಮಗೇಕೆ ಅವನ ಹಾಗೆ ಬದುಕುವುದು ಸಾಧ್ಯವಾಗುತ್ತಿಲ್ಲ?

ಎಲ್ಲರೂ ತಮ್ಮ ಬದುಕು ಸುಂದರ ಮತ್ತು ಆತಂಕರಹಿತವಾಗಿರಬೇಕೆಂದು ಬಯಸುತ್ತಾರೆ. ಆದರೆ ಹೇಗೆ ಎಂಬುದು ತಿಳಿದಿಲ್ಲ. ಈ ಕಗ್ಗ ಸುಂದರ ಬದುಕಿನ ಸೂತ್ರಗಳನ್ನು ನೀಡುತ್ತದೆ. ಅದು ಝೆನ್ ಸಂತನ ಮಾತೇ. ಒಪ್ಪಿಕೊಂಡ ಕೆಲಸಕ್ಕೆ ತಕ್ಕ ದುಡಿತ, ನಾಳೆಯ ಬಗ್ಗೆ ತುಂಬ ತಲೆಕೆಡಿಸಿಕೊಳ್ಳುವುದು ಬೇಡ. ತಿಳಿಮನಸ್ಸಿನಿಂದ, ಪ್ರೀತಿಯಿಂದ ಮಾತನಾಡಿ ಹಗುರಗೊಳಿಸುವ ಸ್ನೇಹಿತರೊಡನಾಟ, ಆಡಂಬರಕ್ಕೆ ಮನಕೊಡದೆ, ಸರಳತೆಯಲ್ಲಿ ಪಟ್ಟ ತೃಪ್ತಿ ಮತ್ತು ಇವೆಲ್ಲವುಗಳಿಗಿಂತ ಮುಖ್ಯವಾಗಿ ಪರಮಾರ್ಥ ಚಿಂತನೆ ಇವುಗಳನ್ನು ಬದುಕಿನಲ್ಲಿ ಹೊಂದಿಸಿಕೊಂಡರೆ, ಬದುಕೇ ಒಂದು ಅದೃಷ್ಟ, ಪುಣ್ಯವಿಶೇಷ.

ಪದಬಂಧ 5170
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಳು ಇಲ್ಲಿಗೆ ಬಂದಿದ್ದಾನೆ (3)
3.ಅನ್ಯಮಾರ್ಗವು ಈ ತರಹ ಬಂದಿದೆ (4)
5.ಎಳ್ಳಿನಿಂದಿರಿಸಿದ ಬೊಟ್ಟು (3)
7.ಕಾಲಸೂಚಕ ಯಂತ್ರ (4)
9.ನಯವಾದ ನುಡಿ (4)
12.ಅಷ್ಟಮಿ ನಂತರದ ತಿಥಿ (3)
14.ಕನ್ನಡಿಗನಾಡಿರುವ ಚೆಸ್! (4)
15.ಇದು ಬಲು ಕಠಿಣವಾದುದು (3)

ಮೇಲಿಂದ ಕೆಳಕ್ಕೆ
1.ಗತಿಸಿದ ಹಿರಿಯರ ಹುಟ್ಟುಹಬ್ಬ (3)
2.ಇದು ಮೃತ್ಯುಲೋಕ (3)
3.ಎಲ್ಲೆಯ ಹತ್ತಿರ ತೋರಿದ ಅವಸರ (4)
4.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
6.ಭೋಜನ ಸಮಾರಂಭಕ್ಕೆ ಬೇಕಾಗುವ ಸಾಮಗ್ರಿ (4)
7.ಅಶ್ವವಿಲ್ಲಿ ಉಲ್ಟಾ ಪಲ್ಟಾ ನಿಂತಿದೆಯಲ್ಲಾ! (3)
8.ದೇವರನ್ನು ರಥದಲ್ಲಿ ಕೂರಿಸಿ ಮಾಡುವ ಮೆರವಣಿಗೆ (4)
10.ಆನೆಯನ್ನು ನಡೆಸುವವನು (4)
11.ಚೇಲನ ಕೈಯಲ್ಲಿರುವ ಸ್ಪೂನ್! (3)
12.ನಡುವೆಯೇ ಉಂಟಾದ ಕಂಪನ (3)
13.ಸೂರ್ಯ ಇಲ್ಲಿಯೇ ಕಾಣುತ್ತಿದ್ದಾನೆ (3)



5169ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭಯಂಕರ 3.ಮರೀಚಿಕೆ 5.ನಿಯಮ 7.ವರ್ತಕ9. ಅಂಬಿಗ 10.ರಸಿಕ 11.ಅಂಗದ 15.ಕಡುಮೋಹ 16.ವರಮಾನ.

ಮೇಲಿಂದ ಕೆಳಕ್ಕೆ:
1.ಭಗಿನಿ 2.ರಫ್ತು 3.ಮದುವಣಿಗ 4.ಕೆಚ್ಚು 6.ಯಥಾಪ್ರಕಾರ 8.ಕಸ್ತೂರಿಮೃಗ 9.ಅಂತಃಕಲಹ 12.ದಶನ 13.ಸುಂಕ 14.ಭಾವ

ಸುಡೊಕು 5556

	1				5	4		9
4		7	6				5	
	6				8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5555 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಪಿಎಸ್‌ಐ ಹಗರಣ: ಆರ್‌ಡಿ. ಪಾಟೀಲಗೆ ಜಾಮೀನು

ಕಲಬುರಗಿ: ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿಗಳಾದ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಸೊನ್ನ ಗ್ರಾಮದ ಆರ್‌.ಡಿ. ಪಾಟೀಲ ಹಾಗೂ ಅವರ ಅಣ್ಣ, ಕಾಂಗ್ರೆಸ್ ಮುಖಂಡ ಮಹಾಂತೇಶ ಪಾಟೀಲ ಅವರಿಗೆ ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠವು ಗುರುವಾರ ಜಾಮೀನು ಮಂಜೂರು ಮಾಡಿದೆ.

ಕೆಲ ದಿನಗಳ ಹಿಂದೆ ವಾದ– ಪ್ರತಿವಾದವನ್ನು ಆಲಿಸಿದ್ದ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ನ್ಯಾಯಪೀಠವು ಆದೇಶವನ್ನು ಗುರುವಾರಕ್ಕೆ ಕಾಯ್ದಿರಿಸಿತ್ತು.

ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ನಡೆದಿದ್ದ ಪಿಎಸ್‌ಐ ಪರೀಕ್ಷಾ ನೇಮಕಾತಿ ಹಗರಣದಲ್ಲಿ ಆರ್‌.ಡಿ. ಪಾಟೀಲ ಮತ್ತು ಮಹಾಂತೇಶ ಪಾಟೀಲ ತಮಗೆ ಹಣ ನೀಡಿದ ಅಭ್ಯರ್ಥಿಗಳಿಗೆ ಬ್ಲೂಟೂತ್ ಉಪಕರಣದ ಮೂಲಕ ಉತ್ತರ ಹೇಳಿಸಿ ಪಾಸ್ ಆಗುವಂತೆ ಮಾಡಿದ್ದರು. ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಇಬ್ಬರೂ ಮಹಾರಾಷ್ಟ್ರದಲ್ಲಿ ತಲೆಮರೆಸಿಕೊಂಡಿದ್ದರು.

ರಾಗಿ, ಭತ್ತ, ಜೋಳ ಖರೀದಿಗೆ ಆರಂಭವಾಗಬೇಕಾಗಿದ್ದ ಪ್ರಕ್ರಿಯೆ

ತಾಂತ್ರಿಕ ಅಡಚಣೆ: ನಡೆಯದ ನೋಂದಣಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಬೆಂಬಲ ಬೆಲೆ ಯೋಜನೆಯಡಿ ರಾಗಿ, ಭತ್ತ ಮತ್ತು ಜೋಳ ಖರೀದಿಗೆ ಗುರುವಾರದಿಂದ ಆರಂಭವಾಗಬೇಕಾಗಿದ್ದ ರೈತರ ಹೆಸರು ನೋಂದಣಿ ಪ್ರಕ್ರಿಯೆ ತಾಂತ್ರಿಕ ಸಮಸ್ಯೆಯಿಂದ ಆರಂಭವಾಗಲಿಲ್ಲ.

ಚಿಕ್ಕಬಳ್ಳಾಪುರ, ಗೌರಿಬಿದನೂರು, ಚಿಂತಾಮಣಿ, ಶಿಡ್ಲಘಟ್ಟ ಮತ್ತು ಗುಡಿಬಂಡೆ ಖರೀದಿ ಕೇಂದ್ರಗಳಿಗೆ ಬಂದ ರೈತರು ನೋಂದಣಿ ಆರಂಭವಾಗಿಲ್ಲ ಎನ್ನುವುದು ತಿಳಿದು ಬೇಸರದಿಂದ ವಾಪಸ್ ಆದರು.

'ತಾಂತ್ರಿಕ ಕಾರಣದಿಂದ ನೋಂದಣಿ ಆರಂಭವಾಗಿಲ್ಲ. ಕಂಪ್ಯೂಟರ್‌ಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

ಹೆದ್ದಾರಿ ತಡೆ: ರಾಗಿ ಖರೀದಿಗೆ ನೋಂದಣಿ ಪ್ರಕ್ರಿಯೆ ವಿಳಂಬ ಖಂಡಿಸಿ ರೈತರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಎಪಿಎಂಸಿ ಮಾರುಕಟ್ಟೆ ಆವರಣದ ರಾಗಿ ಖರೀದಿ ನೋಂದಣಿ ಕೇಂದ್ರದ ಮುಂದೆ ಬೆಳಿಗ್ಗೆ ಜಮಾವಣೆಗೊಂಡ ರೈತರು ಸಾಲುಗಟ್ಟಿ ನಿಂತಿದ್ದರು. ಹತ್ತು ಗಂಟೆಯ ನಂತರ ಸ್ಥಳಕ್ಕೆ ಬಂದ ಅಧಿಕಾರಿಗಳು ನೋಂದಣಿ ಕುರಿತು ರೈತರಿಗೆ ಸಮರ್ಪಕ ಮಾಹಿತಿ ನೀಡದೆ ಗೊಂದಲ ಉಂಟುಮಾಡಿದರು. ಇದರಿಂದ ಅಸಮಾಧಾನಗೊಂಡ ರೈತರು ನೋಂದಣಿ ಆರಂಭಿಸಬೇಕೆಂದು ಒತ್ತಾಯಿಸಿ ರಸ್ತೆ ತಡೆ ನಡೆಸಿದರು.

ಮಧ್ಯಾಹ್ನದ ನಂತರ ಸಾಸಲು ಹೋಬಳಿ ಕೇಂದ್ರ ಹಾಗೂ ನಗರದ ಎಪಿಎಂಸಿ ಕೇಂದ್ರದಲ್ಲಿ ಸಣ್ಣ ಹಿಡುವಳಿದಾರ ರೈತರ ಹೆಸರು ಮಾತ್ರ ನೋಂದಣಿ ಮಾಡಿಕೊಳ್ಳಲಾಯಿತು.



ದೊಡ್ಡಬಳ್ಳಾಪುರದಲ್ಲಿ ರಾಗಿ ಖರೀದಿಗೆ ನೋಂದಣಿ ಆರಂಭಿಸುವಂತೆ ರೈತರು ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿದರು

ಜೆಡಿಎಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಇಂದು

ರಾಮನಗರ: ರಾಮನಗರ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ಶ್ರೀನಿವಾಸ ಕಲ್ಯಾಣ ಕಾರ್ಯಕ್ರಮದ ನಂತರ ಜೆಡಿಎಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಮಾಗಡಿಯಲ್ಲಿ ಗುರುವಾರ ಸಂಜೆ ಜೆಡಿಎಸ್ ಪಂಚರತ್ನ ರಥಯಾತ್ರೆ ಅಂಗವಾಗಿ ವಿವಿಧ ದೇಗುಲಗಳಲ್ಲಿ ಪೂಜೆ ಸಲ್ಲಿಸಿದ ಸಂದರ್ಭ ಪತ್ರಕರ್ತರ ಜೊತೆ ಅವರು ಮಾತನಾಡಿದರು.

ದತ್ತ ಜಯಂತಿ ವೇಳೆ ಮೊಳೆ ಚೆಲ್ಲಿದ್ದ ಪ್ರಕರಣ: ಬಂಧನ

ಚಿಕ್ಕಮಗಳೂರು: ದತ್ತ ಜಯಂತ್ಯುತ್ಸವ ಸಂದರ್ಭದಲ್ಲಿ ತಾಲ್ಲೂಕಿನ ಗಿರಿ ಶ್ರೇಣಿ ರಸ್ತೆಯ ತಿರುವುಗಳಲ್ಲಿ ಮೊಳೆಗಳನ್ನು ಚೆಲ್ಲಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ದುಬ್ಬನಗರದ ಮಹಮ್ಮದ್ ಶಬಾನ್ (29) ಹಾಗೂ ವಾಹಿದ್ ಹುಸೇನ್ (21) ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಗಿರಿಶ್ರೇಣಿ ಮಾರ್ಗದಲ್ಲಿ ಮೊಳೆಗಳು ಸಿಕ್ಕಿದ್ದವು. ಇಬ್ಬರು ಆರೋಪಿಗಳು ನಗರದ ಹಾರ್ಡ್‌ ವೇರ್ ಅಂಗಡಿಯಲ್ಲಿ ಅದೇ ತರಹದ ನಾಲ್ಕು ಕೆ.ಜಿ ಮೊಳೆಗಳನ್ನು ಖರೀದಿಸಿದ್ದು ತನಿಖೆ ವೇಳೆ ಖಚಿತವಾಗಿದೆ. ಕೃತ್ಯದಲ್ಲಿ ಇನ್ನು ಕೆಲವರು ಶಾಮೀಲಾಗಿರುವುದು ಗೊತ್ತಾಗಿದೆ. ಆರೋಪಿಗಳು ತಲೆ ಮರೆಸಿಕೊಂಡಿದ್ದು, ಪತ್ತೆಗೆ ಪ್ರತ್ಯೇಕ ತಂಡವನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಜೆಪಿ ಕಚೇರಿಗಾಗಿ 2,120 ಚ.ಮೀ. ಜಾಗ ದೇಣಿಗೆ ಕೊಟ್ಟ ಆನಂದ್ ಸಿಂಗ್

ಹೊಸಪೇಟೆ (ವಿಜಯನಗರ): ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರ ಬಂಗ್ಲೆ ಸಮೀಪದ ನಗರದ ಭಟ್ರಹಳ್ಳಿ ಆಂಜನೇಯ ದೇವಸ್ಥಾನದ ಬಳಿ ವಿಜಯನಗರ ಜಿಲ್ಲಾ ಬಿಜೆಪಿ ಕಚೇರಿಗಾಗಿ 2,120.58 ಚದರ ಮೀಟರ್ ಜಾಗವನ್ನು ಆನಂದ್ ಸಿಂಗ್ ಅವರು ಬಿಜೆಪಿ ಕಚೇರಿಯ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ರೂಪದಲ್ಲಿ ಕೊಟ್ಟಿದ್ದಾರೆ.

ಸದ್ಯ ಇದರ ಮಾರುಕಟ್ಟೆಯ ಬೆಲೆ ₹12 ಕೋಟಿಗೂ ಅಧಿಕ ಎಂದು ಅಂದಾಜಿಸಲಾಗಿದೆ. ಕಟ್ಟಡ ನಿರ್ಮಾಣ ಕಾರ್ಯಕ್ಕೆ ಗುರುವಾರ ಭೂಮಿಪೂಜೆ ನೆರವೇರಿಸಲಾಯಿತು. ಬೆಳಿಗ್ಗೆ ಅರ್ಚಕರು ಸ್ಥಳದಲ್ಲಿ ಪೂಜಾ ಕೈಂಕರ್ಯ, ಹೋಮ ಹವನ ಮಾಡಿದರು. ಸಚಿವ ಆನಂದ್ ಸಿಂಗ್ ಸಾಂಕೇತಿಕವಾಗಿ ಶಿಲಾನ್ಯಾಸ ಮಾಡಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ವರ್ಚುವಲ್ ಮೂಲಕ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿದರು.



ಆನಂದ್ ಸಿಂಗ್ ಮಾತನಾಡಿ, 'ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪದ ಮಾದರಿಯಲ್ಲಿ ಬಿಜೆಪಿ ಕಚೇರಿ ನಿರ್ಮಿಸಲಾಗುವುದು. ಅತಿ ಶೀಘ್ರದಲ್ಲಿ ಕಟ್ಟಡ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸಲಾಗುವುದು. ಮುಂದಿನ ದಿನಗಳಲ್ಲಿ ವಿಜಯನಗರ ಉತ್ತರ ಕರ್ನಾಟಕದ ರಾಜಧಾನಿ ಆಗಲಿದೆ' ಎಂದು ಹೇಳಿದರು.

'ಸೋಂಕಿತರಿಗೆ ಪ್ರತ್ಯೇಕ ಡಯಾಲಿಸಿಸ್'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೈಲಹೊಂಗಲ ತಾಲ್ಲೂಕು ಆಸ್ಪತ್ರೆಯ ಡಯಾಲಿಸಿಸ್ ಯಂತ್ರದಲ್ಲಿ ಡಯಾಲಿಸಿಸ್ ಮಾಡಿಸಿದವರಿಗೆ ಮಾತ್ರ ಬಿಳಿ ಕಾಮಾಲೆ (ಎಚ್‌ಸಿವಿ) ಹರಡುತ್ತಿದೆ ಎನ್ನುವುದು ಸತ್ಯವಲ್ಲ. ಬಿಳಿ ಕಾಮಾಲೆ ಇದ್ದ ರೋಗಿಗಳಿಗೆ ಮಾತ್ರ ಅಲ್ಲಿ ಡಯಾಲಿಸಿಸ್ ಮಾಡಲಾಗುತ್ತಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ ಕೋಣಿ ಹೇಳಿದರು.

'ಪ್ರತಿ ಡಯಾಲಿಸಿಸ್ ಕೇಂದ್ರದಲ್ಲಿ ಎರಡು ಯಂತ್ರಗಳು ಇರಬೇಕು. ಹೆಪಟೈಟಸ್‌–ಬಿ, ಹೆಪಟೈಟಸ್‌–ಸಿ ಮತ್ತು ಎಚ್‌ಐಸಿ ಪಾಟಿಸಿವ್ ಇದ್ದವರಿಗೆ 1 ಪ್ರತ್ಯೇಕ ಯಂತ್ರ ಬಳಸಬೇಕು. ಆದರೆ, ನಮ್ಮ ಜಿಲ್ಲಾ ಆಸ್ಪತ್ರೆ ಅಥವಾ ಯಾವುದೇ ತಾಲ್ಲೂಕು ಆಸ್ಪತ್ರೆಗಳಲ್ಲಿ ಹೀಗೆ ಪ್ರತ್ಯೇಕ ಎರಡೆರಡು ಯಂತ್ರ ಇಲ್ಲ. ಬೈಲಹೊಂಗಲ ಹಾಗೂ ಅಥಣಿ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಾತ್ರ ತಲಾ 1 ಯಂತ್ರ ಇಡಲಾಗಿದೆ. ಅಲ್ಲಿ ಸೋಂಕಿತರಿಗೆ ಮಾತ್ರ ಡಯಾಲಿಸಿಸ್ ನಡೆಸಲಾಗುತ್ತದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.



ಡಾ.ಮಹೇಶ ಕೋಣಿ

'ಬೈಲಹೊಂಗಲದಲ್ಲಿ ಡಯಾಲಿಸಿಸ್ ಮಾಡಿದ ಕಾರಣಕ್ಕೆ ಎಚ್‌ಸಿವಿ ಸೋಂಕು ಹರಡಿದೆ, ಇದೇ ಕಾರಣಕ್ಕೆ 11 ಜನ ಸತ್ತಿದ್ದಾರೆ ಎಂದು ಹೇಳಲಾಗದು. ಏಕೆಂದರೆ ಇಲ್ಲಿ ಪಾಸಿಟಿವ್ ಇದ್ದವರನ್ನು ಮಾತ್ರ ಡಯಾಲಿಸಿಸ್‌ಗೆ ಒಳಪಡಿಸುತ್ತೇವೆ. ರೋಗ ನಿರೋಧಕ ಶಕ್ತಿ ಕಡಿಮೆ ಇದ್ದವರು ನಿಧನರಾಗಿರಬಹುದು' ಎಂದರು.

'ಡಯಾಲಿಸಿಸ್‌ಗೆ ಒಳಗಾಗುವವರಲ್ಲಿ ಶೇ 10ರಿಂದ 12ರಷ್ಟು ಮಂದಿಗೆ ಬಿಳಿ ಕಾಮಾಲೆ ಕಾಣಿಸಿಕೊಳ್ಳುವುದು ಸಹಜ. ಅತ್ಯಾಧುನಿಕ ಸೌಕರ್ಯದ ಯಂತ್ರವಿದ್ದರೂ ಇದು ಅಂಟಿಕೊಳ್ಳುತ್ತದೆ. ಜಿಲ್ಲೆಯಲ್ಲಿ ಈಗ ಡಯಾಲಿಸಿಸ್ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚಿರುವ ಕಾರಣ, ಇನ್ನಷ್ಟು ಯಂತ್ರಗಳಿಗೆ ಬೇಡಿಕೆ ಸಲ್ಲಿಸಿದ್ದೇವೆ. ಅಲ್ಲದೇ, ಆಯುಷ್ಮಾನ್ ಭಾರತ– ಆರೋಗ್ಯ ಕರ್ನಾಟಕ ಯೋಜನೆ ಅಡಿ ಕೆಎಲ್‌ಇ ಆಸ್ಪತ್ರೆಯಲ್ಲಿಯೂ ಉಚಿತವಾಗಿ ಡಯಾಲಿಸಿಸ್ ಮಾಡಿಸಲು ಯತ್ನ ನಡೆದಿದೆ' ಎಂದೂ ಅವರು ಪ್ರತಿಕ್ರಿಯಿಸಿದರು.

ಬ್ಯಾಗ್ ಹಿಡಿಯಲು ನೆರವಾದ ವ್ಯಕ್ತಿಗೆ ಹಲ್ಲೆ

ಬಂಟ್ವಾಳ (ದಕ್ಷಿಣ ಕನ್ನಡ): ಬಸ್‌ನಲ್ಲಿ ವಿದ್ಯಾರ್ಥಿನಿಗೆ ಕಿರುಕುಳ ನೀಡಿದ ಆರೋಪದ ಮೇಲೆ ಗಾರೆ ಕೆಲಸದ ಕಾರ್ಮಿಕರೊಬ್ಬರ ಮೇಲೆ ಮೂವರು ಹಲ್ಲೆ ನಡೆಸಿರುವ ಘಟನೆ ಇಲ್ಲಿನ ರಾಯಿ ಸಮೀಪದ ಕುದ್ಕೋಳಿ ಎಂಬಲ್ಲಿ ನಡೆದಿದೆ.

ತಲಪಾಡಿ ನಿವಾಸಿ ಇಸಾಕ್ (43) ಹಲ್ಲೆಗೊಳಗಾದವರು.

'ಬಿ.ಸಿ.ರೋಡ್‌ನಿಂದ ಮೂಡುಬಿದಿರೆ ಗಂಟಾಲ್‌ಕಟ್ಟೆ ಎಂಬಲ್ಲಿಗೆ ಕೆಲಸಕ್ಕೆ ಹೋಗಲು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಇಸಾಕ್ ಅವರ ಬಳಿ, ಸೀಟ್ ದೊರೆಯದೆ ನಿಂತುಕೊಂಡಿದ್ದ ವಿದ್ಯಾರ್ಥಿನಿಯೊಬ್ಬಳು ಬ್ಯಾಗ್ ಹಿಡಿದುಕೊಳ್ಳಲು ಕೊಟ್ಟಿದ್ದಾಳೆ. ಇದನ್ನು ಪ್ರಶ್ನಿಸಿದ ಬಸ್‌ನಲ್ಲಿದ್ದ ಇನ್ನೊಬ್ಬ ವ್ಯಕ್ತಿ, 'ನೀನು ಹುಡುಗಿಯರಿಗೆ ತೊಂದರೆ ಕೊಡುತ್ತೀಯಾ' ಎಂದು ಪ್ರಶ್ನಿಸಿ, ಬಸ್‌ನಿಂದ ಕೆಳಗೆ ಇಳಿಸಿ, ಇತರ ಇಬ್ಬರೊಂದಿಗೆ ಸೇರಿ ರಿಕ್ಷಾದಲ್ಲಿ ಇಸಾಕ್‌ನನ್ನು ಕರೆದುಕೊಂಡು ಹೋಗಿದ್ದಾರೆ. ರಾಯಿ ಸಮೀಪ ಮರದ ಕೆಳಗೆ ರಿಕ್ಷಾ ನಿಲ್ಲಿಸಿ, ಇಸಾಕ್ ಬೆನ್ನು, ಹೊಟ್ಟೆ, ಭುಜಕ್ಕೆ ಕೋಲಿನಿಂದ ಹೊಡೆದಿದ್ದಾರೆ. ಜನ ಸೇರಿದ್ದನ್ನು ಕಂಡು ಈ ಮೂವರು ಓಡಿ ಹೋಗಿದ್ದಾರೆ. ಗಾಯಾಳು ಪ್ರಸ್ತುತ ಮಂಗಳೂರಿನಲ್ಲಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚೇತನ್, ಮನೋಹರ್, ಕಿಶೋರ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್‌ಪಿ ಋಷಿಕೇಶ್ ಸೊನಾವಣೆ ತಿಳಿಸಿದ್ದಾರೆ.

ಕ್ರಮಕ್ಕೆ ಆಗ್ರಹ: 'ಬಿ.ಸಿ.ರೋಡ್‌ನಲ್ಲಿ ಇಸಾಕ್ ಎಂಬುವವರ ಮೇಲೆ ಕೆಲವು ಗೂಂಡಾಗಳು ಮಾರಣಾಂತಿಕ ಹಲ್ಲೆ ನಡೆಸಿರುವುದು ಖಂಡನೀಯ. ತಿಂಗಳಲ್ಲಿ ಇಂತಹ 4 ಪ್ರಕರಣಗಳು ನಡೆದಿವೆ. ಮತೀಯ ಗೂಂಡಾಗಿರಿ ಮಟ್ಟ ಹಾಕಲು ಕ್ರಮ ಕೈಗೊಳ್ಳಬೇಕು' ಎಂದು ಮಾಜಿ ಶಾಸಕ ಮೊಹಿಯುದ್ದೀನ್ ಬಾವಾ ಆಗ್ರಹಿಸಿದ್ದಾರೆ.

ಹೆಜ್ಜೇನು ದಾಳಿ: ರಕ್ಷಣೆಗೆ ಸಮುದ್ರಕ್ಕೆ ಹಾರಿದ ವ್ಯಕ್ತಿ ಸಾವು

ಪಡುಬಿದ್ರಿ (ಉಡುಪಿ ಜಿಲ್ಲೆ): ಪಡುಬಿದ್ರಿ ಬೀಚ್ ಬಳಿ ಗುರುವಾರ ಹೆಜ್ಜೇನು ದಾಳಿಯಿಂದ ರಕ್ಷಿಸಿಕೊಳ್ಳಲು ಸಮುದ್ರಕ್ಕೆ ಹಾರಿದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಸ್ಥಳೀಯ ಮೀನುಗಾರ ವಾಸುದೇವ ಡಿ. ಸಾಲ್ಯಾನ್ (65) ಮೃತರು. ಹೆಜ್ಜೇನು ದಾಳಿಯಿಂದ ಸ್ಥಳೀಯ ಚಂದ್ರಶೇಖರ್ ಮತ್ತು ಶಂಕರ ಅಮೀನ್ ಎಂಬುವರು ಗಾಯಗೊಂಡಿದ್ದು, ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪಡುಬಿದ್ರಿ ಬೀಚ್ ಸಮೀಪ ನಡೆದುಕೊಂಡು ಹೋಗುತಿದ್ದ ವೇಳೆ ಹೆಜ್ಜೇನು ದಾಳಿ ನಡೆಸಿದೆ. ಈ ವೇಳೆ ರಕ್ಷಿಸಿಕೊಳ್ಳಲು ವಾಸುದೇವ ಅವರು ಸಮುದ್ರಕ್ಕೆ ಹಾರಿದ್ದರು. ನೀರಿನಿಂದ ಮೇಲೆ ಬರಲಾಗದೆ ಅವರು ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ಬೀಚ್ ಪರಿಸರದಲ್ಲಿ ಗುರುವಾರ ಬೆಳಿಗ್ಗೆಯಿಂದ ಹೆಜ್ಜೇನು ಸುತ್ತುತ್ತಿದ್ದವು. ಅದನ್ನು ನೋಡಿ ಹಲವು ಮಂದಿ ಅಲ್ಲಿಂದ ಓಡಿದ್ದರು.

ನಿಧನ ವಾರ್ತೆ

ಮಾಜಿ ಶಾಸಕ ಎಸ್‌.ಎನ್‌. ಪಾಟೀಲ



ಲಕ್ಷ್ಮೇಶ್ವರ (ಗದಗ ಜಿಲ್ಲೆ): ಸಮೀಪದ ಪುಟಗಾಂವ್ ಗ್ರಾಮದ ನಿವಾಸಿ, ಶಿರಹಟ್ಟಿ ಕ್ಷೇತ್ರದ ಮಾಜಿ ಶಾಸಕ ಶಂಕರಗೌಡ ಎನ್. ಪಾಟೀಲ (81) ಗುರುವಾರ ನಿಧನರಾದರು.

ಅನಾರೋಗ್ಯದಿಂದಾಗಿ ಅವರನ್ನು ಹುಬ್ಬಳ್ಳಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು. ಸಂಜೆ ಅಂತ್ಯಕ್ರಿಯೆ ನಡೆಯಿತು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. 1989-1994ರ ಅವಧಿಯಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದರು. ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಕೃಷಿ, ನೀರಾವರಿ, ಆರೋಗ್ಯ, ಸಾರಿಗೆ, ಶಿಕ್ಷಣ ಸೇರಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದರು.

ಗಮನ ಬೇರೆಡೆ ಸೆಳೆಯಲು ಕುಕ್ಕರ್ ಸ್ಫೋಟ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ದತ್ತಾಂಶ ಕಳವು ಪ್ರಕರಣದಿಂದ ಜನರ ಗಮನ ಬೇರೆಡೆಗೆ ಸೆಳೆಯಲು ರಾಜ್ಯ ಬಿಜೆಪಿ ಸರ್ಕಾರ ಕುಕ್ಕರ್ ಬಾಂಬ್ ಸ್ಫೋಟ ಮಾಡಿಸಿದೆ' ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪ, ಬಿಜೆಪಿ ನಾಯಕರನ್ನು ಕೆರಳಿಸಿದೆ.

ಮಂಗಳೂರಿನಲ್ಲಿ ನಡೆದಿದ್ದ ಕುಕ್ಕರ್ ಸ್ಫೋಟ ಪ್ರಕರಣವನ್ನು ಗುರುವಾರ ಮಾಧ್ಯಮ ಸಂವಾದದಲ್ಲಿ ಪ್ರಸ್ತಾಪಿಸಿದ ಶಿವಕುಮಾರ್, 'ಉಗ್ರ ಎಲ್ಲಿಂದ ಬಂದು ಸ್ಫೋಟ ಮಾಡಿದ? ಪೊಲೀಸ್ ಮಹಾನಿರ್ದೇಶಕರು ಆತುರದಲ್ಲಿ ಭಯೋತ್ಪಾದಕ ಕೃತ್ಯವೆಂದರು' ಎಂದು ದೂರಿದರು.

'ತನಿಖೆಗೂ ಮೊದಲೇ ಅಧಿಕಾರಿಗಳು ಭಯೋತ್ಪಾದಕ ಕೃತ್ಯ ಎಂದು ಹೇಗೆ ಘೋಷಿಸಿದರು? ಹಿಂದೆ ಯಾವ ಉಗ್ರನಿದ್ದಾನೆ. ಯಾವ ಸಂಘಟನೆ ಇದೆ. ಯಾರ ವಿರುದ್ಧ ಯಾವ ಕ್ರಮ ಕೈಗೊಂಡಿದ್ದಾರೆ. ತನಿಖೆ ಏನಾಯಿತು' ಎಂದು ಪ್ರಶ್ನಿಸಿದರು.

ಅವರು, 'ಮತ ಮಾಹಿತಿ ಕಳವು ಪ್ರಕರಣವನ್ನು ಮುಚ್ಚಿಹಾಕಲು ಈ ಷಡ್ಯಂತ್ರ ರೂಪಿಸಿದ್ದಾರೆ' ಎಂದರು. 'ಇಲ್ಲಿ ದೆಹಲಿ, ಮುಂಬೈ, ಜಮ್ಮುಕಾಶ್ಮೀರ, ಪುಲ್ವಾಮ ಥರದ ದಾಳಿ ಆಗಿಲ್ಲ. ಆ ಥರ ಉಗ್ರರ ದಾಳಿ ಮಂಗಳೂರಿನಲ್ಲಿ ಮಾಡಿದ್ದಾರಾ' ಎಂದೂ ಪ್ರಶ್ನಿಸಿದರು.

ತಮ್ಮ ಹೇಳಿಕೆಗೆ ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಸಿಡಿಮಿಡಿಗೊಂಡ ಡಿ.ಕೆ.ಶಿವಕುಮಾರ್, 'ನಾನು ಯಾರ ಕ್ಷಮೆಯನ್ನೂ ಕೇಳುವುದಿಲ್ಲ. ಸ್ಫೋಟ ಪ್ರಕರಣವನ್ನು ಸಮರ್ಥಿಸಿಕೊಳ್ಳುವುದಿಲ್ಲ. ಘಟನೆ ನಡೆದಿದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಯಾವ ಉಗ್ರರಿಗೂ ಬೆಂಬಲವಿಲ್ಲ. ಅದನ್ನು ವೈಭವೀಕರಿಸಿದ್ದು ಸರಿಯಲ್ಲ. ಬಿಜೆಪಿಯವರು ಭ್ರಷ್ಟಾಚಾರ ಮುಚ್ಚಿಕೊಳ್ಳಲು ಅಧಿಕಾರಿಗಳನ್ನು ಬಳಸಿಕೊಂಡರು' ಎಂದರು.

> **ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗಳ ಕುರಿತು ಅನುಕಂಪ ವ್ಯಕ್ತಪಡಿಸುವ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿಯಾಗಿ ಪರಿಣಮಿಸಿದ್ದಾರೆ**
> **ವಿ.ಸುನಿಲ್ ಕುಮಾರ್,** ಇಂಧನ ಸಚಿವ
>
> **'ಡಿ.ಕೆ. ಶಿವಕುಮಾರ್ ಅವರ ಈ ಹೇಳಿಕೆ ಹೇಡಿತನದ್ದು. ಅವರು ಮೊದಲು ರಾಜ್ಯದ ಜನರಲ್ಲಿ ಕ್ಷಮೆ ಕೇಳಬೇಕು. ರಾಷ್ಟ್ರದ ಭದ್ರತೆ ಪ್ರಶ್ನೆ ಬಂದಾಗ ಏಕತೆ ಪ್ರದರ್ಶಿಸಬೇಕು.**
> **ಆರ್.ಅಶೋಕ,** ಕಂದಾಯ ಸಚಿವ
>
> **ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಒಬ್ಬ ಭಯೋತ್ಪಾದಕ. ದೇಶದ ಆಂತರಿಕ ಭದ್ರತೆಯ ವಿಚಾರವಿದು. ಜವಾಬ್ದಾರಿ ಸ್ಥಾನದಲ್ಲಿರುವ ವ್ಯಕ್ತಿಗಳು ಆಡುವ ಮಾತಲ್ಲ**
> **ಆರಗ ಜ್ಞಾನೇಂದ್ರ,** ಗೃಹ ಸಚಿವ

ಮಹಿಳೆಯರ ಹಕ್ಕುಗಳ ವ್ಯವಸ್ಥಿತ ಉಲ್ಲಂಘನೆ ಆರೋಪ

ವಿಶ್ವಸಂಸ್ಥೆ ಸಮಿತಿಯಿಂದ ಇರಾನ್‌ಗೆ ಕೊಕ್

ವಿಶ್ವಸಂಸ್ಥೆ (ಎ.ಪಿ): ಮಹಿಳೆಯರು, ಬಾಲಕಿಯರ ಹಕ್ಕುಗಳ ವ್ಯವಸ್ಥಿತ ಉಲ್ಲಂಘನೆಯಾಗುತ್ತಿದೆ ಎಂಬ ಆರೋಪದಡಿ ಲಿಂಗ ಸಮಾನತೆ ಮತ್ತು ಮಹಿಳೆಯರ ಸಬಲೀಕರಣ ಹಕ್ಕುಗಳಿಗೆ ಹೋರಾಡುವ ಜಾಗತಿಕ ಸಮಿತಿಯಿಂದ ಇರಾನ್ ಅನ್ನು ವಿಶ್ವಸಂಸ್ಥೆ ಮಂಡಳಿಯು ಕೈಬಿಟ್ಟಿದೆ.

'ಇದೊಂದು ಐಸಿಹಾಸಿಕ ನಿರ್ಧಾರ' ಎಂದು ಬಣ್ಣಿಸಲಾಗಿದೆ. ಈ ಬಗ್ಗೆ ನಿರ್ಣಯ ಅಂಗೀಕರಿಸಿದ ವಿಶ್ವಸಂಸ್ಥೆ ಸಾಮಾಜಿಕ ಮತ್ತು ಆರ್ಥಿಕ ಮಂಡಳಿ ಸಭೆಯಿಂದ ಭಾರತ ಹೊರಗುಳಿಯಿತು. 'ಇದು ತಿರುಚಲಾದ ಆರೋಪಗಳನ್ನು ಆಧರಿಸಿದ ನಿರ್ಧಾರ' ಎಂದು ಇರಾನ್ ಪ್ರತಿಕ್ರಿಯಿಸಿದೆ.

ಅಮೆರಿಕ ಈ ಕುರಿತ ನಿರ್ಣಯವನ್ನು ಮಂಡಿಸಿತ್ತು. ಇರಾನ್‌ನಲ್ಲಿ ನೈತಿಕ ಪೊಲೀಸರ ವಶದಲ್ಲಿದ್ದ 22 ವರ್ಷದ ಯುವತಿಯು ಶಂಕಾಸ್ಪದವಾಗಿ ಮೃತಪಟ್ಟಿದ್ದನ್ನು ಖಂಡಿಸಿ ದೇಶದಾದ್ಯಂತ ನಡೆಯುತ್ತಿದ್ದ ಶಾಂತಿಯುತ ಪ್ರತಿಭಟನೆಯನ್ನು ಹತ್ತಿಕ್ಕಲು ಇರಾನ್ ಕಠಿಣ ಕ್ರಮಕೈಗೊಂಡಿತ್ತು.

ಇರಾನ್‌ನ ಮಾನವ ಹಕ್ಕುಗಳ ಕಾರ್ಯಕರ್ತರ ಪ್ರಕಾರ, ಪ್ರತಿಭಟನೆ ಹತ್ತಿಕ್ಕುವ ಸಂಬಂಧ ನಡೆದಿದ್ದ ಹಿಂಸಾತ್ಮಕ ಕೃತ್ಯಗಳಲ್ಲಿ 488 ಪ್ರತಿಭಟನಕಾರರು ಮೃತಪಟ್ಟಿದ್ದರು. ಭದ್ರತಾ ಪಡೆಗಳು ಸುಮಾರು 18,200 ಪ್ರತಿಭಟನಕಾರರನ್ನು ವಶಕ್ಕೆ ಪಡೆದಿದ್ದವು.

ವಿಶ್ವಸಂಸ್ಥೆ ಸಾಮಾಜಿಕ ಮತ್ತು ಆರ್ಥಿಕ ಮಂಡಳಿ (ಇಸಿಒಎಸ್‌ಒಸಿ) ಸದಸ್ಯ ಬಲ 54 ಆಗಿದೆ. ಇರಾನ್ ಕೈಬಿಡುವ ನಿರ್ಣಯದ ಪರ 29, ವಿರುದ್ಧವಾಗಿ 8 ರಾಷ್ಟ್ರಗಳು ಮತಹಾಕಿದವು. 16 ರಾಷ್ಟ್ರಗಳು ಮತದಾನದಿಂದ ಹೊರಗುಳಿದವು. ಇರಾನ್ ಸದಸ್ಯತ್ವ 2026ರವರೆಗೆ ಇತ್ತು.

'ಇದು ಐತಿಹಾಸಿಕ ನಿರ್ಧಾರ. ಸಕಾಲಿಕ ಕ್ರಮ ಕೈಗೊಳ್ಳಲಾಗಿದೆ. ಈ ನಿರ್ಧಾರದ ಮೂಲಕ ಇರಾನ್ ಸರ್ಕಾರಕ್ಕೆ ಸ್ಪಷ್ಟ ಸಂದೇಶವನ್ನು ರವಾನಿಸಲಾಗಿದೆ' ಎಂದು ವಿಶ್ವಸಂಸ್ಥೆಯ ರಾಯಭಾರಿ ಲಿಂಡಾ ಥಾಮಸ್ ಅಭಿಪ್ರಾಯಪಟ್ಟರು.

ನಿರ್ಣಯದ ಮೇಲಿನ ಮತದಾನ ಪ್ರಕ್ರಿಯೆಯಿಂದ ಭಾರತ ಸೇರಿದಂತೆ ಒಟ್ಟು 16 ರಾಷ್ಟ್ರಗಳು ಹೊರಗುಳಿದವು.

ಕಾನೂನು ಹೋರಾಟ: ನೀರವ್‌ಗೆ ಹಿನ್ನಡೆ

ಲಂಡನ್ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾರತಕ್ಕೆ ಬೇಕಾಗಿದ್ದು, ಲಂಡನ್‌ನಲ್ಲಿ ಬಂಧನದಲ್ಲಿರುವ ವಜ್ರದ ಉದ್ಯಮಿ ನೀರವ್ ಮೋದಿ ಅವರಿಗೆ ಕಾನೂನು ಹೋರಾಟದಲ್ಲಿ ಹಿನ್ನಡೆಯಾಗಿದೆ.

ತಮ್ಮ ವಿರುದ್ಧದ ಗಡೀಪಾರು ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಇಲ್ಲಿನ ಹೈಕೋರ್ಟ್ ಅನುಮತಿ ನಿರಾಕರಿಸಿದೆ.

ಭಾರತಕ್ಕೆ ತಮ್ಮ ಹಸ್ತಾಂತರ ಪ್ರಶ್ನಿಸಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಲಂಡನ್‌ನ ರಾಯಲ್ ಕೋರ್ಟ್ ಆಫ್ ಜಸ್ಟೀಸ್ ಈ ಕುರಿತು ತೀರ್ಪು ನೀಡಿದೆ. ಅಲ್ಲದೆ ಕಾನೂನು ವೆಚ್ಚದ ಹಣವನ್ನು ಭರಿಸಬೇಕು ಎಂದು ಆದೇಶಿಸಿದೆ.

'ಸಂಸ್ಕೃತದ ಪಾಣಿನಿ ಸೂತ್ರಗಳಿಗೆ ಕಡೆಗೂ ಪರಿಹಾರ'

ಲಂಡನ್ (ಪಿಟಿಐ): ಸುಮಾರು 2,500 ವರ್ಷ ಹಳೆಯದಾದ, ಸಂಸ್ಕೃತ ಭಾಷೆಯ ವ್ಯಾಕರಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಭಾರತದ ಪಿಎಚ್‌.ಡಿ ವಿದ್ಯಾರ್ಥಿಯೊಬ್ಬರು ಈಗ ಬಗೆಹರಿಸಿದ್ದಾರೆ.

ಸಂಸ್ಕೃತ ಭಾಷಾತಜ್ಞರಿಗೆ 5ನೇ ಶತಮಾನದಿಂದಲೂ ಇದು ಸವಾಲಾಗಿತ್ತು ಎನ್ನಲಾಗಿದೆ. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಅಧ್ಯಯನ ಕೈಗೊಂಡಿರುವ ರಿಷಿ ರಾಜ್‌ಪೋಪಟ್ ಈ ಸಾಧನೆ ಮಾಡಿದ್ದಾರೆ. ವ್ಯಾಕರಣದ ಈ ಸಮಸ್ಯೆಗೆ ರಿಷಿ ಅವರು ಕಂಡುಹಿಡಿದ ಪರಿಹಾರವನ್ನು ಒಳಗೊಂಡಿರುವ ಈ ಪ್ರೌಢಪ್ರಬಂಧವನ್ನು ಪ್ರಕಟಿಸಲಾಗಿದೆ.

ಪಾಣಿನಿ ಸಂಸ್ಕೃತ ಪಂಡಿತ. ವ್ಯಾಕರಣಕ್ಕೆ ಮೂಲಾಧಾರವಾದ ಸೂತ್ರಗಳನ್ನು ಕುರಿತ ಇವರ ಗ್ರಂಥ 'ಅಷ್ಟಾಧ್ಯಾಯಿ'ಯಲ್ಲಿನ ಸಮಸ್ಯೆಗಳಿಗೆ ರಿಷಿ ಈಗ ಪರಿಹಾರ ಹುಡುಕಿದ್ದಾರೆ. ಈಗ ಪಾಣಿನಿ ಸೂತ್ರಗಳನ್ನು ಕೂಡ ಕಂಪ್ಯೂಟರ್‌ನಲ್ಲಿ ಅಳವಡಿಸಬಹುದಾಗಿದೆ ಎಂದು ವಿಶ್ವವಿದ್ಯಾಲಯ ತಿಳಿಸಿದೆ.

'ಪ್ರಮುಖ ಸಂಸ್ಕೃತ ವಿದ್ವಾಂಸರು ರಿಷಿ ಅವರ ಸಂಶೋಧನೆಯನ್ನು ಕ್ರಾಂತಿಕಾರಕ ಎಂದು ಬಣ್ಣಿಸಿದ್ದಾರೆ' ಎಂದೂ ವಿ.ವಿ ಹೇಳಿದೆ.


'ನನ್ನ ಪಾಲಿಗೆ ಅದು ಅವಿಸ್ಮರಣೀಯ ಕ್ಷಣವಾಗಿತ್ತು' ಎಂದು 27 ವರ್ಷದ ರಿಷಿ ಪ್ರತಿಕ್ರಿಯಿಸಿದ್ದಾರೆ. ಪ್ರಾಚೀನ ಭಾಷೆಯಾದ ಸಂಸ್ಕೃತ ಸದ್ಯ ಭಾರತದಲ್ಲಿ ಮಾತ್ರ ಬಳಕೆಯಲ್ಲಿದೆ. ಸುಮಾರು 25 ಸಾವಿರ ಜನರು ಬಳಸುತ್ತಿದ್ದಾರೆ ಎನ್ನಲಾಗಿದೆ. ವಿಶ್ವದಾದ್ಯಂತ ಹಲವು ಭಾಷೆ, ಸಂಸ್ಕೃತಿಯ ಮೇಲೆ ಇದರ ಪ್ರಭಾವವಿದೆ.

ಕಾಶ್ಮೀರ ವಿಷಯ ಪ್ರಸ್ತಾಪ ಪಾಕ್‌ಗೆ ಭಾರತದ ತಿರುಗೇಟು

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿದ ಪಾಕಿಸ್ತಾನಕ್ಕೆ ಭಾರತ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ಉಗ್ರ ಒಸಾಮಾ ಬಿನ್ ಲಾಡೆನ್‌ಗೆ ಆತಿಥ್ಯ ನೀಡಿದ್ದ ಮತ್ತು ಭಾರತದ ಸಂಸತ್ತಿನ ಮೇಲೆ ದಾಳಿ ಮಾಡಿದ ದೇಶಕ್ಕೆ ವಿಶ್ವಸಂಸ್ಥೆಯಲ್ಲಿ ಉಪದೇಶ ನೈತಿಕತೆ ಇಲ್ಲ ಎಂದು ಭಾರತ ಪ್ರತಿಪಾದಿಸಿದೆ.

ಬುಧವಾರ ಭದ್ರತಾ ಮಂಡಳಿಯಲ್ಲಿ ಸುಧಾರಿತ ಬಹುಪಕ್ಷೀಯತೆ ಕುರಿತ ಚರ್ಚೆ ವೇಳೆ ಪಾಕ್‌ನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಕಾಶ್ಮೀರ ವಿಷಯ ಪ್ರಸ್ತಾಪಿಸಿದ್ದರು. ಇದಕ್ಕೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಉಗ್ರ ಲಾಡೆನ್ ಪಾಕ್‌ನಲ್ಲಿ ನೆಲೆ ಕಂಡುಕೊಂಡಿದ್ದ. ಪಾಕ್ ಮೂಲದ ಉಗ್ರರು 2001ರಲ್ಲಿ ಭಾರತದ ಸಂಸತ್ತಿನ ಮೇಲೆ ದಾಳಿ ಮಾಡಿದ್ದರು. ಹೀಗೆ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ದೇಶಕ್ಕೆ ವಿಶ್ವಸಂಸ್ಥೆಯಲ್ಲಿ ಉಪದೇಶ ಮಾಡುವ ಅರ್ಹತೆ ಇಲ್ಲ' ಎಂದು ಜೈಶಂಕರ್ ವಾಗ್ದಾಳಿ ನಡೆಸಿದರು.



ಮೊದಲ ಅವಧಿಯಲ್ಲೇ ಮೂರು ಬಾರಿ ಕಲಾಪಕ್ಕೆ ಅಡ್ಡಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದೂ ಸೇರಿದಂತೆ ವಿವಿಧ ವಿಷಯಗಳ ಕುರಿತ ಚರ್ಚೆಗೆ ನಿಯಮ 267ರ ಅಡಿಯಲ್ಲಿ ಅವಕಾಶ ನೀಡುವಂತೆ ಕೋರಿ ವಿರೋಧ ಪಕ್ಷಗಳು ಮಂಡಿಸಿದ ನಿಲುವಳಿ ಸೂಚನೆಯನ್ನು ಉಪ ಸಭಾಪತಿ ತಿರಸ್ಕರಿಸಿದ್ದರಿಂದ ರಾಜ್ಯಸಭೆಯಲ್ಲಿ ಗುರುವಾರ ಗದ್ದಲದ ವಾತಾವರಣ ನಿರ್ಮಾಣವಾಗಿತ್ತು.

ನ್ಯಾಯಾಂಗದ ನೇಮಕಾತಿಯಲ್ಲಿ ಸರ್ಕಾರದ ಹಸ್ತಕ್ಷೇಪ, ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲುಗೊಳಿಸಲು ನಡೆಸುತ್ತಿರುವ ಹುನ್ನಾರದ ಕುರಿತ ಚರ್ಚೆಗೆ ಅವಕಾಶ ನೀಡುವಂತೆ ಆಮ್ ಆದ್ಮಿ ಪಕ್ಷದ ರಾಘವ್ ಚಡ್ಡಾ, ಕಾಂಗ್ರೆಸ್‌ನ ಪ್ರಮೋದ್ ತಿವಾರಿ, ಅಖಿಲೇಶ್ ಪ್ರಸಾದ್ ಸಿಂಗ್, ಎಲ್. ಹನುಮಂತಯ್ಯ, ಜೆಬಿ ಮಥೇರ್, ಸೈಯದ್ ನಾಸೀರ್ ಹುಸೇನ್ ಹಾಗೂ ಶಿವಸೇನಾದ ಪ್ರಿಯಾಂಕ ಚತುರ್ವೇದಿ ಅವರು ನಿಲುವಳಿ ಸೂಚನೆ ಮಂಡಿಸಿದ್ದರು.

ಸದನದ ಏಳು ಸದಸ್ಯರು ನೀಡಿರುವ ನೋಟಿಸ್‌ಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಉಪಸಭಾಪತಿ ಹರಿವಂಶ್ ತಿಳಿಸಿದರು. ಈ ಕುರಿತು ಸ್ಪಷ್ಟನೆ ನೀಡುವಂತೆ ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದರು. ನಿಲುವಳಿ ಸೂಚನೆ ಅಂಗೀಕರಿಸುವಂತೆ ಒತ್ತಾಯಿಸಿ ಸದನದಲ್ಲಿ ಕೋಲಾಹಲ ಸೃಷ್ಟಿಸಿದರು. ಘೋಷಣೆಗಳನ್ನೂ ಕೂಗಿದರು. ಹೀಗಾಗಿ ಮೊದಲ ಅವಧಿಯಲ್ಲೇ ಮೂರು ಬಾರಿ ಕಲಾಪ ಮುಂದೂಡಲ್ಪಟ್ಟಿತು.

ಶೂನ್ಯ ವೇಳೆಯ ಕಲಾಪ ನಡೆಸಲು ಸಹಕರಿಸುವಂತೆ ಉಪ ಸಭಾಪತಿ ಕೋರಿದರು. ಇದಕ್ಕೆ ವಿರೋಧ ಪಕ್ಷಗಳ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಸಂಸತ್ತು ಅಧಿವೇಶನ

ಚೀನಾ ಮೇಲೆ ಕೆಂಗಣ್ಣು ಬೀರುವುದು ಯಾವಾಗ: ಅಧೀರ್ ರಂಜನ್ ಚೌಧರಿ ಪ್ರಶ್ನೆ

'ಮೋದಿ ಸರ್ಕಾರವು ಚೀನಾ ಮೇಲೆ ಕೆಂಗಣ್ಣು ಬೀರುವುದು ಯಾವಾಗ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಪ್ರಶ್ನಿಸಿದ್ದಾರೆ.

ಅರುಣಾಚಲಪ್ರದೇಶದಲ್ಲಿ ಉಂಟಾಗಿರುವ ಭಾರತ–ಚೀನಾ ಸೇನಾ ಸಂಘರ್ಷದ ವಿಚಾರವನ್ನು ಗುರುವಾರ ಲೋಕಸಭೆಯಲ್ಲಿ ಪ್ರಸ್ತಾಪಿಸಿದ ಅವರು ಆಡಳಿತಾರೂಢ ಪಕ್ಷದ ವಿರುದ್ಧ ಹರಿಹಾಯ್ದರು.

ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, 'ಚೀನಾವು ಭಾರತವನ್ನು ನಾಶಪಡಿಸಲು ಪ್ರಯತ್ನಿಸುತ್ತಿದೆ. ದೆಹಲಿ ಏಮ್ಸ್‌ನ ಸರ್ವರ್‌ಗಳ ಮೇಲೆ ನಡೆದಿರುವ ಸೈಬರ್ ದಾಳಿಯಲ್ಲಿ ಚೀನಾ ಪಾತ್ರ ಇರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಈ ವಿಚಾರಗಳ ಕುರಿತು ಚರ್ಚೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ರಾಜ್ಯಸಭೆಗೆ ಕಾನೂನು ಸಚಿವ ಕಿರಣ್ ರಿಜಿಜು ಉತ್ತರ

ಹೊಸ ಪದ್ಧತಿ ಅಸ್ತಿತ್ವಕ್ಕೆ ಬರುವವರೆಗೂ ಖಾಲಿ ಹುದ್ದೆ ಸಮಸ್ಯೆ ಬಗೆಹರಿಯದು


ಕಿರಣ್ ರಿಜಿಜು

ನವದೆಹಲಿ (ಪಿಟಿಐ): 'ಹೊಸ ಪದ್ಧತಿ ಅನುಷ್ಠಾನಗೊಳ್ಳುವವರೆಗೂ ಉನ್ನತ ನ್ಯಾಯಾಲಯಗಳಲ್ಲಿನ ಖಾಲಿ ಹುದ್ದೆ ಹಾಗೂ ನೇಮಕಾತಿ ಸಮಸ್ಯೆ ಹೀಗೆ ಮುಂದುವರಿಯಲಿದೆ' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ರಾಜ್ಯಸಭೆಗೆ ಗುರುವಾರ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಅವರು, 'ನ್ಯಾಯಮೂರ್ತಿಗಳ ನೇಮಕಾತಿ ವಿಚಾರದಲ್ಲಿ ಕೇಂದ್ರ ಸರ್ಕಾರವು ಸೀಮಿತ ಅಧಿಕಾರ ಹೊಂದಿದೆ' ಎಂದು ಹೇಳಿದ್ದಾರೆ.

'ಹೈಕೋರ್ಟ್‌ಗಳಿಗೆ 1,108 ನ್ಯಾಯಮೂರ್ತಿಗಳ ಹುದ್ದೆ ಮಂಜೂರಾಗಿದೆ. ಡಿಸೆಂಬರ್ 9ರ ವರೆಗಿನ ಮಾಹಿತಿ ಪ್ರಕಾರ 777 ನ್ಯಾಯಮೂರ್ತಿಗಳಷ್ಟೇ ಕಾರ್ಯನಿರ್ವಹಿಸುತ್ತಿದ್ದಾರೆ. ಶೇ 30 ರಷ್ಟು (331) ಹುದ್ದೆಗಳು ಖಾಲಿ ಇವೆ. ಸುಪ್ರೀಂ ಕೋರ್ಟ್‌ನಲ್ಲಿನ ನ್ಯಾಯಮೂರ್ತಿಗಳ ಸಂಖ್ಯೆ 34. ಆದರೆ ಕಾರ್ಯನಿರ್ವಹಿಸುತ್ತಿರುವವರು 27 ಮಂದಿ ಮಾತ್ರ' ಎಂದು ಮಾಹಿತಿ ನೀಡಿದ್ದಾರೆ.

'ವಿವಿಧ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳ ಸಂಖ್ಯೆ 5 ಕೋಟಿಯಷ್ಟಿದೆ. ಇದರಿಂದ ನಾಗರಿಕರ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವುದು ಸಹಜ. ಬಾಕಿ ಪ್ರಕರಣಗಳ ಸಂಖ್ಯೆ ತಗ್ಗಿಸುವ ದಿಸೆಯಲ್ಲಿ ಕೇಂದ್ರ ಸರ್ಕಾರ ವಿವಿಧ ಕ್ರಮಗಳನ್ನು ಕೈಗೊಂಡಿದೆ' ಎಂದಿದ್ದಾರೆ.

'ಖಾಲಿ ಇರುವ ಹುದ್ದೆಗಳ ಭರ್ತಿಗೆ ನ್ಯಾಯಮೂರ್ತಿಗಳ ಹೆಸರುಗಳನ್ನು ಆದಷ್ಟು ಬೇಗ ಶಿಫಾರಸು ಮಾಡುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹಾಗೂ ಹೈಕೋರ್ಟ್‌ಗಳಿಗೆ ಲಿಖಿತ ಹಾಗೂ ಮೌಖಿಕವಾಗಿ ಮನವಿ ಮಾಡಲಾಗಿದೆ. ಬಾಕಿ ಪ್ರಕರಣಗಳನ್ನು ತಗ್ಗಿಸಲು ಅಗತ್ಯವಿರುವ ಎಲ್ಲಾ ರೀತಿಯ ಬೆಂಬಲವನ್ನು ನಾವು ನೀಡುತ್ತಿದ್ದೇವೆ. ಹೊಸ ಪದ್ಧತಿಯೊಂದನ್ನು ಜಾರಿಗೊಳಿಸುವವರೆಗೂ ಖಾಲಿ ಹುದ್ದೆ ಹಾಗೂ ನೇಮಕಾತಿ ಸಮಸ್ಯೆ ಮುಂದುವರಿಯಲಿದೆ' ಎಂದಿದ್ದಾರೆ.

'ಜೋಡೊ ಯಾತ್ರೆ'ಗೆ ಇಂದು 100ನೇ ದಿನ

ಜೈಪುರ(ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ ಯಾತ್ರೆ'ಯು ಶುಕ್ರವಾರ ನೂರನೇ ದಿನಕ್ಕೆ ಕಾಲಿರಿಸಲಿದೆ.

ಕನ್ಯಾಕುಮಾರಿಯಿಂದ ಆರಂಭವಾಗಿದ್ದ ಯಾತ್ರೆಯು ಮೂರು ತಿಂಗಳ ಅವಧಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಆರೋಪ –ಪ್ರತ್ಯಾರೋಪಗಳಿಗೆ ವೇದಿಕೆಯಾಗಿತ್ತು. ರಾಹುಲ್ ಅವರು ಧರಿಸಿದ್ದ ಬರ್ಬೆರಿ ಟಿ-ಶರ್ಟ್ ಮತ್ತು ಅವರ ನೀಳ ಗಡ್ಡವು ಆರೋಪ ಹಾಗೂ ಅಣಕಗಳಿಗೂ ಕಾರಣವಾಗಿತ್ತು.

ರಾಹುಲ್ ಅವರು ಬೆಂಬಲಿಗರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದು, ಹಲವು ಮಂದಿ ಗಣ್ಯರೂ ಅವರೊಂದಿಗೆ ಹೆಜ್ಜೆ ಹಾಕಿದ್ದಾರೆ.

ಕಾವೇರಿ ಪ್ರಾಧಿಕಾರ: ರಾಜ್ಯಗಳ ಮಧ್ಯೆ ಮೂಡದ ಒಮ್ಮತ

ಚರ್ಚೆಗೆ ಬಾರದ ಮೇಕೆದಾಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಇಲ್ಲಿಯವರೆಗೆ ಒಮ್ಮತಕ್ಕೆ ಬಾರದ ಕಾರಣ ಮೇಕೆದಾಟು ಜಲಾಶಯ ನಿರ್ಮಾಣದ ವಿಚಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ (ಸಿಡಬ್ಲ್ಯುಎಂಎ) ಚರ್ಚೆಗೆ ಬಂದಿಲ್ಲ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ತಿಳಿಸಿದೆ.

ಸಂಸದ ಎ.ಗಣೇಶಮೂರ್ತಿ ಗುರುವಾರ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಜಲಶಕ್ತಿ ರಾಜ್ಯ ಸಚಿವ ಬಿಶ್ವೇಶ್ವರ ತುಡು, 'ಮೇಕೆದಾಟು ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಕರ್ನಾಟಕ ಸರ್ಕಾರವು ಸಲ್ಲಿಸಿತ್ತು. ಕೆಲವು ಷರತ್ತುಗಳನ್ನು ವಿಧಿಸಿ ಜಲ ಆಯೋಗವು ಕಾರ್ಯಸಾಧ್ಯತಾ ವರದಿಗೆ ಒಪ್ಪಿಗೆ ನೀಡಿತ್ತು. 'ಸುಪ್ರೀಂಕೋರ್ಟ್ ಮಾರ್ಪಾಡು ಮಾಡಿರುವ ಕಾವೇರಿ ಜಲ ವಿವಾದ ನ್ಯಾಯಾಧೀಕರಣದ ತೀರ್ಪಿನ ಅನ್ವಯವೇ ಈ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದು ಕಾರ್ಯಸಾಧ್ಯತಾ ವರದಿಯಲ್ಲಿ ತಿಳಿಸಲಾಗಿದೆ. ಯೋಜನೆಯ ಡಿಪಿಆರ್‌ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯಬೇಕು' ಎಂದು ಜಲ ಆಯೋಗವು ಸೂಚಿಸಿತ್ತು' ಎಂದಿದ್ದಾರೆ.

'ಕರ್ನಾಟಕ ಸರ್ಕಾರವು ಜಲ ಆಯೋಗಕ್ಕೆ 2019ರ ಜನವರಿಯಲ್ಲಿ ಡಿಪಿಆರ್ ಸಲ್ಲಿಸಿತ್ತು. ಅದರ ಪ್ರತಿಯನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ನೀಡಲಾಗಿತ್ತು. ರಾಜ್ಯಗಳು ಒಮ್ಮತಕ್ಕೆ ಬಾರದ ಕಾರಣ ಸಭೆಯಲ್ಲಿ ಚರ್ಚೆಗೆ ಬಂದಿಲ್ಲ' ಎಂದು ಸಚಿವರು ಉತ್ತರ ನೀಡಿದ್ದಾರೆ.

2022ರ ಅಕ್ಟೋಬರ್ 14ರಂದು ನಡೆದ ಪ್ರಾಧಿಕಾರದ 17ನೇ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಆಗ ಕರ್ನಾಟಕ ಸರ್ಕಾರದ ಪ್ರತಿನಿಧಿ, 'ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ವಿಚಾರ ಹಲವು ಸಲ ಸೇರ್ಪಡೆಯಾಗಿದೆ. ಬಳಿಕ ಅದನ್ನು ಕೈಬಿಡಲಾಗಿದೆ. 18ನೇ ಸಭೆಯ ಕಾರ್ಯಸೂಚಿಯಲ್ಲಿ ಮೇಕೆದಾಟು ವಿಷಯವನ್ನು ಸೇರ್ಪಡೆ ಮಾಡಬೇಕು' ಎಂದು ಮನವಿ ಮಾಡಿದ್ದರು. ಹೀಗಾಗಿ ಸೇರ್ಪಡೆ ಮಾಡಲು ತೀರ್ಮಾನಿಸಲಾಗಿತ್ತು ಎಂದರು.

ಮೇಕೆದಾಟು ಯೋಜನೆಗೆ ಅನುಮೋದನೆ ನೀಡುವಂತೆ ಕರ್ನಾಟಕದ ವತಿಯಿಂದ ಕಳೆದ 15 ದಿನಗಳಲ್ಲಿ ಮೂರು ಬಾರಿ ಮನವಿ ಸಲ್ಲಿಸಲಾಗಿದೆ.



ಮುಂಬೈನಲ್ಲಿ ನಡೆಯಲಿರುವ ಜಿ–20 ಸಭೆಯ ಕಾರಣದಿಂದಾಗಿ ಪಶ್ಚಿಮ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿರುವ ಯೋಗೇಶ್ವರಿ ಕೊಳೆಗೇರಿಯನ್ನು ಮಂಗಳವಾರ ಹಸಿರು ಪರದೆಯ ಮೂಲಕ ಮುಚ್ಚಲಾಯಿತು – ಪಿಟಿಐ ಚಿತ್ರ

ಗೋಧ್ರಾ ಹತ್ಯಾಕಾಂಡ ಅಪರಾಧಿಗೆ ಜಾಮೀನು

ನವದೆಹಲಿ (ಪಿಟಿಐ): ಗುಜರಾತ್‌ನ ಗೋಧ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿ ನಡೆದ ಹತ್ಯಾಕಾಂಡ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಫಿದ್ದ ಒಬ್ಬ ಅಪರಾಧಿಗೆ ಸುಪ್ರೀಂ ಕೋರ್ಟ್ ಗುರುವಾರ ಜಾಮೀನು ನೀಡಿದೆ.

ಗೋಧ್ರಾ ರೈಲು ಹತ್ಯಾಕಾಂಡ ಪ್ರಕರಣದಲ್ಲಿ ಫಾರೂಕ್ ಸೇರಿ ಹಲವರು ಜೀವಾವಧಿ ಶಿಕ್ಷೆಯಲ್ಲಿದ್ದು, 2004ರಿಂದ ಸೆರೆಯಲ್ಲಿದ್ದಾರೆ. ಫಾರೂಕ್ 17 ವರ್ಷ ಜೈಲುಶಿಕ್ಷೆ ಅನುಭವಿಸಿದ್ದಾನೆ. ಅದನ್ನು ಪರಿಗಣಿಸಿ, ಜಾಮೀನು ನೀಡಲಾಗುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರಿದ್ದ ಪೀಠವು ತೀರ್ಪು ನೀಡಿದೆ.

ಗುಜರಾತ್ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಫಾರೂಕ್‌ಗೆ ಜಾಮೀನು ನೀಡಬಾರದು ಎಂದು ವಾದಿಸಿದರು.

'ಗೋಧ್ರಾ ರೈಲು ಹತ್ಯಾಕಾಂಡದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿ 59 ಜನರನ್ನು ಜೀವಂತಹವಾಗಿ ಸುಡಲಾಗಿತ್ತು. ಹತ್ಯಾಕಾಂಡ ವೇಳೆ ಅಪರಾಧಿಯು ಬೋಗಿಯ ಬಾಗಿಲುಗಳಿಗೆ ಚಿಲಕ ಹಾಕಿದ್ದ ಮತ್ತು ಕಲ್ಲು ತೂರಿದ್ದ. ಸಾಮಾನ್ಯ ಸಂದರ್ಭದಲ್ಲಿ ಕಲ್ಲು ತೂರುವುದು ದೊಡ್ಡ ಅಪರಾಧವೇನಲ್ಲ. ಆದರೆ, ಈ ಪ್ರಕರಣದಲ್ಲಿ ಇದು ಅತ್ಯಂತ ಹೇಯ ಕೃತ್ಯ' ಎಂದು ಅವರು ಪ್ರತಿಪಾದಿಸಿದರು.

ಗುಜರಾತ್ ಸರ್ಕಾರದ ವಾದವನ್ನು ತಿರಸ್ಕರಿಸಿದ ಪೀಠವು, ಜಾಮೀನು ನೀಡಿತು. 'ಅಪರಾಧಿಯ ಜಾಮೀನು ಅರ್ಜಿಯನ್ನು ಹೈಕೋರ್ಟ್ 2017ರಲ್ಲಿ ತಿರಸ್ಕರಿಸಿತ್ತು. ತಾನು 17 ವರ್ಷ ಜೈಲುಶಿಕ್ಷೆ ಅನುಭವಿಸಿದ್ದೇನೆ ಎಂಬುದರ ಆಧಾರದಲ್ಲಿ ಆತ ಜಾಮೀನು ಕೋರಿದ್ದಾನೆ. ಪ್ರಕರಣದಲ್ಲಿ ಆತನು ಎಸಗಿದ ಕೃತ್ಯದ ಸ್ವರೂಪ ಮತ್ತು ಶಿಕ್ಷೆಯ ಅವಧಿಯನ್ನು ಪರಿಗಣಿಸಿ ಆತನಿಗೆ ಜಾಮೀನು ಮಂಜೂರು ಮಾಡಲಾಗುತ್ತದೆ' ಎಂದು ಪೀಠವು ವಿವರಿಸಿದೆ.

ಅಪರಾಧಿಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಮೇಲ್ಮನವಿಯು 2018ರಿಂದಲೂ ವಿಚಾರಣೆಗೆ ಬಾಕಿ ಇದೆ.

ಗೋಧ್ರಾ ರೈಲು ಹತ್ಯಾಕಾಂಡ ಪ್ರಕರಣದಲ್ಲಿ ಒಟ್ಟು 11 ಮಂದಿ ಜೀವಾವಧಿ ಶಿಕ್ಷೆಯಲ್ಲಿದ್ದಾರೆ. ಅವರಲ್ಲಿ ಹಲವರಿಗೆ ಜಾಮೀನು ದೊರೆತಿದೆ. ಅವರಿಗೂ ಜಾಮೀನು ನೀಡಬಾರದು ಎಂದು ಗುಜರಾತ್ ಸರ್ಕಾರ ವಾದಿಸಿತ್ತು. 2002ರ ಗೋಧ್ರಾ ಹತ್ಯಾಕಾಂಡದ ನಂತರ ನಡೆದ ಗಲಭೆಯಲ್ಲಿ ಬಿಲ್ಕಿಸ್ ಬಾನು ಎಂಬ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿತ್ತು. ಅವರ ಕುಟುಂಬದ ಏಳು ಜನರನ್ನು ಹತ್ಯೆ ಮಾಡಲಾಗಿತ್ತು. ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ 11 ಮಂದಿಯನ್ನು ಗುಜರಾತ್ ಸರ್ಕಾರ ಆಗಸ್ಟ್ 15ರಂದು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿತ್ತು.

ಸಂಕ್ಷಿಪ್ತ ಸುದ್ದಿ

ಆ್ಯಸಿಡ್ ದಾಳಿ: ವಿದ್ಯಾರ್ಥಿನಿ ಆರೋಗ್ಯದಲ್ಲಿ ಚೇತರಿಕೆ

ನವದೆಹಲಿ (ಪಿಟಿಐ): ಆ್ಯಸಿಡ್ ದಾಳಿಗೆ ಒಳಗಾಗಿ ದೆಹಲಿಯ ಸಪ್ಧರ್‌ಜಂಗ್ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಾಗಿರುವ 17 ವರ್ಷದ ವಿದ್ಯಾರ್ಥಿನಿಗೆ ಪ್ರಜ್ಞೆ ಮರಳಿದೆ ಎಂದು ವೈದ್ಯರು ಗುರುವಾರ ತಿಳಿಸಿದ್ದಾರೆ.

'ವಿದ್ಯಾರ್ಥಿನಿಯ ಮುಖದ ಮೇಲೆ ಶೇ 8ರಷ್ಟು ಸುಟ್ಟಗಾಯಗಳಾಗಿದ್ದು, ಕಣ್ಣುಗಳಿಗೂ ಗಾಯಗಳಾಗಿವೆ. ಆಕೆ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾಳೆ' ಎಂದು ಹೇಳಿದ್ದಾರೆ.

ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ವಿದ್ಯಾರ್ಥಿನಿ ಮೇಲೆ ಬುಧವಾರ ಆ್ಯಸಿಡ್ ಎರಚಿದ್ದರು. ಪ್ರಕರಣಕ್ಕೆ ಸಂಬಂಧಿಸಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ವಂದೇ ಭಾರತ್ ರೈಲಿಗೆ ಕಲ್ಲು ತೂರಾಟ

ರಾಯಪುರ (ಪಿಟಿಐ): ನಾಗ್ಪುರ– ಬಿಲಾಸ್ಪುರ ನಡುವೆ ಹೊಸದಾಗಿ ಆರಂಭವಾದ ವಂದೇ ಭಾರತ್ ರೈಲಿನ ಮೇಲೆ ಛತ್ತೀಸ್‌ಗಢ ರಾಜ್ಯದ ದುರ್ಗ್ ಮತ್ತು ಭಿಲಾಯ್ ರೈಲು ನಿಲ್ದಾಣಗಳ ನಡುವೆ ಬುಧವಾರ ಸಂಜೆ ದುಷ್ಕರ್ಮಿಯೊಬ್ಬ ಕಲ್ಲು ತೂರಿದ್ದು, ಇ1 ಕೋಚ್‌ನ ಕಿಟಕಿಗೆ ಹಾನಿಯಾಗಿದೆ.

ಈ ರೈಲು ನಾಗ್ಪುರದಿಂದ ಬಿಲಾಸ್ಪುರಕ್ಕೆ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ. ಕಲ್ಲು ತೂರಾಟದಿಂದ ಯಾರಿಗೂ ಗಾಯವಾಗಿಲ್ಲ. ರೈಲ್ವೆ ಸಂರಕ್ಷಣಾ ಪಡೆ ಈ ಕುರಿತು ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಡಿಸೆಂಬರ್ 11ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ರೈಲಿಗೆ ಚಾಲನೆ ನೀಡಿದ್ದರು.

'ನಿರ್ಭಯಾ ಪ್ರಕರಣಕ್ಕೆ 10 ವರ್ಷ: ಮಹಿಳೆಯರಿಗಿಲ್ಲ ರಕ್ಷಣೆ'

ನವದೆಹಲಿ (ಪಿಟಿಐ): ನಿರ್ಭಯಾ ಅತ್ಯಾಚಾರ ಪ್ರಕರಣ ನಡೆದು ಗುರುವಾರಕ್ಕೆ 10 ವರ್ಷ ಪೂರ್ಣಗೊಂಡಿದ್ದು, ದೆಹಲಿಯಲ್ಲಿ ಈಗಲೂ ಮಹಿಳೆಯರಿಗೆ ಸುರಕ್ಷತೆ ಇಲ್ಲ ಎಂದು ನಿರ್ಭಯಾ ಪೋಷಕರು ಹೇಳಿದ್ದಾರೆ.

'10 ವರ್ಷಗಳಲ್ಲಿ ನಿರ್ಭಯಾ ಬಿಟ್ಟರೆ ಬೇರೆ ಯಾರಿಗೂ ನ್ಯಾಯ ಸಿಕ್ಕಿಲ್ಲ. ಈ ಅವಧಿಯಲ್ಲಿ ಏನೂ ಬದಲಾವಣೆ ಆಗಿಲ್ಲ' ಎಂದು ನಿರ್ಭಯಾ ತಾಯಿ ಆಶಾ ದೇವಿ ಬೇಸರ ವ್ಯಕ್ತಪಡಿಸಿದ್ದಾರೆ.

'ನಿರ್ಭಯಾ ಪ್ರಕರಣದ ನಂತರ ಲೈಂಗಿಕ ದೌರ್ಜನ್ಯಕ್ಕೆ ತುತ್ತಾದವರ ಪೈಕಿ ಹಲವರು ತಮಗಾಗಿರುವ ಅನ್ಯಾಯದ ಕುರಿತು ಗಟ್ಟಿಯಾಗಿ ಧ್ವನಿ ಎತ್ತುತ್ತಿದ್ದಾರೆ. ಅದೊಂದೇ ಸಮಾಧಾನದ ಸಂಗತಿ' ಎಂದಿದ್ದಾರೆ.

'ಈಗಲೂ ಮಹಿಳೆಯರಿಗೆ ಸುರಕ್ಷತೆ ಇಲ್ಲ' ಎಂದು ನಿರ್ಭಯಾ ತಂದೆ ಬದ್ರಿ ನಾರಾಯಣ ಸಿಂಗ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಹೋದ ವರ್ಷ ಮಹಿಳೆಯರ ಮೇಲಿನ ಅಪರಾಧಕ್ಕೆ ಸಂಬಂಧಿಸಿದ 13,892 ಪ್ರಕರಣಗಳು ದಾಖಲಾಗಿದ್ದವು. 2020ಕ್ಕೆ ಹೋಲಿಸಿದರೆ ಇದು ಶೇ 40 ರಷ್ಟು ಅಧಿಕ ಎಂಬುದು ಎನ್‌ಸಿಆರ್‌ಬಿ ದತ್ತಾಂಶದಿಂದ ತಿಳಿದುಬಂದಿದೆ.

ಶ್ರದ್ಧಾ ಹತ್ಯೆ ಪ್ರಕರಣ ಡಿಎನ್‌ಎ ಹೊಂದಿಕೆ

ನವದೆಹಲಿ (ಪಿಟಿಐ): ಸಹಜೀವನ ನಡೆಸುತ್ತಿದ್ದ ಸಂಗಾತಿಯಿಂದಲೇ ಬರ್ಬರವಾಗಿ ಹತ್ಯೆಗೀಡಾಗಿದ್ದ ಮುಂಬೈ ಮೂಲದ ಕಾಲ್‌ಸೆಂಟರ್ ಉದ್ಯೋಗಿ ಶ್ರದ್ಧಾ ವಾಲಕರ್ ಅವರ ಮೂಳೆಯ ತುಂಡುಗಳು ಇಲ್ಲಿನ ಮಹರೌಲಿ ಅರಣ್ಯ ಪ್ರದೇಶದಲ್ಲಿ ದೊರೆತಿದ್ದು, ಅವುಗಳು ಶ್ರದ್ಧಾ ಅವರ ಅಪ್ಪನ ಡಿಎನ್‌ಎ ಮಾದರಿಗೆ ಹೊಂದಿಕೆಯಾಗುತ್ತಿವೆ ಎಂದು ದೆಹಲಿ ಪೊಲೀಸ್ ಮೂಲಗಳು ಗುರುವಾರ ತಿಳಿಸಿವೆ.

'ಶ್ರದ್ಧಾ ಅವರ ದೇಹದ ಭಾಗಗಳ ಹುಡುಕಾಟದಲ್ಲಿದ್ದ ಪೊಲೀಸರಿಗೆ ಒಟ್ಟು 13 ಮೂಳೆಯ ತುಂಡುಗಳು ದೊರೆತಿವೆ. ಅವುಗಳನ್ನು ಡಿಎನ್‌ಎ ಪರೀಕ್ಷೆಗಾಗಿ ಕೇಂದ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿತ್ತು. ಅದರ ವರದಿ ಪೊಲೀಸರ ಕೈಸೇರಿದೆ. ಈ ಮೂಳೆಗಳ ಡಿಎನ್‌ಎಯು ಶ್ರದ್ಧಾ ಅವರ ತಂದೆ ವಿಕಾಸ್ ವಾಲಕರ್ ಅವರ ಡಿಎನ್‌ಎಗೆ ಹೊಂದಿಕೆಯಾಗುತ್ತಿವೆ' ಎಂದು ಮಾಹಿತಿ ನೀಡಿವೆ.

ಚುನಾವಣೆ ಕಾರಣಕ್ಕೆ ಇ.ಡಿ.ಕಿರುಕುಳ: ಡಿಕೆಶಿ


ನವದೆಹಲಿ: ಮುಂಬರುವ ಮೇ ತಿಂಗಳಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಬಾಕಿ ಇದ್ದ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ ಈಗ ಕ್ರಮ ಕೈಗೊಳ್ಳುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ದೆಹಲಿ ಹೈಕೋರ್ಟ್‌ಗೆ ಹೇಳಿಕೆ ನೀಡಿದ್ದಾರೆ.

'ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ 2018ರಲ್ಲಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ. ಈ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಇದೇ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು 2020ರಲ್ಲಿ ತನಿಖಾ ಪ್ರಕ್ರಿಯೆ ಆರಂಭಿಸಿದೆ. ಜಾರಿ ನಿರ್ದೇಶನಾಲಯವು ಇದೇ ಪ್ರಕರಣದಲ್ಲಿ ಮರು ತನಿಖೆ (ಇಸಿಐಆರ್) ನಡೆಸುತ್ತಿದೆ' ಎಂದು ಆರೋಪಿಸಿ ಶಿವಕುಮಾರ್ ಅವರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಗುರುವಾರ ವಿಚಾರಣೆಯ ವೇಳೆ ಶಿವಕುಮಾರ್ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿ, 'ಈ ಪ್ರಕರಣದಲ್ಲಿ ಯಾವುದೇ ಆಸ್ತಿಯ ಮುಟ್ಟುಗೋಲು ಹಾಕಿಕೊಳ್ಳಲಾಗಿಲ್ಲ ಮತ್ತು ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿಯಲ್ಲಿ ಯಾವುದೇ ಅಪರಾಧ ಪ್ರಕ್ರಿಯೆಗಳಿಲ್ಲ' ಎಂದು ವಾದಿಸಿದರು.

ಷೇರುಪೇಟೆ ವಹಿವಾಟು

879



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,660
ಇಂದಿನ ಅಂತ್ಯ	18,415
▼	245
ದಿನದ ಕನಿಷ್ಠ	18,387

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹1230 (1230)
ಸೂರ್ಯಕಾಂತಿ (ರಿಫೈನ್ಡ್)	₹1320 (1320)
ಪಾಮೋಲಿನ್	₹935 (940)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹455-702
ದ್ವಿತಳಿ (ಬಿ.ವಿ)	₹412-836

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹138
ಆರ್‌ಎಸ್‌ಎಸ್-5	₹130
ಗುಡ್ ಲಾಟ್	₹123

(ಪ್ರತಿ ಕೆ.ಜಿಗೆ)

ಹುಂಡೈ ಮೋಟರ್: ಜನವರಿಯಿಂದ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಯು ಜನವರಿಯಿಂದ ತನ್ನೆಲ್ಲಾ ಮಾದರಿಗಳ ಬೆಲೆ ಹೆಚ್ಚಳ ಮಾಡುವುದಾಗಿ ಗುರುವಾರ ಹೇಳಿದೆ.

ತಯಾರಿಕಾ ವೆಚ್ಚದಲ್ಲಿ ಆಗುತ್ತಿರುವ ವೆಚ್ಚವನ್ನು ಸದ್ಯ ಕಂಪನಿಯೇ ಭರಿಸುತ್ತಿದೆ. ಆದರೆ, ಜನವರಿಯಿಂದ ತಯಾರಿಕಾ ವೆಚ್ಚದಲ್ಲಿ ಒಂದಷ್ಟು ಭಾಗವನ್ನು ಬೆಲೆ ಏರಿಕೆ ಮೂಲಕ ಗ್ರಾಹಕರಿಗೆ ವರ್ಗಾಯಿಸಲು ನಿರ್ಧರಿಸಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಬೆಲೆ ಏರಿಕೆ ಪ್ರಮಾಣ ಎಷ್ಟಿರಲಿದೆ ಎನ್ನುವುದನ್ನು ಕಂಪನಿ ತಿಳಿಸಿಲ್ಲ. ಆದರೆ, ಗ್ರಾಹಕರಿಗೆ ಹೆಚ್ಚಿನ ಹೊರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದಷ್ಟೇ ಹೇಳಿದೆ.

ವಾಟ್ಸ್‌ಆ್ಯಪ್ ಪೇ ಇಂಡಿಯಾ ಮುಖ್ಯಸ್ಥ ವಿನಯ್ ರಾಜೀನಾಮೆ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್ ಪೇ ಇಂಡಿಯಾದ ಮುಖ್ಯಸ್ಥ ವಿನಯ್ ಚೋಲೆಟ್ಟಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮುಖ್ಯಸ್ಥ ಹುದ್ದೆಗೆ ಬಡ್ತಿ ಪಡೆದ ನಾಲ್ಕು ತಿಂಗಳ ಬಳಿಕ ಅವರು ಹುದ್ದೆ ತ್ಯಜಿಸಿದ್ದಾರೆ.

ರಾಜೀನಾಮೆಯ ಕುರಿತು ಲಿಂಕ್ಡ್ ಇನ್‌ನಲ್ಲಿ ಅವರು ಬರೆದುಕೊಂಡಿದ್ದಾರೆ. ವಿನಯ್ ಅವರು 2021ರ ಅಕ್ಟೋಬರ್‌ನಲ್ಲಿ ಅಮೆಜಾನ್ ಬಿಟ್ಟು ವಾಟ್ಸ್‌ಆ್ಯಪ್ ಕಂಪನಿಯನ್ನು ಸೇರಿದ್ದರು.

ವಿನಯ್ ರಾಜೀನಾಮೆಯ ಕುರಿತು ವಾಟ್ಸ್‌ಆ್ಯಪ್ ಕಂಪನಿಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಇದರಿಂದಾಗಿ ಒಂದೂವರೆ ತಿಂಗಳಿನಲ್ಲಿ ಮೆಟಾ ಕಂಪನಿಯ ಉನ್ನತ ಹುದ್ದೆಯಲ್ಲಿದ್ದ ನಾಲ್ವರು ಭಾರತೀಯರು ರಾಜೀನಾಮೆ ನೀಡಿದಂತಾಗಿದೆ.

ಮೆಟಾ ಇಂಡಿಯಾದ ಮುಖ್ಯಸ್ಥ ಅಜಿತ್ ಮೋಹನ್, ವಾಟ್ಸ್‌ಆ್ಯಪ್ ಇಂಡಿಯಾದ ಮುಖ್ಯಸ್ಥ ಅಭಿಜಿತ್ ಬೋಸ್, ಮೆಟಾ ಇಂಡಿಯಾದ ಸಾರ್ವಜನಿಕ ನೀತಿ ಮುಖ್ಯಸ್ಥ ರಾಜೀವ್ ಅಗರ್ವಾಲ್ ಅವರು ತಮ್ಮ ಸ್ಥಾನಗಳಿಗೆ ಕಳೆದ ತಿಂಗಳು ರಾಜೀನಾಮೆ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜೀ ವಿರುದ್ಧ ಎನ್‌ಸಿಎಲ್‌ಟಿಗೆ ಐಡಿಬಿಐ ಅರ್ಜಿ

ನವದೆಹಲಿ (ಪಿಟಿಐ): ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನಿಂದ ₹149.60 ಕೋಟಿ ಮೊತ್ತದ ಸಾಲ ವಸೂಲಿ ಮಾಡಲು ಐಡಿಬಿಐ ಬ್ಯಾಂಕ್ ರಾಷ್ಟ್ರೀಯ ಕಂಪನಿ ಕಾಯ್ದೆ ಪ್ರಾಧಿಕಾರದ (ಎನ್‌ಸಿಎಲ್‌ಟಿ) ಮೊರೆ ಹೋಗಿದೆ.

ಕಂಪನಿಯ ವಿರುದ್ಧ ದಿವಾಳಿ ಸಂಹಿತೆಯ (ಐಬಿಸಿ) ಸೆಕ್ಷನ್ 7ರ ಅಡಿಯಲ್ಲಿ ದಿವಾಳಿ ಪ್ರಕ್ರಿಯೆ ನಡೆಸುವಂತೆ ಐಡಿಬಿಐ ಬ್ಯಾಂಕ್ ಅರ್ಜಿ ಸಲ್ಲಿಸಿದೆ ಎಂದು ಜೀ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

15–12–2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	11550-11600
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1570)
ಒಂದು ವಾರದ ಡೆಲಿವರಿ	1565 (1565)
ಸೋಯಾ ಕಚ್ಚಾ	1140 (1140)
ಪಾಮ್ ವಾರದ ಡೆಲಿವರಿ	940 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,600 (54,250)
ಬೆಳ್ಳಿ ಕೆ.ಜಿ 66,600 (67,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಕಾರ್ಕಳ	
ಹೊಸತು	25000-37500
ಹಳತು	40000-54500
ಕುಮಟ	
ಚಿಪ್ಪು	16491-31299
ಕೋಕ	13009-26061
ಹಳೆಚಾಲಿ	33811-40261
ಹೊಸಚಾಲಿ	27171-32611
ಸಾಗರ	
ಬಿಳಿಗೋಟು	16110-29400
ಚಾಲಿ	28119-37009
ಕೋಕ	23899-30109
ಕೆಂಪುಗೋಟು	26989-33699
ರಾಶಿ	38889-43519
ಸಿಪ್ಪೆಗೋಟು	4899-20100
ಶಿವಮೊಗ್ಗ	
ಬೆಟ್ಟೆ	46319-50569
ಗೊರಬಲು	17069-31659
ರಾಶಿ	39859-43599
ಸರಕು	57100-80730
ಸಿದ್ದಾಪುರ	
ಬಿಳಿಗೋಟು	29019-32699
ಚಾಲಿ	36519-39199
ಕೋಕ	28889-28889
ರಾಶಿ	40989-41399
ತಟ್ಟಿಬೆಟ್ಟೆ	33499-41109
ಶಿರಸಿ	
ಬೆಟ್ಟೆ	34699-38999
ಬಿಳಿಗೋಟು	20599-34199
ಚಾಲಿ	36221-40829
ಕೆಂಪುಗೋಟು	22099-33699
ರಾಶಿ	41818-42689
ಸಿದ್ದಾಪುರ	
ಬಿಳಿಗೋಟು	25109-32469
ಚಾಲಿ	35680-40660
ಕೋಕ	17601-28734
ಕೆಂಪುಗೋಟು	28815-32519
ರಾಶಿ	41115-48119
ತಟ್ಟಿಬೆಟ್ಟೆ	37100-40090

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	13100	13200	168.15 ಸೆಂಟ್ಸ್
ಎಸಿ	6580	6700	6200	
ಆರ್‌ಪಿ	8500	8500	8500	ಲಂಡನ್
ಆರ್‌ಸಿ	4530	4200	4200	1915 ಡಾಲರ್ಸ್

ರಿಲಯನ್ಸ್‌ನಿಂದ ಇನ್‌ಡಿಪೆಂಡನ್ಸ್ ಬ್ರ್ಯಾಂಡ್

ನವದೆಹಲಿ (ಪಿಟಿಐ): ರಿಲಯನ್ಸ್ ರಿಟೇಲ್ ಕಂಪನಿಯು ಇನ್‌ಡಿಪೆಂಡನ್ಸ್ ಎನ್ನುವ ಎಫ್‌ಎಂಸಿಜಿ ಬ್ರ್ಯಾಂಡ್ ಅನ್ನು ಗುಜರಾತ್‌ನಲ್ಲಿ ಬಿಡುಗಡೆ ಮಾಡಿದೆ.

ಈ ಬ್ರ್ಯಾಂಡ್ ಅನ್ನು ದೇಶದಾದ್ಯಂತ ಬಿಡುಗಡೆ ಮಾಡುವ ಯೋಜನೆಯನ್ನೂ ಕಂಪನಿ ಹೊಂದಿದೆ. ಅಡುಗೆ ಎಣ್ಣೆ, ಬೇಳೆಕಾಳು, ಧಾನ್ಯಗಳು, ಪ್ಯಾಕ್ ಆಗಿರುವ ಆಹಾರ ಉತ್ಪನ್ನಗಳು ಹಾಗೂ ಇನ್ನಿತರ ನಿತ್ಯದ ಅಗತ್ಯ ಉತ್ಪನ್ನಗಳು ಈ ಬ್ರ್ಯಾಂಡ್ ಅಡಿಯಲ್ಲಿ ಸಿಗಲಿವೆ ಎಂದು ಕಂಪನಿ ತಿಳಿಸಿದೆ.

ಫೆಡರಲ್ ರಿಸರ್ವ್‌ನಿಂದ ಬಡ್ಡಿ ಹೆಚ್ಚಳ; ಪೇಟೆಯಲ್ಲಿ ಮಾರಾಟದ ಒತ್ತಡ

ಸೆನ್ಸೆಕ್ಸ್: ಎರಡು ತಿಂಗಳಲ್ಲೇ ಗರಿಷ್ಠ ಕುಸಿತ



ಮುಂಬೈ (ಪಿಟಿಐ/ರಾಯಿಟರ್ಸ್): ಬಡ್ಡಿದರ ಹೆಚ್ಚಿಸುವುದನ್ನು ಮುಂದುವರಿಸುವ ಅಮೆರಿಕದ ಫೆಡರಲ್ ರಿಸರ್ವ್‌ನ ನಿರ್ಧಾರವು ದೇಶದ ಷೇರುಪೇಟೆಗಳಲ್ಲಿ ಗುರುವಾರ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಕಂಡಿದ್ದು ಸಹ ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿತು ಎಂದು ವರ್ತಕರು ಹೇಳಿದ್ದಾರೆ.

ಎರಡು ದಿನಗಳಿಂದ ಏರುಮುಖವಾಗಿದ್ದ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಗುರುವಾರ 879 ಅಂಶ ಕುಸಿತ ಕಂಡು 61,799 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 245 ಅಂಶ ಇಳಿಕೆಯಾಗಿ 18,415 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

'ಅಮೆರಿಕದ ಹಣದುಬ್ಬರವು ಮಾರುಕಟ್ಟೆ ನಿರೀಕ್ಷೆಗಿಂತಲೂ ಉತ್ತಮ ಸ್ಥಿತಿಯಲ್ಲಿ ಇದೆ. ಹೀಗಿದ್ದರೂ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರವನ್ನು ಶೇ 0.50ರಷ್ಟು ಹೆಚ್ಚಳ ಮಾಡಿದ್ದು, ಬಿಗಿಯಾದ ಹಣಕಾಸು ನೀತಿಯನ್ನು ಮುಂದುವರಿಸಲು ನಿರ್ಧರಿಸಿದೆ. ಇದು ದೇಶದ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಾಣಲು ಪ್ರಮುಖ ಕಾರಣ ಆಯಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.77ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 82.06 ಡಾಲರ್‌ಗೆ ತಲುಪಿತು.

ವಿದೇಶಿ ಹೂಡಿಕೆ ತಗ್ಗುವ ಸಂಭವ: ಹಣದುಬ್ಬರವನ್ನು ನಿಯಂತ್ರಣಕ್ಕೆ ತರಲು ಕಠಿಣ ಸ್ವರೂಪದ ಹಣಕಾಸು ನೀತಿಯನ್ನು ಮುಂದುವರಿಸುವುದಾಗಿ ಫೆಡರಲ್ ರಿಸರ್ವ್ ಹೇಳಿದೆ. ಇದರಿಂದಾಗಿ ಭಾರತವನ್ನೂ ಒಳಗೊಂಡು ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳಿಗೆ ವಿದೇಶಿ ಬಂಡವಾಳ ಒಳಹರಿವು ಕಡಿಮೆ ಆಗುವ ಸಾಧ್ಯತೆ ಇದೆ. ವಿದೇಶಿ ಹೂಡಿಕೆದಾರರು ಲಾಭಗಳಿಕೆ ಮಾಡಿಕೊಳ್ಳಲು ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಮಾರಾಟ ಮಾಡುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಲಯವಾರು ನಷ್ಟ (%)	
ಐ.ಟಿ.	2.06
ತಂತ್ರಜ್ಞಾನ	1.92
ಲೋಹ	1.82
ಗ್ರಾಹಕ ಬಳಕೆ ವಸ್ತುಗಳು	1.37
ಸೇವೆಗಳು	1.28

ರೂಪಾಯಿ ಮೌಲ್ಯ 27 ಪೈಸೆ ಇಳಿಕೆ

ಮುಂಬೈ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಗುರುವಾರ 27 ಪೈಸೆ ಇಳಿಕೆ ಕಂಡಿತು.

ಅಮೆರಿಕದ ಫೆಡರಲ್ ರಿಸರ್ವ್ ನಿರ್ಧಾರವು ರೂಪಾಯಿ ಮೌಲ್ಯ ಇಳಿಕೆಗೆ ಪ್ರಮುಖ ಕಾರಣ ಆಯಿತು.

ಅಮೆರಿಕದಲ್ಲಿ ಬಡ್ಡಿದರ ಹೆಚ್ಚಾಗಿದ್ದರಿಂದ ಗುರುವಾರ ಡಾಲರ್ ಮೌಲ್ಯ ವೃದ್ಧಿಯಾಗಿದೆ. ಇದರಿಂದಾಗಿ ರೂಪಾಯಿ ಇಳಿಕೆ ಕಾಣುವಂತಾಯಿತು. ರೂಪಾಯಿಯು ಒಂದು ಡಾಲರ್‌ಗೆ ಮತ್ತೆ ₹83ಕ್ಕೆ ತಲುಪುವ ಸಾಧ್ಯತೆ ಇದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಜತಿನ್ ತ್ರಿವೇದಿ ತಿಳಿಸಿದ್ದಾರೆ.

₹29,793 ಕೋಟಿ ಮೌಲ್ಯದ ಟೆಸ್ಲಾ ಷೇರು ಮಾರಿದ ಮಸ್ಕ್


ಇಲಾನ್ ಮಸ್ಕ್

ಸ್ಯಾನ್ ಫ್ರಾನ್ಸಿಸ್ಕೊ (ರಾಯಿಟರ್ಸ್): ಉದ್ಯಮಿ ಇಲಾನ್ ಮಸ್ಕ್ ಅವರು ಟೆಸ್ಲಾ ಕಂಪನಿಯಲ್ಲಿ ಹೊಂದಿರುವ ಷೇರುಗಳಲ್ಲಿ ₹29,793 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಇದರಿಂದಾಗಿ ಮಸ್ಕ್ ಅವರು 2022ರಲ್ಲಿ ಈವರೆಗೆ ಕಂಪನಿಯಲ್ಲಿನ ಒಟ್ಟು ₹3.31 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದಂತಾಗಿದೆ.

ಸೋಮವಾರದಿಂದ ಬುಧವಾರದವರೆಗೆ ನಡೆದ ವಹಿವಾಟಿನಲ್ಲಿ ಮಸ್ಕ್ ಅವರು ಟೆಸ್ಲಾದಲ್ಲಿದ್ದ 2.2 ಕೋಟಿ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಅಮೆರಿಕದ ಷೇರುಪೇಟೆಯು ತಿಳಿಸಿದೆ.

ಅಕ್ಟೋಬರ್‌ನಲ್ಲಿ ಟ್ವಿಟರ್ ಕಂಪನಿಯನ್ನು ಖರೀದಿಸಿದ ಬಳಿಕ ಇಲಾನ್ ಮಸ್ಕ್ ಅವರು ಎರಡನೇ ಬಾರಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಟೆಸ್ಲಾ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಟೆಸ್ಲಾ ಷೇರುಗಳ ಮಾರಾಟವು ಟ್ವಿಟರ್ ಸ್ವಾಧೀನಕ್ಕೆ ಸಂಬಂಧಿಸಿದ್ದೇ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಆದರೆ, ಈ ಮಾರಾಟದಿಂದ ಹೂಡಿಕೆದಾರರು ತೀವ್ರ ನಿರಾಶೆಗೊಂಡಿದ್ದಾರೆ. ಮಸ್ಕ್ ಅವರು ತಮ್ಮ ಗಮನ ಮತ್ತು ಸಂಪನ್ಮೂಲವನ್ನು ಟೆಸ್ಲಾದಿಂದ ಟ್ವಿಟರ್ ಕಡೆಗೆ ಬದಲಾಯಿಸುತ್ತಿದ್ದಾರೆ ಎಂದು ಹೂಡಿಕೆದಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಷೇರು ಮಾರಾಟದ ಬಗ್ಗೆ ಟೆಸ್ಲಾ ಕಂಪನಿಯಾಗಲಿ, ಅದರ ಸಿಇಒ ಮಸ್ಕ್ ಆಗಲಿ ಪ್ರತಿಕ್ರಿಯೆ ನೀಡಿಲ್ಲ.

ರಿಫಿನಿಟಿವ್ ಸಂಸ್ಥೆಯ ಅಂಕಿ–ಅಂಶಗಳ ಪ್ರಕಾರ ಟೆಸ್ಲಾ ಕಂಪನಿಯಲ್ಲಿ ಮಸ್ಕ್ ಹೊಂದಿರುವ ಷೇರುಪಾಲು ಶೇ 17 ರಿಂದ ಶೇ 13.4ಕ್ಕೆ ಇಳಿಕೆ ಆಗಿದೆ. ಟೆಸ್ಲಾ ಕಂಪನಿಯ ಷೇರು ಮೌಲ್ಯವು ಈ ವರ್ಷದಲ್ಲಿ ಈವರೆಗೆ ಶೇ 30ರಷ್ಟು ಇಳಿಕೆ ಕಂಡಿದ್ದು, ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿದೆ.

ಮೂರನೇ ಟ್ರೋಫಿಯ ಮೇಲೆ ಕಣ್ಣಿಟ್ಟು ಫೈನಲ್‌ನಲ್ಲಿ ಅರ್ಜೆಂಟೀನಾ ವಿರುದ್ಧ ಪೈಪೋಟಿ

ಫ್ರಾನ್ಸ್ ಮುಂದೆ ಮುದುಡಿದ ಮೊರೊಕ್ಕೊ



ಗೋಲು ಗಳಿಸಿದ ಥಿಯೊ ಹೆರ್ನಾಂಡಿಜ್ (ಮಧ್ಯ) ಅವರು ಒಲಿವಿಯೆರ್ ಜಿರೋಡ್ (ಎಡ) ಮತ್ತು ಉಸ್ಮಾನ್ ದೆಂಬೆಲೆ ಜತೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಅಲ್ ಖೋರ್, ಕತಾರ್ (ರಾಯಿಟರ್ಸ್): ಅಲ್ ಬೈತ್ ಕ್ರೀಡಾಂಗಣವನ್ನು 'ಕೆಂಪು ಸಮುದ್ರ' ವಾಗಿ ಬದಲಾಯಿಸಿದ್ದ ಮೊರೊಕ್ಕೊ ಅಭಿಮಾನಿಗಳ ಕನಸನ್ನು ನುಚ್ಚುನೂರು ಮಾಡಿದ ಫ್ರಾನ್ಸ್ ತಂಡ, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಬುಧವಾರ ತಡರಾತ್ರಿ ನಡೆದ ಸೆಮಿಫೈನಲ್‌ನಲ್ಲಿ ಥಿಯೊ ಹೆರ್ನಾಂಡಿಜ್ ಮತ್ತು ರಾಂದಲ್ ಕೊಲೊ ಮುವಾನಿ ಅವರು ತಂದಿತ್ತ ಗೋಲುಗಳ ನೆರವಿನಿಂದ ಹಾಲಿ ಚಾಂಪಿಯನ್ನರು 2-0 ಗೋಲುಗಳಿಂದ ಗೆದ್ದರು. ಟೂರ್ನಿಯಲ್ಲಿ ಸಾಕಷ್ಟು ಅಚ್ಚರಿಯ ಫಲಿತಾಂಶಗಳೊಂದಿಗೆ ಮುನ್ನುಗ್ಗಿದ್ದ ಮೊರೊಕ್ಕೊ ತಂಡದ ಓಟಕ್ಕೆ ಕೊನೆಗೂ ತೆರೆಬಿತ್ತು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಫ್ರಾನ್ಸ್ ತಂಡ, ಅರ್ಜೆಂಟೀನಾದ ಸವಾಲು ಎದುರಿಸಲಿದೆ. ಟೂರ್ನಿಯ ಅಂತಿಮ ಹಣಾಹಣಿಯನ್ನು ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ಮತ್ತು 'ನವತಾರೆ' ಕಿಲಿಯನ್ ಎಂಬಾಪೆ ನಡುವಿನ ಹೋರಾಟ ಎಂದೇ ಬಿಂಬಿಸಲಾಗಿದೆ.

1958 ಮತ್ತು 1962 ರಲ್ಲಿ ಬ್ರೆಜಿಲ್ ತಂಡ ಸತತವಾಗಿ ವಿಶ್ವಕಪ್ ಜಯಿಸಿದ್ದ ಬಳಿಕ ಯಾವುದೇ ತಂಡ ಅಂತಹ ಸಾಧನೆ ಮಾಡಿಲ್ಲ. ಇದೀಗ ಫ್ರಾನ್ಸ್ ತಂಡಕ್ಕೆ ಸತತ ಎರಡು ಟ್ರೋಫಿ ಜಯಿಸುವ ಅವಕಾಶ ಲಭಿಸಿದೆ. ಮೂರನೇ ಸ್ಥಾನವನ್ನು ನಿರ್ಣಯಿಸಲು ಶನಿವಾರ ನಡೆಯಲಿರುವ 'ಪ್ಲೇ ಆಫ್' ಪಂದ್ಯದಲ್ಲಿ ಮೊರೊಕ್ಕೊ-ಕ್ರೊವೇಷ್ಯಾ ಎದುರಾಗಲಿವೆ.

ಜಿದ್ದಾಜಿದ್ದಿನ ಹೋರಾಟ: ವಿಶ್ವಕಪ್ ಟೂರ್ನಿಯಲ್ಲಿ ಚೊಚ್ಚಲ ಸೆಮಿಫೈನಲ್ ಪಂದ್ಯವನ್ನಾಡಿದ ಆಫ್ರಿಕಾ ಖಂಡದ ಹಾಗೂ ಅರಬ್ ನಾಡಿನ ಮೊದಲ ತಂಡ ಎನಿಸಿರುವ ಮೊರೊಕ್ಕೊ, ಹಾಲಿ ಚಾಂಪಿಯನ್ನರಿಗೆ ತಕ್ಕ ಪೈಪೋಟಿ ನೀಡಿತು.

ಫ್ರಾನ್ಸ್ ತಂಡ ಐದನೇ ನಿಮಿಷದಲ್ಲೇ ಮುನ್ನಡೆ ಗಳಿಸಿತು. ಆಂಟೋನ್ ಗ್ರೀಸ್‌ಮನ್ ಅವರ ಪಾಸ್‌ನಿಂದ ದೊರೆತ ಚೆಂಡನ್ನು ಎಂಬಾಪೆ ಅವರು ಗುರಿ ಯತ್ತ ಒದ್ದರೂ ಮೊರೊಕ್ಕೊ ಡಿಫೆಂಡರ್‌ಗೆ ತಾಗಿ ಹೆರ್ನಾಂಡಿಜ್ ಬಳಿ ಹೋಯಿತು. ಮೇಲಕ್ಕೆ ಪುಟಿದ ಚೆಂಡನ್ನು ತಮ್ಮ ಎಡಗಾಲಿನಿಂದ ಚಾಣಾಕ್ಷ ರೀತಿಯಲ್ಲಿ ಗುರಿ ಸೇರಿಸಿದರು.

ಆರಂಭದಲ್ಲೇ ಗೋಲು ಗಳಿಸಿದ್ದು, ಫ್ರಾನ್ಸ್ ಆಟಗಾರರ ಉತ್ಸಾಹವನ್ನು ಇಮ್ಮಡಿಗೊಳಿಸಿತು. ಮೊದಲ ಅವಧಿಯಲ್ಲಿ ಒಲಿವಿಯರ್ ಜಿರೋಡ್ ಅವರಿಗೆ ಗೋಲು ಗಳಿಸಲು ಎರಡು ಅತ್ಯುತ್ತಮ ಅವಕಾಶಗಳು ಲಭಿಸಿದರೂ, ಯಶಸ್ಸು ಸಿಗಲಿಲ್ಲ.

44ನೇ ನಿಮಿಷದಲ್ಲಿ ಮೊರೊಕ್ಕೊ ತಂಡದ ಜವಾದ್ ಎಲ್ ಯಾಮಿಕ್ ಅವರು 'ಓವರ್‌ಹೆಡ್' ಕಿಕ್ ಮಾಡಿ ಗೋಲು ಗಳಿಸಲು ನಡೆಸಿದ ಪ್ರಯತ್ನವನ್ನು ಗೋಲ್‌ಲೈನ್ ಬಳಿ ಎದುರಾಳಿ ಡಿಫೆಂಡರ್ ತಡೆದರು. ಎರಡನೇ ಅವಧಿಯ ಆರಂಭದಲ್ಲಿ ಸಮಬಲದ ಗೋಲಿಗಾಗಿ ಮೊರೊಕ್ಕೊ ಮೇಲಿಂದ ಮೇಲೆ ಯತ್ನಿಸಿತಾದರೂ, ಯಶಸ್ಸು ದೊರೆಯಲಿಲ್ಲ.

ಸ್ಟಾರ್ ಆಟಗಾರ ಎಂಬಾಪೆ ಈ ಪಂದ್ಯದಲ್ಲಿ ಗೋಲು ಗಳಿಸಲಿಲ್ಲ. ಆದರೆ ಎರಡನೇ ಗೋಲು ಗಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. 79ನೇ ನಿಮಿಷದಲ್ಲಿ ಮೊರೊಕ್ಕೊದ ಇಬ್ಬರು ಡಿಫೆಂಡರ್‌ಗಳನ್ನು ತಮ್ಮ ಕಾಲ್ಚಳಕದಿಂದ ತಪ್ಪಿಸಿ, ಚೆಂಡನ್ನು ಗೋಲ್‌ಪೋಸ್ಟ್‌ನತ್ತ ತಳ್ಳಿದರು. ಅಲ್ಲೇ ಕಾಯುತ್ತಿದ್ದ ಕೊಲೊ ಮುವಾನಿ ಗುರಿ ಸೇರಿಸಿದರು. ಸಬ್‌ಸ್ಟಿಟ್ಯೂಟ್ ಆಟಗಾರನಾಗಿ ಅಂಗಳಕ್ಕಿಳಿದು 44 ಸೆಕೆಂಡುಗಳು ಆಗುವಷ್ಟರಲ್ಲೇ ಅವರು ಗೋಲು ಗಳಿಸಿದರು. ಎರಡು ಗೋಲುಗಳ ಮುನ್ನಡೆ ಪಡೆದ ಬಳಿಕ ಫ್ರಾನ್ಸ್ ರಕ್ಷಣೆಗೆ ಒತ್ತು ನೀಡಿತು.

ಪಂದ್ಯಕ್ಕೆ ಮುನ್ನ ತಾಲೀಮಿನ ವೇಳೆ ನಯೇಫ್ ಅಗುಯೆದ್ ಗಾಯಗೊಂಡದ್ದು ಮತ್ತು ನಾಯಕ ಹಾಗೂ ಸೆಂಟರ್ ಬ್ಯಾಕ್ ಆಟಗಾರ ರೊಮೇನ್ ಸೇಸ್ 21ನೇ ನಿಮಿಷದಲ್ಲಿ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿ ಅಂಗಳದಿಂದ ನಿರ್ಗಮಿಸಿದ್ದು ಮೊರೊಕ್ಕೊಗೆ ಹಿನ್ನಡೆಯಾಗಿ ಪರಿಣಮಿಸಿತು.

ಪಂದ್ಯ ವೀಕ್ಷಿಸಿದ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರೊನ್

ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯಲ್ ಮ್ಯಾಕ್ರೊನ್ ಅವರು ಸೆಮಿಫೈನಲ್ ಪಂದ್ಯ ವೀಕ್ಷಿಸಿದರು. 'ನಾಲ್ಕು ವರ್ಷಗಳ ಹಿಂದೆ ರಷ್ಯಾದಲ್ಲಿ ನಡೆದ ಟೂರ್ನಿಯಲ್ಲೂ ತಂಡವನ್ನು ಬೆಂಬಲಿಸಲು ತೆರಳಿದ್ದೆ. ಈ ಬಾರಿ ತಂಡಕ್ಕೆ ಬೆಂಬಲ ನೀಡಲು ಕತಾರ್‌ಗೆ ಬಂದಿದ್ದೇನೆ' ಎಂದು ಅವರು ಹೇಳಿದರು.

ಬುಧವಾರ ರಾತ್ರಿ ಸೆಮಿಫೈನಲ್ ವೀಕ್ಷಿಸಿದ ಬಳಿಕ ಅವರು ಐರೋಪ್ಯ ಒಕ್ಕೂಟದ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಬ್ರಸೆಲ್ಸ್‌ಗೆ ತೆರಳಿದರು. ಭಾನುವಾರ ನಡೆಯಲಿರುವ ಫೈನಲ್ ಪಂದ್ಯ ವೀಕ್ಷಿಸಲು ಮತ್ತೆ ಕತಾರ್‌ಗೆ ಬರಲಿದ್ದಾರೆ.

ಗೋಲು ವಿವರ

ಫ್ರಾನ್ಸ್-2
ಥಿಯೊ ಹೆರ್ನಾಂಡಿಜ್ (5ನೇ ನಿ.)
ರಾಂದಲ್ ಕೊಲೊ ಮುವಾನಿ (79ನೇ ನಿ.)

ಮೊರೊಕ್ಕೊ 0

'ಪ್ಲೇ ಆಫ್' (3ನೇ ಸ್ಥಾನಕ್ಕೆ)

ಡಿಸೆಂಬರ್ 17
ಕ್ರೊವೇಷ್ಯಾ Vs ಮೊರೊಕ್ಕೊ — ರಾತ್ರಿ 8.30

ಫೈನಲ್

ಡಿಸೆಂಬರ್ 18
ಅರ್ಜೆಂಟೀನಾ Vs ಫ್ರಾನ್ಸ್ — ರಾತ್ರಿ 8.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್



ಸೋತ ನಿರಾಸೆಯಲ್ಲಿ ಮೊರೊಕ್ಕೊ ಆಟಗಾರರು —ಎಎಫ್‌ಪಿ ಚಿತ್ರ

'ಮೆಸ್ಸಿ ತಡೆಯಲು ಯೋಜನೆ'

ಅಲ್ ಖೋರ್, ಕತಾರ್ (ಎಎಫ್‌ಪಿ): 'ಫೈನಲ್ ಪಂದ್ಯದಲ್ಲಿ ಲಯೊನೆಲ್ ಮೆಸ್ಸಿ ಅವರನ್ನು ತಡೆಯಲು ತಕ್ಕ ಯೋಜನೆ ರೂಪಿಸಿ ಕಣಕ್ಕಿಳಿಯುವೆವು' ಎಂದು ಫ್ರಾನ್ಸ್ ತಂಡದ ಕೋಚ್ ದಿದಿಯರ್ ದೆಶಾಂಪ್ ಹೇಳಿದ್ದಾರೆ.

'ಮೆಸ್ಸಿ ಟೂರ್ನಿಯ ಆರಂಭದಿಂದಲೂ ಅತ್ಯುತ್ತಮ ಫಾರ್ಮ್‌ನಲ್ಲಿ ಆಡುತ್ತಿದ್ದಾರೆ. ಅವರು ವಿಶ್ವದ ಶ್ರೇಷ್ಠ ಆಟಗಾರರಲ್ಲಿ ಒಬ್ಬರು. ಫೈನಲ್‌ನಲ್ಲಿ ಅವರು ಒಡ್ಡಲಿರುವ ಅಪಾಯವನ್ನು ತಡೆಯಲು ಪ್ರಯತ್ನಿಸಲಾಗುವುದು' ಎಂದು ತಿಳಿಸಿದ್ದಾರೆ.

ರಷ್ಯಾದಲ್ಲಿ ನಾಲ್ಕು ವರ್ಷಗಳ ಹಿಂದೆ ನಡೆದಿದ್ದ ಟೂರ್ನಿಯ 16ರ ಘಟ್ಟದ ಪಂದ್ಯದಲ್ಲಿ ಫ್ರಾನ್ಸ್ 4-3 ರಲ್ಲಿ ಅರ್ಜೆಂಟೀನಾ ತಂಡವನ್ನು ಮಣಿಸಿತ್ತು. ಆ ಸೋಲಿಗೆ ಮುಯ್ಯಿ ತೀರಿಸಲು ಅರ್ಜೆಂಟೀನಾ ಪ್ರಯತ್ನಿಸಲಿದೆ.

'ಫೈನಲ್ ಪ್ರವೇಶಿಸಲು ಸಾಧ್ಯವಾಗಿರುವುದಕ್ಕೆ ತಂಡದ ಆಟಗಾರರ ಬಗ್ಗೆ ಹೆಮ್ಮೆಯಿದೆ. ಸೆಮಿಫೈನಲ್‌ನಲ್ಲಿ ಗೆಲುವು ಸುಲಭದ್ದಾಗಿರಲಿಲ್ಲ' ಎಂದು ದೆಶಾಂಪ್ ಹೇಳಿದ್ದಾರೆ.

'ಉತ್ತಮ ಗುಣಮಟ್ಟದ ಆಟ, ಅನುಭವ ಮತ್ತು ಒಗ್ಗಟ್ಟಿನ ಹೋರಾಟ ನಮಗೆ ಅಗತ್ಯವಿತ್ತು. ಕಠಿಣ ಸಂದರ್ಭಗಳನ್ನು ನಮ್ಮ ಆಟಗಾರರು ಛಲದಿಂದ ಎದುರಿಸಿ ನಿಂತರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ಯಾರಿಸ್‌ನಲ್ಲಿ ಸಂಭ್ರಮ

ಪ್ಯಾರಿಸ್ (ರಾಯಿಟರ್ಸ್): ಸೆಮಿಫೈನಲ್‌ನಲ್ಲಿ ಫ್ರಾನ್ಸ್ ತಂಡ ಗೆಲುವು ಸಾಧಿಸುತ್ತಿದ್ದಂತೆಯೇ ಪ್ಯಾರಿಸ್‌ನಲ್ಲಿ ಸಾವಿರಾರು ಅಭಿಮಾನಿಗಳು ಸಂಭ್ರಮಿಸಿದರು.

ನಗರದ ಪ್ರಮುಖ ವೃತ್ತಗಳು ಮತ್ತು ರಸ್ತೆಗಳಲ್ಲಿ ಫುಟ್‌ಬಾಲ್ ಪ್ರೇಮಿಗಳು ಹಾಡು, ನೃತ್ಯದ ಮೂಲಕ ಸಂತಸಪಟ್ಟರು. ಯುವಕ-ಯುವತಿಯರು ವಾಹನಗಳಲ್ಲಿ ಹಾರ್ನ್ ಹಾಕುತ್ತಾ ಸಾಗಿದರು. ಪಟಾಕಿ ಸಿಡಿಸಿ ಸಂಭ್ರಮಪಟ್ಟರು. ನಗರದ ಹಲವೆಡೆ ದೊಡ್ಡ ಪರದೆಯಲ್ಲಿ ಪಂದ್ಯ ವೀಕ್ಷಿಸಲು ಸೌಲಭ್ಯ ಕಲ್ಪಿಸಲಾಗಿತ್ತು.

ಕುಲದೀಪ್ ಆಟ, ಬಾಂಗ್ಲಾ ಪರದಾಟ

ಟೆಸ್ಟ್ ಕ್ರಿಕೆಟ್: ಅಶ್ವಿನ್ ಅರ್ಧಶತಕ; ಮೊಹಮ್ಮದ್ ಸಿರಾಜ್‌ಗೆ ಮೂರು ವಿಕೆಟ್



ಭಾರತ ತಂಡದ ಕುಲದೀಪ್ ಯಾದವ್ ಬ್ಯಾಟಿಂಗ್ —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು
- ಎರಡನೇ ದಿನದಾಟದಲ್ಲಿ ಮಿಂಚಿದ ಭಾರತದ ಬೌಲರ್‌ಗಳು
- ಶತಕದ ಸನಿಹ ಎಡವಿದ ಶ್ರೇಯಸ್ ಅಯ್ಯರ್

ಚಟ್ಟೋಗ್ರಾಮ್ (ಪಿಟಿಐ): ಕುಲದೀಪ್ ಯಾದವ್ ಆಲ್‌ರೌಂಡ್ ಆಟದಿಂದಾಗಿ ಭಾರತ ತಂಡವು ಬಾಂಗ್ಲಾದೇಶ ಎದುರಿನ ಟೆಸ್ಟ್ ಪಂದ್ಯದ ಮೇಲೆ ಬಿಗಿಹಿಡಿತ ಸಾಧಿಸಿದೆ.

22 ತಿಂಗಳುಗಳ ನಂತರ ಟೆಸ್ಟ್ ಕ್ರಿಕೆಟ್‌ಗೆ ಮರಳಿರುವ ಕುಲದೀಪ್, ಬುಧವಾರವಷ್ಟೇ ತಮ್ಮ 28ನೇ ಜನ್ಮದಿನ ಆಚರಿಸಿಕೊಂಡಿದ್ದರು. ಗುರುವಾರ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಮಿಂಚಿದರು. ಒಂಬತ್ತನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಕುಲದೀಪ್ 114 ಎಸೆತಗಳಲ್ಲಿ 40 ರನ್ ಗಳಿಸಿದರು. ಅದರಲ್ಲಿ ಐದು ಬೌಂಡರಿಗಳಿದ್ದವು. ಅಲ್ಲದೇ ಅನುಭವಿ ಆಲ್‌ರೌಂಡರ್ ಆರ್. ಅಶ್ವಿನ್ (58; 113ಎಸೆತ) ಅವರೊಂದಿಗೆ ಎಂಟನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು. ಇದರಿಂದಾಗಿ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 404 ರನ್ ಗಳಿಸಿತು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡದ ಬ್ಯಾಟರ್‌ಗಳಿಗೂ ಕುಲದೀಪ್ ಸಿಂಹಸ್ವಪ್ನವಾದರು. 25ನೇ ಓವರ್‌ನಲ್ಲಿ ಅವರ ಕೈಗೆ ಚೆಂಡು ನೀಡಿದ ನಾಯಕ ರಾಹುಲ್ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಯಶಸ್ಸನ್ನು ಎಡಗೈ ಸ್ಪಿನ್ನರ್ ಕುಲದೀಪ್ (10-3-33-4) ತಂದುಕೊಟ್ಟರು. ಎರಡನೇ ದಿನದಾಟದ ಮುಕ್ತಾಯಕ್ಕೆ, ಬಾಂಗ್ಲಾ ತಂಡವು 44 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 133 ರನ್ ಗಳಿಸಿದೆ. ಫಾಲೋ ಆನ್ ತಪ್ಪಿಸಿಕೊಳ್ಳಬೇಕಾದರೆ ಬಾಂಗ್ಲಾ ತಂಡಕ್ಕೆ ಇನ್ನೂ 72 ರನ್‌ಗಳ ಅವಶ್ಯಕತೆ ಇದೆ.

ಸಿರಾಜ್ ಕೊಟ್ಟ ಪೆಟ್ಟು: ಬಾಂಗ್ಲಾದೇಶ ತಂಡಕ್ಕೆ ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಭಾರತದ ವೇಗಿ ಮೊಹಮ್ಮದ್ ಸಿರಾಜ್ ಆಘಾತ ನೀಡಿದರು. ಸಿರಾಜ್ ಎಸೆತವನ್ನು ಆಡಲು ಯತ್ನಿಸಿದ ನಜ್ಮುಲ್ ಹುಸೇನ್ ಶಾಂತೊ ವಿಕೆಟ್‌ಕೀಪರ್ ರಿಷಭ್ ಪಂತ್‌ಗೆ ಕ್ಯಾಚಿತ್ತರು. 14ನೇ ಓವರ್‌ನಲ್ಲಿ ಲಿಟನ್ ದಾಸ್ ಹಾಗೂ 18ನೇ ಓವರ್‌ನಲ್ಲಿ ಝಾಕೀರ್ ಹಸನ್ ವಿಕೆಟ್‌ಗಳನ್ನೂ ಸಿರಾಜ್ ಉರುಳಿಸಿದರು. ಈ ನಡುವೆ ಉಮೇಶ್ ಯಾದವ್ ಬೌಲಿಂಗ್‌ನಲ್ಲಿ ಯಾಸೀರ್ ಅಲಿ ಕ್ಲೀನ್‌ಬೌಲ್ಡ್ ಆದರು.

ಅಶ್ವಿನ್ ಅರ್ಧಶತಕ: ಪಂದ್ಯದ ಮೊದಲ ದಿನದಾಟದಲ್ಲಿ ಭಾರತ ತಂಡವು 44 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 278 ರನ್ ಗಳಿಸಿತು. ಎರಡನೇ ದಿನ ಬೆಳಿಗ್ಗೆ ಶ್ರೇಯಸ್ ಅಯ್ಯರ್ (86) ಶತಕ ಪೂರೈಸುವ ಆಸೆ ಈಡೇರಲಿಲ್ಲ. ಅವರು ಔಟಾದ ನಂತರ ಇನಿಂಗ್ಸ್‌ಗೆ ಅಶ್ವಿನ್ ಅರ್ಧಶತಕ ಬಲ ತುಂಬಿತು. ಇದರಿಂದಾಗಿ ತಂಡದ ಮೊತ್ತವು 400ರ ಗಡಿ ದಾಟಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 133.5 ಓವರ್‌ಗಳಲ್ಲಿ 404 (ಶ್ರೇಯಸ್ ಅಯ್ಯರ್ 86, ಆರ್. ಅಶ್ವಿನ್ 58, ಕುಲದೀಪ್ ಯಾದವ್ 40, ಉಮೇಶ್ ಯಾದವ್ ಔಟಾಗದೆ 15, ತೈಜುಲ್ ಇಸ್ಲಾಂ 133ಕ್ಕೆ4, ಮೆಹದಿ ಹಸನ್ ಮಿರಾಜ್ 112ಕ್ಕೆ4) ಬಾಂಗ್ಲಾದೇಶ: 44 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 133 (ಝಾಕೀರ್ ಹಸನ್ 20, ಲಿಟನ್ ದಾಸ್ 24, ಮುಷ್ಫಿಕುರ್ ರಹೀಮ್ 28, ಮೊಹಮ್ಮದ್ ಸಿರಾಜ್ 14ಕ್ಕೆ3, ಕುಲದೀಪ್ ಯಾದವ್ 33ಕ್ಕೆ4)

ಅಂಧರ ಟಿ20 ವಿಶ್ವಕಪ್: ದ.ಆಫ್ರಿಕಾ ವಿರುದ್ಧ ಜಯ

ಪ್ರಶಸ್ತಿಗೆ ಭಾರತ– ಬಾಂಗ್ಲಾ ಸೆಣಸು

ಪ್ರಜಾವಾಣಿ ವಾರ್ತೆ



ಶತಕ ಗಳಿಸಿದ ಸುನಿಲ್ ರಮೇಶ್

ಬೆಂಗಳೂರು: ಸುನಿಲ್ ರಮೇಶ್ ಗಳಿಸಿದ ಶತಕ ಹಾಗೂ ಅಜಯ್‌ಕುಮಾರ್ ರೆಡ್ಡಿ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ತಂಡದವರು ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಥಣಿಸಂದ್ರದ ಸಂಪ್ರಸಿದ್ಧಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಫೈನಲ್‌ನಲ್ಲಿ ಭಾರತ 207 ರನ್‌ಗಳಿಂದ ದಕ್ಷಿಣ ಆಫ್ರಿಕಾ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 337 ರನ್ ಪೇರಿಸಿತು. ಸುನಿಲ್ 110 ಹಾಗೂ ಅಜಯ್ 81 ರನ್ ಗಳಿಸಿದರು.

ಕಠಿಣ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 19.5 ಓವರ್‌ಗಳಲ್ಲಿ 130 ರನ್‌ಗಳಿಗೆ ಆಲೌಟಾಯಿತು. ಅಜಯ್ ಕುಮಾರ್ ಮೂರು ವಿಕೆಟ್ ಪಡೆದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡ ಬಾಂಗ್ಲಾದೇಶದ ಸವಾಲು ಎದುರಿಸಲಿದೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಬಾಂಗ್ಲಾ ತಂಡ 64 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 337 (ಸುನಿಲ್ ರಮೇಶ್ 110, ಅಜಯ್ ಕುಮಾರ್ ರೆಡ್ಡಿ 81. ಪ್ರಕಾಶ್ ಜಯರಾಮಯ್ಯ ಔಟಾಗದೆ 22, ಐಸಾಕ್ ಅಸಂದಾ 53ಕ್ಕೆ 1) ದಕ್ಷಿಣ ಆಫ್ರಿಕಾ 19.5 ಓವರ್‌ಗಳಲ್ಲಿ 130 (ಭುಲ್ ಬಿಂಡ್ಲಾ 33, ಅಜಯ್ ಕುಮಾರ್ ರೆಡ್ಡಿ 13ಕ್ಕೆ 3, ಪ್ರವೀಣ್ ಕುಮಾರ್ 10ಕ್ಕೆ 1, ಸುನಿಲ್ ರಮೇಶ್ 15ಕ್ಕೆ 1) ಫಲಿತಾಂಶ: ಭಾರತಕ್ಕೆ 207 ರನ್ ಗೆಲುವು


ಬಾಂಗ್ಲಾದೇಶ: 17 ಓವರ್‌ಗಳಲ್ಲಿ 3 ವಿಕೆಟ್‌ಗೆ 188 (ಆಶಿಕುರ್ ರೆಹಮಾನ್ 70, ಸಲ್ಮಾನ್ 61, ಸಹನ್ ಕುಮಾರ 47ಕ್ಕೆ 1) ಶ್ರೀಲಂಕಾ 14.3 ಓವರ್‌ಗಳಲ್ಲಿ 124 (ರುವಾನ್ ವಸಂತ 24, ಸುರಂಗ ಸಂಪತ್ 20, ಆಶಿಕುರ್ ರೆಹಮಾನ್ 20ಕ್ಕೆ 2) ಫಲಿತಾಂಶ: ಬಾಂಗ್ಲಾಕ್ಕೆ 64 ರನ್ ಗೆಲುವು

ಬೆಕರ್ ಬಿಡುಗಡೆ

ಲಂಡನ್ (ಎಎಫ್‌ಪಿ): ಆಸ್ತಿ ವಿವರ ಮುಚ್ಚಿಟ್ಟು ದಿವಾಳಿಯಾಗಿರುವುದಾಗಿ ಸುಳ್ಳು ಮಾಹಿತಿ ನೀಡಿದ ಪ್ರಕರಣದಲ್ಲಿ ಜೈಲು ಸೇರಿದ್ದ ಮಾಜಿ ಟೆನಿಸ್ ಆಟಗಾರ ಬೋರಿಸ್ ಬೆಕರ್ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಬ್ರಿಟನ್‌ನ ಮಾಧ್ಯಮಗಳು ವರದಿ ಮಾಡಿವೆ.

ಅವರನ್ನು ಬ್ರಿಟನ್‌ನಿಂದ ಗಡಿಪಾರು ಮಾಡಲಾಗುವುದು ಎಂದು ಹೇಳಿದೆ. ಬೆಕರ್, ಸಾಲ ಮರುಪಾವತಿ ತಪ್ಪಿಸಲು ಸುಮಾರು ₹ 25 ಕೋಟಿ ಮೊತ್ತದ ಆಸ್ತಿಯ ವಿವರ ಮುಚ್ಚಿಟ್ಟಿದ್ದರು. ಏಪ್ರಿಲ್‌ನಲ್ಲಿ ಅವರು ಎರಡೂವರೆ ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದರು.

ಪ್ರೊ ಕಬಡ್ಡಿ: ಬೆಂಗಳೂರು ಬುಲ್ಸ್ ಕನಸು ಭಗ್ನ



ಪ್ಯಾಂಥರ್ಸ್– ಬೆಂಗಳೂರು ಬುಲ್ಸ್ ಆಟಗಾರರ ಪೈಪೋಟಿ

ಮುಂಬೈ: ಈ ಬಾರಿಯ ಪ್ರೊ ಕಬಡ್ಡಿ ಟೂರ್ನಿಯ ಫೈನಲ್ ಪ್ರವೇಶಿಸುವ ಬೆಂಗಳೂರು ಬುಲ್ಸ್ ತಂಡದ ಕನಸು ಭಗ್ನವಾಯಿತು.

ಇದೇ 17ರಂದು ನಡೆಯಲಿರುವ ಪ್ರಶಸ್ತಿಯ ಸುತ್ತಿನ ಪಂದ್ಯದಲ್ಲಿ ಜೈಪುರ್ ಪಿಂಕ್ ಪ್ಯಾಂಥರ್ಸ್ ಮತ್ತು ಪುಣೇರಿ ಪಲ್ಟನ್ ಮುಖಾಮುಖಿಯಾಗಲಿವೆ.

ಸರ್ದಾರ್ ವಲ್ಲಭಭಾಯ್ ಪಟೇಲ್ ಒಳಾಂಗಣದಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಜೈಪುರ್ ಪಿಂಕ್ ಪ್ಯಾಂಥಡರ್ಸ್ 49-29ರಿಂದ ಬೆಂಗಳೂರು ತಂಡವನ್ನು ಮಣಿಸಿತು.

ಅಜಿತ್ ಕುಮಾರ್ (13 ಅಂಕ) ಅವರ ಅಮೋಘ ದಾಳಿಯಿಂದಾಗಿ ಪಿಂಕ್ ಪ್ಯಾಂಥರ್ಸ್ ತಂಡವು ಪಾರಮ್ಯ ಮೆರೆಯಿತು. ತಂಡದ ಶಾಲ್ ಕುಮಾರ್ 10 ಅಂಕ ಗಳಿಸಿದರು.

ಆದರೆ ಬೆಂಗಳೂರು ತಂಡವು ದಿಟ್ಟ ತಿರುಗೇಟು ನೀಡುವಲ್ಲಿ ವಿಫಲವಾಯಿತು. ಪ್ರಥಮಾರ್ಧದಲ್ಲಿ ಪ್ಯಾಂಥರ್ಸ್ ತಂಡವು 24-15ರಿಂದ ಮುನ್ನಡೆ ಸಾಧಿಸಿತು. ವಿರಾಮದ ನಂತರವೂ ಬಿಗಿಹಿಡಿತ ಸಾಧಿಸಿತು.

ಬುಲ್ಸ್ ತಂಡದ ವಿಕಾಶ್ ಖಂಡೋಲಾ (5) ಮತ್ತು ಭರತ್ (7) ಅವರ ಪ್ರಯತ್ನ ಸಾಕಾಗಲಿಲ್ಲ.

ಪುಣೇರಿಗೆ ರೋಚಕ ಜಯ: ಇನ್ನೊಂದು ರೋಚಕ ಸೆಮಿಫೈನಲ್‌ನಲ್ಲಿ ಪುಣೇರಿ ಪಲ್ಟನ್ ತಂಡವು 39-37ರಿಂದ ತಮಿಳ್ ತಲೈವಾಸ್ ತಂಡಕ್ಕೆ ಸೋಲುಣಿಸಿತು.

ಮಯಂಕ್ ಬಳಗಕ್ಕೆ ಇನಿಂಗ್ಸ್ ಮುನ್ನಡೆ

ರಣಜಿ: ರಜತ್ ಶತಕ, ಕ್ಯಾಚ್‌ಗಳನ್ನು ಕೈಚೆಲ್ಲಿದ ಆತಿಥೇಯ ಫೀಲ್ಡರ್‌ಗಳು

• ಗಿರೀಶ ದೊಡ್ಡಮನಿ





ಶತಕ ಸಂಭ್ರಮದಲ್ಲಿ ಸರ್ವಿಸಸ್ ತಂಡದ ರಜತ್ ಪಲೀವಾಲ (ಎಡ) ಮೂರು ವಿಕೆಟ್ ಪಡೆದ ರೋನಿತ್ ಮೋರೆ —ಪ್ರಜಾವಾಣಿ ಚಿತ್ರಗಳು / ಎಸ್.ಕೆ. ದಿನೇಶ್

ಬೆಂಗಳೂರು: ಗುರುವಾರ ದಿನದಾಟದ ಮೊದಲ ಎಸೆತದಲ್ಲಿಯೇ 'ಜೀವದಾನ' ಪಡೆದ ಸರ್ವಿಸಸ್ ತಂಡದ ರಜತ್ ಪಲೀವಾಲ ಕರ್ನಾಟಕದ ದೊಡ್ಡ ಮುನ್ನಡೆಯ ಅವಕಾಶವನ್ನು ಕಸಿದುಕೊಂಡರು. ಜೊತೆಗೆ ಸುಂದರ ಶತಕವನ್ನೂ ದಾಖಲಿಸಿದರು.

ಆದರೂ ಮಯಂಕ್ ಅಗರವಾಲ್ ಬಳಗವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 43 ರನ್‌ಗಳ ಅಲ್ಪ ಮುನ್ನಡೆ ಗಳಿಸಿತು.

ಕರ್ನಾಟಕವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 304 ರನ್‌ಗಳ ಮೊತ್ತ ಬೆನ್ನಟ್ಟಿದ್ದ ಸರ್ವಿಸಸ್ ತಂಡಕ್ಕೆ 83.2 ಓವರ್‌ಗಳಲ್ಲಿ 261 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಎರಡನೇ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡವು 'ಮಂದಬೆಳಕಿನ ಕಾರಣ'ಕ್ಕೆ ಆಟ ಸ್ಥಗಿತವಾದಾಗ 25 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 90 ರನ್ ಗಳಿಸಿದೆ. ಆರ್. ಸಮರ್ಥ್ (ಬ್ಯಾಟಿಂಗ್ 40) ಹಾಗೂ ಮಯಂಕ್ ಅಗರವಾಲ್ (ಬ್ಯಾಟಿಂಗ್ 47) ಕ್ರೀಸ್‌ನಲ್ಲಿದ್ದಾರೆ. ತಂಡವು ಒಟ್ಟು 133 ರನ್‌ಗಳ ಮುನ್ನಡೆಯಲ್ಲಿದೆ.

ಪಂದ್ಯದಲ್ಲಿ ಇನ್ನೊಂದು ದಿನ ಉಳಿದಿದೆ. ಕರ್ನಾಟಕ ತಂಡವು ಎದುರಾಳಿ ತಂಡಕ್ಕೆ ಕಠಿಣ ಗುರಿಯೊಡ್ಡಿ ಜಯಿಸಲು ಸಮಯಾವಕಾಶ ಕಡಿಮೆ ಇದೆ. ಇದರಿಂದಾಗಿ ಡ್ರಾ ಆಗುವ ಸಾಧ್ಯತೆಯೇ ಹೆಚ್ಚಿದೆ.

ಕೈಚೆಲ್ಲಿದ ಕ್ಯಾಚ್‌ಗಳು; ರಜತ್ ಶತಕ: ಬುಧವಾರ ದಿನದಾಟದ ಮುಕ್ತಾಯಕ್ಕೆ ಸರ್ವಿಸಸ್ ತಂಡವು 4 ವಿಕೆಟ್‌ಗಳ ನಷ್ಟಕ್ಕೆ ಗಳಿಸಿದ್ದ 96 ರನ್‌ಗಳಿಗೆ, ಮೂರನೇ ದಿನ 165 ರನ್‌ಗಳನ್ನು ಸೇರಿಸಲು ಕರ್ನಾಟಕ ತಂಡದ ಕಳಪೆ ಫೀಲ್ಡಿಂಗ್ ಕಾರಣವಾಯಿತು. ಒಟ್ಟು ನಾಲ್ಕು ಕ್ಯಾಚ್‌ಗಳು ಮಣ್ಣುಪಾಲಾದವು.

ರೋನಿತ್ ಮೋರೆ ಹಾಕಿದ ದಿನದ ಮೊದಲ ಓವರ್‌ನಲ್ಲಿಯೇ ಪ್ರಥಮ ಸ್ಲಿಪ್ ಫೀಲ್ಡರ್ ವಿಶಾಲ್ ಒನತ್ ಅವರು ರಜತ್ ಕ್ಯಾಚ್ ಕೈಚೆಲ್ಲಿದರು. ಆಗ ರಜತ್ 42 ರನ್ ಗಳಿಸಿದ್ದರು. ರಜತ್ 93 ರನ್ ಗಳಿಸಿದ ಸಂದರ್ಭದಲ್ಲಿಯೂ ಒಂದು ಜೀವದಾನ ಸಿಕ್ಕಿತು. ಈ ಬಾರಿ ತುಸು ಕಷ್ಟದ ಕ್ಯಾಚ್ ಅದಾಗಿತ್ತು. ಗೌತಮ್ ಬೌಲಿಂಗ್‌ನಲ್ಲಿ ರಜತ್ ಸ್ವೀಪ್ ಆಡುವ ಪ್ರಯತ್ನ ಮಾಡಿದರು. ಆಗ ಬ್ಯಾಟ್‌ಗೆ ತಗುಲಿದ ಚೆಂಡು ವೇಗವಾಗಿ ಚಿಮ್ಮಿತು. ತಮ್ಮಿಂದ ಸ್ವಲ್ಪ ದೂರದಲ್ಲಿ ಸಾಗುತ್ತಿದ್ದ ಚೆಂಡು ಹಿಡಿಯಲು ಶಾರ್ಟ್ ಲೆಗ್‌ನಲ್ಲಿದ್ದ ವಿಶಾಲ್ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ರಜತ್ ತಾವೆದುರಿಸಿದ 162ನೇ ಎಸೆತದಲ್ಲಿ ಶತಕದ ಗಡಿ ದಾಟಿದರು. 220 ನಿಮಿಷ ಬ್ಯಾಟಿಂಗ್ ಮಾಡಿ ಈ ಸಾಧನೆ ಮಾಡಿದರು. ಅದರಲ್ಲಿ 12 ಬೌಂಡರಿಗಳೂ ಸೇರಿದ್ದವು. ಅವರು, ಶ್ರೇಯಸ್ ಗೋಪಾಲ್ ಎಸೆತದಲ್ಲಿ ನಿಕಿನ್ ಜೋಸ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ರಜತ್ ಜೊತೆಗೆ ಎರಡನೇ ದಿನ ಕ್ರೀಸ್‌ನಲ್ಲಿ ಉಳಿದಿದ್ದ ರವಿ ಚೌಹಾಣ್ (56 ರನ್) ಅರ್ಧಶತಕ ಗಳಿಸಿದರು. ಅವರು49 ರನ್ ಗಳಿಸಿದ್ದ ಸಂದರ್ಭದಲ್ಲಿ ವಿಕೆಟ್‌ಕೀಪರ್ ಶರತ್ ಸುಲಭ ಕ್ಯಾಚ್ ಕೈಚೆಲ್ಲಿದರು. ಊಟದ ನಂತರದ ಅವಧಿಯಲ್ಲಿ ಹೊಸ ಚೆಂಡು ಪಡೆದ ವಿದ್ವತ್ ಹಾಕಿದ ಎಸೆತದಲ್ಲಿ ದಿವೇಶ್ ಎತ್ತರಕ್ಕೆ ಹೊಡೆದ ಚೆಂಡನ್ನು ಹಿಡಿತಕ್ಕೆ ಪಡೆಯುವಲ್ಲಿ ಕವರ್ಸ್‌ನಲ್ಲಿದ್ದ ಮಯಂಕ್ ವಿಫಲರಾದರು. ಸ್ವಲ್ಪ ಹೊತ್ತಿನ ನಂತರ ರೋನಿತ್ ಎಸೆತದಲ್ಲಿ ದಿವೇಶ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ರಾಹುಲ್ ಮತ್ತು ನಿಶಾನ್ ಸಿಂಗ್ ಅವರ ವಿಕೆಟ್‌ಗಳನ್ನೂ ರೋನಿತ್ ಪಡೆದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಕರ್ನಾಟಕ 304 (74.4 ಓವರ್‌ಗಳಲ್ಲಿ)
ಸರ್ವಿಸಸ್ 261 (83.2 ಓವರ್‌ಗಳಲ್ಲಿ)
ರವಿ ಸಿ ಮಯಂಕ್ ಬಿ ಗೌತಮ್ 56 (99ಎ, 4X8)
ರಜತ್ ಸಿ ನಿಕಿನ್ ಬಿ ಶ್ರೇಯಸ್ 124 (217ಎ, 4X14)
ರಾಹುಲ್ ಸಿ ಶರತ್ ಬಿ ರೋನಿತ್ 36
ದಿವೇಶ್ ಎಲ್‌ಬಿಡಬ್ಲ್ಯು ರೋನಿತ್ 11
ಅರ್ಪಿತ್ ಔಟಾಗದೆ 7 (7ಎ, 4X1)
ನಿಶಾನ್ ಬಿ ರೋನಿತ್ 0(1ಎ)
ಇತರೆ: 3 (ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 5-134 (ರವಿ ಚೌಹಾಣ 37.2), 6-157 (ಪುಳ್ಕಿತ್ ನಾರಂಗ್; 46.4), 7-237 (ರಜತ್ ಪಲೀವಾಲ; 76.5), 8-252 (ದಿವೇಶ್ ಗುರುದೇವ್ ಪಠಾಣಿಯಾ; 81.1), 9-261 (ರಾಹುಲ್ ಸಿಂಗ್; 83.1), 10-261 (ನಿಶಾನ್ ಸಿಂಗ್; 83.2)
ಬೌಲಿಂಗ್: ವಿದ್ವತ್ ಕಾವೇರಪ್ಪ 21-4-64-4, ವಿ. ವೈಶಾಖ 16-1-63-1, ರೋನಿತ್ ಮೋರೆ 16.2-3-54-3, ಕೆ. ಗೌತಮ್ 19-2-39-1, ಶ್ರೇಯಸ್ ಗೋಪಾಲ್ 11-1-39-1
ಎರಡನೇ ಇನಿಂಗ್ಸ್: ಕರ್ನಾಟಕ ವಿಕೆಟ್ ನಷ್ಟವಿಲ್ಲದೇ 90 (25 ಓವರ್‌ಗಳಲ್ಲಿ)
ಸಮರ್ಥ್ ಬ್ಯಾಟಿಂಗ್ 40 (82ಎ, 4X5)
ಮಯಂಕ್ ಬ್ಯಾಟಿಂಗ್ 47 (69ಎ, 4X5)
ಇತರೆ: 3(ಬೈ 1, ವೈಡ್ 1, ನೋಬಾಲ್ 1)
ಬೌಲಿಂಗ್: ದಿವೇಶ್ ಪಠಾಣಿಯಾ 5-0-31-0, ನಿಶಾನ್ ಸಿಂಗ್ 5-2-0-7-0, ಅರ್ಪಿತ್ ಗುಲೇರಿಯಾ 7-1-24-0, ಪುಳ್ಕಿತ್ ನಾರಂಗ್ 8-1-27-0

ಬೆಂಗಳೂರು ರೇಸ್: ವೂಲ್ಫ್ 777 ಪ್ರಾಯೋಜಕತ್ವ

ಬೆಂಗಳೂರು: ಆನ್‌ಲೈನ್ ಗೇಮಿಂಗ್ ಕಂಪೆನಿ 'ವೂಲ್ಫ್ 777', ಬೆಂಗಳೂರು ಚಳಿಗಾಲದ ರೇಸ್‌ಗಳ 4ರೇಸ್‌ಗಳಿಗೆ ಪ್ರಾಯೋಜಕತ್ವ ವಹಿಸಿಕೊಂಡಿದೆ.

ಡಿ.16ರ ಬೆಂಗಳೂರು 1000 ಗಿನ್ನೀಸ್, ಡಿ.17ರ ಬೆಂಗಳೂರು 2000 ಗಿನ್ನೀಸ್, ಜ.7ರ ಬೆಂಗಳೂರು ಓಕ್ಸ್ ಮತ್ತು ಜ.26ರ ಬೆಂಗಳೂರು ಡರ್ಬಿ ರೇಸ್‌ಗಳಿಗೆ 'ವೂಲ್ಫ್ 777' ಪ್ರಾಯೋಜಕತ್ವ ವಹಿಸಿಕೊಂಡಿದೆ.

'ಇಂದಿನ ದಿನಗಳಲ್ಲಿ ಪ್ರಾಯೋಜಕರನ್ನು ಹುಡುಕುವುದು ಕಷ್ಟ. ವೂಲ್ಫ್ ಕಂಪನಿ ನಾಲ್ಕು ರೇಸ್‌ಗಳಿಗೆ ನಮ್ಮ ಜತೆ ಕೈಜೋಡಿಸಿರುವುದು ಸಂತಸದ ವಿಷಯ' ಎಂದು ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಶಿವಕುಮಾರ್ ಖೇಣಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವೂಲ್ಫ್ ಕಂಪೆನಿ ಮನರಂಜನೆ ಮತ್ತು ಆನ್‌ಲೈನ್ ಗೇಮಿಂಗ್‌ಗೆ ಹೆಸರು ಪಡೆದಿದೆ. ಪುಣೆ ಮತ್ತು ಕೋಲ್ಕತ್ತದಲ್ಲಿ ನಡೆದ ಕೆಲವು ರೇಸ್‌ಗಳಿಗೂ ಪ್ರಾಯೋಜಕತ್ವ ವಹಿಸಿದೆ' ಎಂದು ಹೇಳಿದರು.

ದಕ್ಷಿಣ ವಲಯ ಹಾಕಿ ಟೂರ್ನಿ: ಬೆಂಗಳೂರು ನಗರ ವಿ.ವಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡದವರು ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿ.ವಿ ಹಾಕಿ ಟೂರ್ನಿಯಲ್ಲಿ ಗೆಲುವು ಪಡೆದರು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಗುರುವಾರ ನಡೆದ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ನಗರ ವಿ.ವಿ 3-2 ಗೋಲುಗಳಿಂದ ಬೆಂಗಳೂರು ವಿ.ವಿ ತಂಡವನ್ನು ಮಣಿಸಿತು.

ಗಣೇಶ್, ಚಿರನ್ ಮೇದಪ್ಪ ಮತ್ತು ಪ್ರಣಾಮ್ ಗೌಡ ಅವರು ನಗರ ವಿ.ವಿ ಪರ ಗೋಲು ಗಳಿಸಿದರು. ಬೆಂಗಳೂರು ವಿ.ವಿ ತಂಡಕ್ಕೆ ಯತೀಶ್ ಕುಮಾರ್ ಹಾಗೂ ಎನ್.ಎಂ.ಸೂರ್ಯ ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಎಂ.ಎಸ್. ವಿ.ವಿ ತಂಡ 3-1 ಗೋಲುಗಳಿಂದ ಎಸ್‌ಆರ್‌ಎಂ ವಿ.ವಿ ತಂಡವನ್ನು ಸೋಲಿಸಿತು.